ಶುಕ್ರವಾರ, ಏಪ್ರಿಲ್ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 92 | ಪುಟ 18

prajavani.net prajavani · www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 73,319 | ನಿಫ್ಟಿ 22,713 | $/₹ 93.18 | ಚಿನ್ನ (Std. 10g) ₹1,55,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,44,100 (ಬೆಂಗಳೂರು)



ಬಾಲ ಹನುಮ... ತೆಲಂಗಾಣದ ಹೈದರಾಬಾದ್‌ನಲ್ಲಿ 'ಹನುಮ ಜಯಂತಿ' ಅಂಗವಾಗಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಹನುಮನ ವೇಷ ತೊಟ್ಟಿದ್ದ ಪುಟ್ಟ ಬಾಲಕ

ಬಂಗಾಳ ಸರ್ಕಾರಕ್ಕೆ 'ಸುಪ್ರೀಂ' ತಪರಾಕಿ

ನ್ಯಾಯಾಂಗದ ಅಧಿಕಾರಿಗಳನ್ನು ಕೂಡಿಹಾಕಿದ ಪ್ರಕರಣ: ಆಡಳಿತದ ನಿಷ್ಕ್ರಿಯತೆಗೆ ಪೀಠ 'ಗರಂ'

ನವದೆಹಲಿ/ ಕೋಲ್ಕತ್ತ (ಪಿಟಿಐ): ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ತೊಡಗಿದ್ದ ನ್ಯಾಯಾಂಗದ ಏಳು ಅಧಿಕಾರಿಗಳನ್ನು ಕೂಡಿಹಾಕಿದ ಘಟನೆಗೆ ಸಂಬಂಧಿಸಿದಂತೆ ನಿಷ್ಕ್ರಿಯತೆ ತೋರಿದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

'ಈ ಘಟನೆಯು ರಾಜ್ಯದ ಆಡಳಿತದ ಸಂಪೂರ್ಣ ವೈಫಲ್ಯವನ್ನು ಎತ್ತಿ ತೋರಿಸಿದೆ' ಎಂದು ಹೇಳಿರುವ ಪೀಠ, ಪಶ್ಚಿಮ ಬಂಗಾಳವು 'ಅತಿಹೆಚ್ಚು ಧ್ರುವೀಕರಣಗೊಂಡಿರುವ ರಾಜ್ಯ' ಎಂದು ಚಾಟಿ ಬೀಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ.ಪಂಚೋಲಿ ಅವರ ಪೀಠ, ಘಟನೆ ಬಗ್ಗೆ ಸಿಬಿಐ ಅಥವಾ ಎನ್‌ಐಎಯಿಂದ ಸ್ವತಂತ್ರ ತನಿಖೆಗೆ ಆದೇಶಿಸಿದೆ.

ಎನ್‌ಐಎ ತನಿಖೆ: ಇದರ ಬೆನ್ನಲ್ಲೇ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಘಟನೆಯ ತನಿಖೆಯನ್ನು ಎನ್‌ಐಎಗೆ ಹಸ್ತಾಂತರಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿರುವ ಮಾಲ್ಡಾ ಪೊಲೀಸರು, 17 ಮಂದಿಯನ್ನು ಬಂಧಿಸಿದ್ದಾರೆ.

ಭದ್ರತೆ ಒದಗಿಸಿ: ಎಸ್‌ಐಆರ್ ಪ್ರಕ್ರಿಯೆ ಭಾಗವಾಗಿ ನ್ಯಾಯಾಂಗದ ಅಧಿಕಾರಿಗಳು ಮತದಾರರ ಆಕ್ಷೇಪಣೆಗಳನ್ನು ವಿಲೇವಾರಿ ಮಾಡುವ ಸ್ಥಳಗಳಲ್ಲಿ ಭದ್ರತೆಗಾಗಿ ಕೇಂದ್ರೀಯ ಪಡೆಗಳನ್ನು ನಿಯೋಜಿಸುವಂತೆ ಚುನಾವಣಾ ಆಯೋಗಕ್ಕೆ ಕೋರ್ಟ್ ನಿರ್ದೇಶಿಸಿದೆ.

ಬಂಗಾಳ, ಒಡಿಶಾ ಮತ್ತು ಜಾರ್ಖಂಡ್‌ನ ಸುಮಾರು 700 ನ್ಯಾಯಾಂಗ ಅಧಿಕಾರಿಗಳನ್ನು ಬಂಗಾಳದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಗೆ ನಿಯೋಜಿಸಲಾಗಿದೆ. ಮತದಾರರ ಪಟ್ಟಿಯಿಂದ ಹೊರಗುಳಿದ 60 ಲಕ್ಷಕ್ಕೂ ಹೆಚ್ಚು ಮಂದಿಯ ಆಕ್ಷೇಪಣೆಗಳ ವಿಲೇವಾರಿ ಕೆಲಸದಲ್ಲಿ ಇವರು ನಿರತರಾಗಿದ್ದಾರೆ.

'ಕಲ್ಕತ್ತಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಂದ ನಿರ್ದೇಶನ ಬಂದ ಬಳಿಕವೂ ಪ್ರತಿಭಟನಕಾರರ ವಿರುದ್ಧ ಕ್ರಮ ಕೈಗೊಳ್ಳದಿರುವುದರ ಹಿಂದಿನ ಕಾರಣ ವಿವರಿಸಬೇಕು' ಎಂದು ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಮಾಲ್ಡಾ ಜಿಲ್ಲೆಯ ಎಸ್‌ಎಸ್‌ಪಿಗೆ ಪೀಠ ನಿರ್ದೇಶಿಸಿದೆ.

▶15

ಪೀಠ ಹೇಳಿದ್ದು...



- ಇದು ಸಾಮಾನ್ಯ ಪ್ರತಿಭಟನೆಯಲ್ಲ. ಈ ಘಟನೆಯು ನ್ಯಾಯಾಂಗದ ಅಧಿಕಾರಿಗಳ ನೈತಿಕತೆಯನ್ನು ಕುಗ್ಗಿಸಲು ಮತ್ತು ಎಸ್‌ಐಆರ್ ಪ್ರಕ್ರಿಯೆಗೆ ಅಡ್ಡಿಪಡಿಸಲು ನಡೆಸಿರುವ 'ಪೂರ್ವಯೋಜಿತ' ಕೃತ್ಯ
- ನ್ಯಾಯಾಂಗದ ಅಧಿಕಾರಿಗಳನ್ನು ದೂಷಿಸಲು ಮಾತ್ರವಲ್ಲದೆ ಈ ನ್ಯಾಯಾಲಯದ ಅಧಿಕಾರ ಪ್ರಶ್ನಿಸುವ ಪ್ರಯತ್ನ ಇದು

ರಕ್ಷಣೆ ನೀಡಲು ಇ.ಸಿ ವಿಫಲ: ಮಮತಾ

ಮಾಲ್ಡಾ ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ತೊಡಗಿರುವ ನ್ಯಾಯಾಂಗದ ಅಧಿಕಾರಿಗಳಿಗೆ 'ರಕ್ಷಣೆ ನೀಡಲು' ಕೇಂದ್ರ ಚುನಾವಣಾ ಆಯೋಗ (ಇ.ಸಿ) ವಿಫಲವಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.



'ನ್ಯಾಯಾಂಗದ ಅಧಿಕಾರಿಗಳನ್ನು ರಕ್ಷಿಸಲು ವಿಫಲವಾಗಿರುವುದಕ್ಕೆ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಖಂಡಿಸುತ್ತೇನೆ' ಎಂದು ಮುರ್ಶಿದಾಬಾದ್ ಜಿಲ್ಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಅವರು ಹೇಳಿದ್ದಾರೆ. ವಿಧಾನಸಭಾ ಚುನಾವಣೆ ಘೋಷಣೆಯಾದ ನಂತರ ಚುನಾವಣಾ ಆಯೋಗವು ನಾಗರಿಕ ಮತ್ತು ಪೊಲೀಸ್ ಆಡಳಿತದಲ್ಲಿ ತನ್ನದೇ ಆದ ಅಧಿಕಾರಿಗಳನ್ನು ನಿಯೋಜಿಸಿದೆ ಎಂದ ಅವರು, 'ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಆಯೋಗವು ವಿಫಲವಾಗಿದೆ' ಎಂದಿದ್ದಾರೆ.

ಮಾಲ್ಡಾದಲ್ಲಿ ನಡೆದಿದ್ದೇನು?

ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಎಸ್‌ಐಆರ್ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಲು ನಿಯೋಜಿಸಿದ್ದ ನ್ಯಾಯಾಂಗದ ಏಳು ಅಧಿಕಾರಿಗಳನ್ನು ಮತದಾರರು ಬುಧವಾರ ಒಂಬತ್ತು ಗಂಟೆ ಕೂಡಿಹಾಕಿದ್ದಾರೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಮತದಾರರ ಪಟ್ಟಿಯಿಂದ ಹೆಸರು ಅಳಿಸಿದ್ದನ್ನು ಪ್ರಶ್ನಿಸಿದ ಕೆಲವು ಮಂದಿ ಕಲಿಯಾಚೌಕ್‌–2 ತಾಲ್ಲೂಕು ಕಚೇರಿ ಬಳಿ ಬೆಳಿಗ್ಗೆಯಿಂದ ತಡರಾತ್ರಿಯವರೆಗೂ ಪ್ರತಿಭಟನೆ ನಡೆಸಿದ್ದಾರೆ.

'ಪ್ರತಿಭಟನಕಾರರು ಆರಂಭದಲ್ಲಿ ನ್ಯಾಯಾಂಗ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಬಯಸಿದ್ದರು. ಆದರೆ ಅದಕ್ಕೆ ಅವಕಾಶ ನಿರಾಕರಿಸಲಾಯಿತು. ಇದರಿಂದ ಅವರು ಕಚೇರಿಯ ಆವರಣ ಘೇರಾವ್ ಮಾಡಿದ್ದಾರೆ. ಈ ಸಮಯದಲ್ಲಿ ಕಚೇರಿಯೊಳಗೆ ಸಿಲುಕಿಕೊಂಡವರಲ್ಲಿ ಮೂವರು ಮಹಿಳಾ ಅಧಿಕಾರಿಗಳೂ ಮತ್ತು ಐದು ವರ್ಷದ ಒಂದು ಮಗು ಕೂಡಾ ಇತ್ತು' ಎಂದು ಮಾಹಿತಿ ನೀಡಿದ್ದಾರೆ.

ಪೊಲೀಸರು ಮತ್ತು ಅರೆ ಸೇನಾಪಡೆಯ ಸಿಬ್ಬಂದಿ ತಡರಾತ್ರಿ ಎಲ್ಲ ಅಧಿಕಾರಿಗಳನ್ನು ರಕ್ಷಿಸಿ, ಕಚೇರಿಯಿಂದ ಹೊರಗೆ ಕರೆತಂದಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆ 16ರಿಂದ ಅಧಿವೇಶನ



ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿಯನ್ನು ಶೀಘ್ರವಾಗಿ ಜಾರಿಗೆ ತರುವ ಮಸೂದೆಯನ್ನು ಅಂಗೀಕರಿಸಲು ಏಪ್ರಿಲ್ 16ರಿಂದ ಸಂಸತ್ ಅಧಿವೇಶನ ನಡೆಯಲಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ವಿಷಯ ಪ್ರಸ್ತಾಪಿಸಿ, 'ಬಜೆಟ್ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುತ್ತದೆಯೇ ಅಥವಾ ಸ್ವಲ್ಪ ಸಮಯದ ನಂತರ ಮತ್ತೆ ಸಭೆ ಸೇರುವ ಬಗ್ಗೆ ಅಧಿಸೂಚನೆ ಹೊರಡಿಸಲಾಗುತ್ತದೆಯೇ ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು' ಎಂದು ಒತ್ತಾಯಿಸಿದರು. ಆಗ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಏಪ್ರಿಲ್ ಮೂರನೇ ವಾರದಲ್ಲಿ ಅಧಿವೇಶನ ನಡೆಸುವ ಸರ್ಕಾರದ ನಿರ್ಧಾರವನ್ನು ತಿಳಿಸಿದರು.

ಲೋಕಸಭಾ ಕಲಾಪವನ್ನು ಮುಂದೂಡುವ ಮುನ್ನ ಲೋಕಸಭಾಧ್ಯಕ್ಷ ಓಂ ಬಿರ್ಲಾ, 'ಸಂಸದೀಯ ವ್ಯವಹಾರಗಳ ಸಚಿವರು ಒಂದು ಮನವಿ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇದೇ 16ರಂದು ಬೆಳಿಗ್ಗೆ 11ರಿಂದ ಅಧಿವೇಶನ ನಡೆಯಲಿದೆ' ಎಂದು ಪ್ರಕಟಿಸಿದರು.

ಚುನಾವಣೆಗೆ ಮುನ್ನ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಸರ್ಕಾರವು ತರಾತುರಿಯಿಂದ ಈ ಮಸೂದೆ ಮಂಡಿಸುತ್ತಿದೆ ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಆಕ್ಷೇಪಿಸಿವೆ.

ಈ ಆರೋಪವನ್ನು ರಿಜಿಜು ತಿರಸ್ಕರಿಸಿದರು.

▶13

ವಿದೇಶಗಳಲ್ಲಿ ಪ್ರತಿದಿನ 20 ಭಾರತೀಯ ಕಾರ್ಮಿಕರ ಸಾವು

ನವದೆಹಲಿ (ಪಿಟಿಐ): ಕಳೆದ ಐದು ವರ್ಷಗಳಲ್ಲಿ ಪ್ರತಿದಿನ ಸರಾಸರಿ 20ಕ್ಕೂ ಹೆಚ್ಚು ಭಾರತೀಯ ಕಾರ್ಮಿಕರು ವಿದೇಶಗಳಲ್ಲಿ ಮೃತಪಟ್ಟಿದ್ದಾರೆ. ಅದರಲ್ಲೂ ಹೆಚ್ಚಿನ ಸಾವುಗಳು ಕೊಲ್ಲಿ ರಾಷ್ಟ್ರಗಳಲ್ಲಿ ಸಂಭವಿಸಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ಜನವರಿ 29ರಂದು ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ, ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಕಾರ್ಮಿಕರ ಸ್ಥಿತಿಗತಿಗಳ ಕುರಿತ ಆತಂಕಕಾರಿ ಅಂಕಿ–ಅಂಶಗಳನ್ನು ಬಹಿರಂಗಪಡಿಸಿದ್ದಾರೆ.

'2021ರಿಂದ 2025ರ ನಡುವೆ ವಿದೇಶಗಳಲ್ಲಿ ಒಟ್ಟು 37,740 ಭಾರತೀಯ ಕಾರ್ಮಿಕರು ಮೃತಪಟ್ಟಿದ್ದಾರೆ. ಒಟ್ಟು ಸಾವುಗಳಲ್ಲಿ ಶೇಕಡ 86ಕ್ಕಿಂತ ಹೆಚ್ಚು ಕೊಲ್ಲಿ ರಾಷ್ಟ್ರಗಳಲ್ಲೇ ಸಂಭವಿಸಿವೆ' ಎಂದು ಅವರು ಹೇಳಿದ್ದಾರೆ. ಆದರೆ, ಈ ಸಾವುಗಳಿಗೆ ಕಾರಣಗಳೇನು ಎಂಬ ವಿವರಗಳನ್ನು ಅವರು ಒದಗಿಸಿಲ್ಲ. ಅದರಲ್ಲೂ 2021ರಲ್ಲಿ ಅತೀ ಹೆಚ್ಚು ಭಾರತೀಯರು ವಿದೇಶಗಳಲ್ಲಿ ಮೃತಪಟ್ಟಿದ್ದಾರೆ ಎಂಬ ವಿವರ ಅಂಕಿ–ಅಂಶಗಳಲ್ಲಿದೆ.



ಶೋಷಣೆ ಬಗ್ಗೆ 81000 ದೂರು: ವಿವಿಧ ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳಿಗೆ 2021ರಿಂದ 2025ರವರೆಗೆ ಶೋಷಣೆ, ನಿಂದನೆ ಮತ್ತು ಕೆಲಸದ ಸ್ಥಳದಲ್ಲಿನ ಸಮಸ್ಯೆಗಳ ಕುರಿತು 80,985 ದೂರುಗಳು ಭಾರತೀಯ ಪ್ರಜೆಗಳಿಂದ ಬಂದಿದ್ದವು.

▶13

ಕೊಲ್ಲಿ ರಾಷ್ಟ್ರಗಳಲ್ಲಿ ಸಾವು ಹೆಚ್ಚಳ

2012–2018ರ ಮಧ್ಯಭಾಗದವರೆಗೆ ಕೊಲ್ಲಿ ರಾಷ್ಟ್ರಗಳಲ್ಲಿ ಪ್ರತಿದಿನ ಸುಮಾರು 10 ಭಾರತೀಯ ಕಾರ್ಮಿಕರು ಮೃತಪಟ್ಟಿದ್ದರು. ಈ ಆರೂವರೆ ವರ್ಷಗಳಲ್ಲಿ ಆರು ಕೊಲ್ಲಿ ರಾಷ್ಟ್ರಗಳಾದ ಬಹರೇನ್, ಒಮಾನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇಗಳಲ್ಲಿ ಕನಿಷ್ಠ 24,570 ಭಾರತೀಯ ಕಾರ್ಮಿಕರು ಮೃತಪಟ್ಟಿದ್ದರು ಎಂದು ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ (ಸಿಎಚ್‌ಆರ್‌ಐ) ವಿಶ್ಲೇಷಿಸಿತ್ತು.

ಈ ಅಂಕಿ ಅಂಶಗಳಿಗೆ ಹೋಲಿಸಿದರೆ, 2021–2025 ನಡುವೆ ಬಹರೇನ್ ಹೊರತುಪಡಿಸಿ ಕೊಲ್ಲಿ ರಾಷ್ಟ್ರಗಳಲ್ಲಿ 32,608 ಭಾರತೀಯ ಕಾರ್ಮಿಕರು ಮೃತಪಟ್ಟಿದೆ ಎಂದು ಸರ್ಕಾರಿ ದತ್ತಾಂಶವು ಹೇಳುತ್ತದೆ. ಇದರರ್ಥ ಕಳೆದ ಐದು ವರ್ಷಗಳಲ್ಲಿ ಕೊಲ್ಲಿ ದೇಶಗಳಲ್ಲಿ ಪ್ರತಿದಿನ ಸರಾಸರಿ 18 ಕಾರ್ಮಿಕರು ಮೃತಪಟ್ಟಿದ್ದಾರೆ.



ಸಂಕಷ್ಟದಲ್ಲಿರುವ ಭಾರತೀಯ ಪ್ರಜೆಯ ಬಗ್ಗೆ ಮಾಹಿತಿ ಸಿಕ್ಕ ಕೂಡಲೇ ಆತಿಥೇಯ ದೇಶದ ಇಲಾಖೆಗಳು ಮತ್ತು ಕಾನೂನು ಜಾರಿ ಸಂಸ್ಥೆಗಳನ್ನು ಸಂಪರ್ಕಿಸಿ

ಕೀರ್ತಿವರ್ಧನ್ ಸಿಂಗ್, ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ

ಒಪ್ಪಂದ ಆಗದಿದ್ದರೆ ಪ್ರಮುಖ ನೆಲೆಗಳು ಗುರಿ– ಅಮೆರಿಕ ಅಧ್ಯಕ್ಷ ಎಚ್ಚರಿಕೆ

ಇರಾನ್ ವಿರುದ್ಧ ತೀವ್ರ ದಾಳಿ: ಟ್ರಂಪ್

ವಾಷಿಂಗ್ಟನ್ (ಎಪಿ): 'ಮುಂದಿನ ಎರಡರಿಂದ ಮೂರು ವಾರಗಳವರೆಗೆ ಇರಾನ್ ವಿರುದ್ಧ ಇನ್ನಷ್ಟು ತೀವ್ರ ದಾಳಿಗಳನ್ನು ನಡೆಸಲಿದ್ದೇವೆ. ಆ ಮೂಲಕ ಅವರನ್ನು ಮರಳಿ ಶಿಲಾಯುಗದ ಸ್ಥಿತಿಗೆ ಕಳುಹಿಸಲಿದ್ದೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದರು.

ಪಶ್ಚಿಮ ಏಷ್ಯಾ ಯುದ್ಧ ಆರಂಭವಾದ ನಂತರ ಇದೇ ಮೊದಲ ಬಾರಿಗೆ ದೇಶದ ಜನರನ್ನು ಉದ್ದೇಶಿಸಿ ದೂರದರ್ಶನದಲ್ಲಿ ಮಾತನಾಡಿದ ಟ್ರಂಪ್, 'ಅಮೆರಿಕ ಈಗಾಗಲೇ ಇರಾನ್‌ನ ನೌಕಾಪಡೆ ಮತ್ತು ವಾಯುಪಡೆಯನ್ನು ನಾಶಪಡಿಸಿದೆ. ಅಲ್ಲದೆ



ಬ್ಯಾಲಿಸ್ಟಿಕ್ ಕ್ಷಿಪಣಿ ಹಾಗೂ ಅಣ್ವಸ್ತ್ರ ಕಾರ್ಯಕ್ರಮಗಳನ್ನು ದುರ್ಬಲಗೊಳಿಸಿದೆ. ಈಗ ಮತ್ತಷ್ಟು ತೀವ್ರತರವಾದ ಬಾಂಬ್ ದಾಳಿಗಳನ್ನು ನಡೆಸಲಿದೆ' ಎಂದರು.

'ಯುದ್ಧ ಐದನೇ ವಾರವೂ ಮುಂದುವರಿದಿದ್ದು, ಅಮೆರಿಕ ತನ್ನ ಕೆಲಸವನ್ನು ಇನ್ನಷ್ಟು ವೇಗವಾಗಿ ಮುಗಿಸುತ್ತದೆ' ಎಂದ ಅವರು, ಯುದ್ಧವನ್ನು ಕೊನೆಗೊಳಿಸಲು ಸಮಗ್ರ ಯೋಜನೆ ರೂಪಿಸಲು ನಿರಾಕರಿಸಿದರು.

▶14

ಹೊರ್ಮುಜ್: 40 ದೇಶಗಳ ಸಭೆ

ಲಂಡನ್: ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಮಾರ್ಗಗಳನ್ನು ಅನ್ವೇಷಿಸಲು ವಿವಿಧ ದೇಶಗಳ ಒಕ್ಕೂಟ ರಚಿಸಲು ಬ್ರಿಟನ್ ಸುಮಾರು 40 ದೇಶಗಳ ಜತೆ ಗುರುವಾರ ವರ್ಚುವಲ್ ಶೃಂಗಸಭೆ ನಡೆಸಿತು. ಈ ಜಲಸಂಧಿಯನ್ನು ಸುರಕ್ಷಿತವಾಗಿ ಇರಿಸಲು ಅದರ ಅವಲಂಬಿತ ದೇಶಗಳು ಪ್ರಯತ್ನಿಸಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಬೆನ್ನಲ್ಲೇ ಬ್ರಿಟನ್ ಈ ಕುರಿತು ಮಾತುಕತೆ ನಡೆಸಿದೆ. ಭಾರತ, ಫ್ರಾನ್ಸ್, ಜರ್ಮನಿ, ಇಟಲಿ, ಕೆನಡಾ, ಯುಎಇ, ಭಾರತ ಸೇರಿದಂತೆ 40 ದೇಶಗಳ ಪ್ರತಿನಿಧಿಗಳು ವರ್ಚುವಲ್ ಸಭೆಯಲ್ಲಿ ಪಾಲ್ಗೊಂಡಿದ್ದರು. ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಯವೆಟ್ಟೆ ಕೂಪರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

▶14

ದಕ್ಷಿಣದಲ್ಲಿ ಎಡರಂಗ ನಿರಾಳ; ಉತ್ತರದಲ್ಲಿ ಬಿಜೆಪಿ ಸವಾಲು

ಕಾಸರಗೋಡು: ಧರ್ಮಾಧಾರಿತ ರಾಜಕೀಯ ಸಮೀಕರಣಗಳು ಬದಲಾಗದ ಕಾರಣ ಜಿಲ್ಲೆಯಲ್ಲಿ ಚುನಾವಣಾ ಕಾವು ಅಷ್ಟಾಗಿ ಕಾಣಿಸುತ್ತಿಲ್ಲ. ತ್ರಿಕೋನ ಸ್ಪರ್ಧೆಯ 'ಛಾಯೆ' ಮೂಡಿರುವ ಜಿಲ್ಲೆಯ ಉತ್ತರ ಭಾಗದ ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳು ಕುತೂಹಲ ಕೆರಳಿಸಿವೆ. ಎಡರಂಗದ ಭದ್ರಕೋಟೆ ಉದುಮ ಸೇರಿದಂತೆ ದಕ್ಷಿಣದ ಮೂರು ಕ್ಷೇತ್ರಗಳಲ್ಲಿ ರಾರಾಜಿಸಲು ಬಿಜೆಪಿ ಹವಣಿಸುತ್ತಿದೆ.

ವಿವರ ಪುಟ ▶15

ಕೆಪಿಎಸ್‌ಸಿ ಸುಧಾರಣೆಗೆ ಚಿಂತನೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸ್ವಾಯತ್ತ ಸಂಸ್ಥೆಯಾಗಿದೆ. ಅದರ ಸುಧಾರಣೆಯ ಬಗ್ಗೆ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ ನಂತರ ಏರ್ಪಡಿಸಲಾಗಿದ್ದ ಸಂದರ್ಶನವನ್ನು ದಿಢೀರ್ ತಡೆ ಹಿಡಿದಿರುವುದರ ಹಿಂದೆ ಸುಧಾರಣೆ ಕೈಗೊಳ್ಳುವ ಉದ್ದೇಶ ಇದೆ ಎಂದು ಹೇಳಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ. ಈ ಹಿಂದೆ ತಿಳಿಸಿದಂತೆ ಪ್ರಸಕ್ತ ವರ್ಷ 56,432 ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಲಾಗುವುದು. ಪ್ರತಿ ವರ್ಷವೂ ಖಾಲಿ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ವಿವರಿಸಿದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಕಂದಾಯ– ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಕೃಷ್ಣ ಬೈರೇಗೌಡ ಸಭೆ

'ಪರಿಭಾವಿತ ಅರಣ್ಯ: ಸ್ಪಷ್ಟತೆ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಭಾವಿತ ಅರಣ್ಯಗಳನ್ನು (ಡೀಮ್ಡ್ ಫಾರೆಸ್ಟ್) ಈ ಹಿಂದೆ ಗುರುತಿಸುವಾಗ ತಪ್ಪುಗಳಾಗಿವೆ. ಆ ತಪ್ಪುಗಳನ್ನು ಈ ಬಾರಿಯಾದರೂ ಸರಿಯಾಗಿ ಪಟ್ಟಿ ಮಾಡಬೇಕು. ರಾಜ್ಯ, ಜಿಲ್ಲಾ ಮಟ್ಟದಲ್ಲಿ ಅರಣ್ಯ-ಪರಿಭಾವಿತ ಅರಣ್ಯ ಬಗ್ಗೆ ಸ್ಪಷ್ಟತೆ ಇರಬೇಕು' ಎಂದು ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದ್ದಾರೆ.

ಪರಿಭಾವಿತ ಅರಣ್ಯ ಗುರುತಿಸುವ ಕುರಿತಂತೆ ಎರಡೂ ಇಲಾಖೆಗಳ ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಅವರು, 'ಪರಿಭಾವಿತ ಅರಣ್ಯಗಳನ್ನು ಗುರುತಿಸಲು ಜಿಲ್ಲಾವಾರು ತಂಡ ರಚಿಸಬೇಕು. ಕಂದಾಯ- ಅರಣ್ಯ ಗಡಿ ನಿಗದಿಗೆ ಜಂಟಿ ಸರ್ವೆ ನಡೆಸಬೇಕು. ಆ ಮೂಲಕ, ರೈತರಿಗೆ ಆಗುತ್ತಿರುವ ಸಮಸ್ಯೆಗಳನ್ನು ತಪ್ಪಿಸಬೇಕು' ಎಂದು ಅವರು ನಿರ್ದೇಶನ ನೀಡಿದ್ದಾರೆ.



ಕೃಷ್ಣ ಬೈರೇಗೌಡ

'ಚಿಕ್ಕಮಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಜಂಟಿ ಸರ್ವೆ ಪ್ರಗತಿಯಲ್ಲಿದೆ. ಕೆಲವು ಕಡೆ ಅರಣ್ಯ ಇಲಾಖೆ ಅಧಿಕಾರಿಗಳು ಜಂಟಿ ಸರ್ವೆಗೆ ಸಹಿ ಹಾಕದೇ ಇರುವುದು ಸರಿಯಲ್ಲ' ಎಂದು ಅರಣ್ಯ ಇಲಾಖೆ ಅಧಿಕಾರಿಗಳ ನಡೆಗೆ ಸಚಿವರು ಕಿಡಿಕಾರಿದರು.

'ಕಾಡಿನಂತೆ ಕಾಣುವ ಪ್ರದೇಶವನ್ನು ಮಾತ್ರ ಪರಿಭಾವಿತ ಅರಣ್ಯ ಎಂದು ಪರಿಗಣಿಸಬೇಕು. ಆದರೆ, ಕೆಐಎಡಿಬಿ ಜಾಗ, ಕೆರೆ ಜಾಗ, ಶಾಲೆಯ ಜಾಗವನ್ನೂ ಪರಿಭಾವಿತ ಅರಣ್ಯ ಎಂದು ಪರಿಗಣಿಸುವುದು ಎಷ್ಟು ಸರಿ. ಶೇಂದಿ ವನ ತೆಂಗಿನಂತೆಯೇ ವಾಣಿಜ್ಯ ಬೆಳೆ. ಅದನ್ನೂ ಅರಣ್ಯ ಪ್ರದೇಶ ಎಂದು ಗುರುತಿಸಿರುವುದು ಸರಿಯಲ್ಲ' ಎಂದರು.

'ಪರಿಭಾವಿತ ಅರಣ್ಯ ಪರಿಕಲ್ಪನೆಯ ಅರ್ಥವನ್ನೇ ನಾವು ಮರೆತಿದ್ದೇವೆ. ಕುರುಚಲು ಗಿಡ ಕೂಡ ಇಲ್ಲದ ಪ್ರದೇಶವನ್ನು ಪರಿಭಾವಿತ ಅರಣ್ಯ ಎಂದು ಈ ಹಿಂದೆ ಪಟ್ಟಿ ಮಾಡಲಾಗಿದೆ. ಇಂತಹ ಕೆಲಸ ಮತ್ತೆ ಆಗಬಾರದು. ಈ ರೀತಿ ಮಾಡಿದರೆ ಭವಿಷ್ಯದಲ್ಲಿ ಸಮಸ್ಯೆ ಆಗಲಿದೆ' ಎಂದು ಎಚ್ಚರಿಕೆ ನೀಡಿದರು.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನೂತನ ವ್ಯವಸ್ಥೆ ● ಸಚಿವ ದಿನೇಶ್ ಗುಂಡೂರಾವ್ ಚಾಲನೆ

ಡಯಾಲಿಸಿಸ್ ಮೇಲ್ವಿಚಾರಣೆಗೆ 'ಎ.ಐ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆ ಅಳವಡಿಸಲಾಗಿದ್ದು, ರೋಗಿಯ ರಕ್ತದ ಒತ್ತಡ, ದ್ರವದ ಹೊರಹರಿವು ಸೇರಿ ವಿವಿಧ ಅಂಶಗಳ ಮೇಲೆ ಇದು ನಿಗಾ ಇಡಲಿದೆ.

ನೆಫ್ರೊಪ್ಲಸ್ ಸಂಸ್ಥೆಯು ಆಸ್ಪತ್ರೆಯಲ್ಲಿ ಈ ಸೌಲಭ್ಯವನ್ನು ಅಳವಡಿಸಿದೆ. ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಈ ವ್ಯವಸ್ಥೆಗೆ ಚಾಲನೆ ನೀಡಿದರು.

'ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಡಯಾಲಿಸಿಸ್ ಸೇವೆಗಳನ್ನು ವಿಸ್ತರಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಯ ಪರಿಚಯದಿಂದ, ಚಿಕಿತ್ಸಾ ಗುಣಮಟ್ಟ ಮತ್ತು ರೋಗಿಯ ಸುರಕ್ಷತೆ ಮತ್ತಷ್ಟು ಬಲವಾಗಲಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಪಿಪಿಪಿ ಮಾದರಿಯಡಿ ನೀಡಲಾಗುವ ಡಯಾಲಿಸಿಸ್ ಸೇವೆಗಳು ಖಾಸಗಿ ವ್ಯವಸ್ಥೆಯ ಗುಣಮಟ್ಟಕ್ಕೆ ಸಮನಾಗುತ್ತಿವೆ. ಈಗಾಗಲೇ ಡಯಾಲಿಸಿಸ್‌ಗೆ ಎರಡು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಎ.ಐ ಬಳಕೆ ಹೆಚ್ಚಿಸಲಾಗುತ್ತಿದೆ. ಇದರ ಉಪಯೋಗವನ್ನು ಎರಡು ತಿಂಗಳು ಪರಿಶೀಲಿಸಿ, ನಂತರ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.


'ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದಂತೆ ಬೆಂಗಳೂರಿನಂತಹ ನಗರದಲ್ಲಿ ಎಲ್ಲ ವ್ಯವಸ್ಥೆ ಲಭ್ಯವಿರುತ್ತದೆ. ಆದ್ದರಿಂದ ಗ್ರಾಮೀಣ ಭಾಗಗಳಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುವವರಿಗೆ ಎ.ಐ ತಂತ್ರಜ್ಞಾನವು ವರದಾನವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ನೆಫ್ರೊಪ್ಲಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೋಹಿತ್ ಸಿಂಗ್, 'ಡಯಾಲಿಸಿಸ್ ಚಿಕಿತ್ಸೆಯಲ್ಲಿ ನಿರಂತರ ಮೇಲ್ವಿಚಾರಣೆ ಅತ್ಯಗತ್ಯ. ಈ ಎ.ಐ ವ್ಯವಸ್ಥೆಯ ಮೂಲಕ ಎಲ್ಲ ಕೇಂದ್ರಗಳಲ್ಲಿಯೂ ಸಮಾನ ಗುಣಮಟ್ಟ ಕಾಪಾಡುವುದರ ಜತೆಗೆ, ರೋಗಿಗಳಿಗೆ ಹೆಚ್ಚು ಸುರಕ್ಷಿತ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಕೆ.ಸಿ.ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮೀಪತಿ ಉಪಸ್ಥಿತರಿದ್ದರು.

ಎ.ಐ ಮೇಲ್ವಿಚಾರಣೆ ಹೇಗೆ?

'ಎ.ಐ ತಂತ್ರಜ್ಞಾನದ ಮೂಲಕ ಡಯಾಲಿಸಿಸ್ ವೇಳೆ ರೋಗಿಯ ರಕ್ತದ ಒತ್ತಡ, ದ್ರವದ ಹೊರಹರಿವು, ಎಲೆಕ್ಟ್ರೋಲೈಟ್ ಸಮತೋಲನ ಸೇರಿದಂತೆ ಪ್ರಮುಖ ಅಂಶಗಳನ್ನು ನೈಜ ಸಮಯದಲ್ಲಿ ಮೇಲ್ವಿಚಾರಣೆ ಮಾಡಬಹುದಾಗಿದೆ. ನಿರಂತರ ನಿಗಾದ ಮೂಲಕ ರೋಗಿಗೆ ಸುರಕ್ಷತೆ ಹಾಗೂ ಚಿಕಿತ್ಸಾ ಗುಣಮಟ್ಟ ಹೆಚ್ಚಿಸಲು ಇದು ನೆರವಾಗುತ್ತದೆ' ಎಂದು ಸಂಸ್ಥೆಯ ಪ್ರತಿನಿಧಿಗಳು ವಿವರಿಸಿದರು.



'28 ಪ್ರಮುಖ ಅಂಶಗಳನ್ನು ಪರಿಶೀಲಿಸುವ ಈ ವ್ಯವಸ್ಥೆ, ರೋಗಿಯ ಆರೈಕೆ, ಸುರಕ್ಷತೆ, ಹಾಸಿಗೆ ಲಭ್ಯತೆ, ಸಿಬ್ಬಂದಿ ಎಚ್ಚರಿಕೆ, ತುರ್ತು ಸಿದ್ಧತೆ, ಸೋಂಕು ನಿಯಂತ್ರಣ, ಸ್ವಚ್ಛತೆ, ಕಾರ್ಯಕ್ಷಮತೆ ಸೇರಿದಂತೆ ಹಲವು ವಿಭಾಗಗಳಲ್ಲಿ ನಿರಂತರ ಮೌಲ್ಯಮಾಪನ ನಡೆಸುತ್ತದೆ. ಇದರಿಂದ ಆಡಳಿತ ಮತ್ತು ವೈದ್ಯಕೀಯ ತಂಡಗಳಿಗೆ ಅಂಕಿ-ಅಂಶಗಳನ್ನು ಆಧರಿಸಿ ನಿರ್ಧಾರ ಕೈಗೊಳ್ಳಲು ಸಹಕಾರವಾಗುತ್ತದೆ' ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಿಂಚು, ಗುಡುಗು ಸಹಿತ ಮಳೆಯಾಗಲಿದೆ.

ಏ. 5ರ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಕ್ಕೆ ವಿಶೇಷ ವ್ಯವಸ್ಥೆ

ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 5 ರಂದು ನಡೆಯಲಿರುವ ಐಪಿಎಲ್ ಟಿ–20 ಕ್ರಿಕೆಟ್ ವೀಕ್ಷಣೆಗೆ ಬರುವ ಮೆಟ್ರೊ ಪ್ರಯಾಣಿಕರ ಅನುಕೂಲಕ್ಕಾಗಿ ವಿವಿಧ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ಮೆಟ್ರೊ ಸಂಚಾರದ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ.

ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ರಾತ್ರಿ 12.30ಕ್ಕೆ, ಚಲ್ಲಘಟ್ಟ, ರೇಷ್ಮೆ ಸಂಸ್ಥೆ ಹಾಗೂ ಮಾದಾವರ ಟರ್ಮಿನಲ್‌ಗಳಿಂದ ರಾತ್ರಿ 12.45ಕ್ಕೆ, ಬೊಮ್ಮಸಂದ್ರದಿಂದ ರಾತ್ರಿ 12.30ಕ್ಕೆ, ಆರ್.ವಿ. ರಸ್ತೆ ಯಿಂದ ರಾತ್ರಿ 2ಕ್ಕೆ ಕೊನೆ ರೈಲು ಸಂಚರಿಸಲಿದೆ.

ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ-ಮೆಜೆಸ್ಟಿಕ್‌ನಿಂದ ನಾಲ್ಕು ದಿಕ್ಕುಗಳಿಗೆ ಮಧ್ಯರಾತ್ರಿ 1.30ಕ್ಕೆ ಕೊನೆಯ ರೈಲು ಹೊರಡಲಿದೆ.

ನಮ್ಮ ಮೆಟ್ರೊ 44 ನಿಲ್ದಾಣಗಳಲ್ಲಿ ಹೆಚ್ಚುವರಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಈ ಪಾರ್ಕಿಂಗ್ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿ ಕ್ರೀಡಾಂಗಣಕ್ಕೆ ಮೆಟ್ರೊದಲ್ಲಿ ಸಂಚರಿಸಬಹುದು.

ಇದರಿಂದ ವಾಹನದಟ್ಟಣೆ ಕಡಿಮೆಯಾಗಲಿದೆ. ಐಪಿಎಲ್ ಕ್ರಿಕೆಟ್ ಇರುವ ದಿನಗಳಲ್ಲಿ ದ್ವಿಚಕ್ರ ವಾಹನಗಳಿಗೆ ₹30 ಹಾಗೂ ಕಾರುಗಳಿಗೆ ₹60 ಶುಲ್ಕ ನಿಗದಿ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಐಪಿಎಲ್ ಟಿಕೆಟ್ ಇದ್ದರೆ ಸಂಚಾರ ಉಚಿತ: ಐಪಿಎಲ್ ಟಿ–20 ಟಿಕೆಟ್ ಇರುವವರು ಅಂದು 'ನಮ್ಮ ಮೆಟ್ರೊ'ದಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಎರಡೂ ಕಡೆಯ ಪ್ರಯಾಣಕ್ಕೆ ಐಪಿಎಲ್ ಪಂದ್ಯದ ಟಿಕೆಟ್‌ಗಳಲ್ಲಿ 'ನಮ್ಮ ಮೆಟ್ರೊ' ಕ್ಯೂಆರ್ ಕೋಡ್ ಮುದ್ರಿತವಾಗಿರುತ್ತದೆ. ಡಿಜಿಟಲ್ ಐಪಿಎಲ್ ಟಿಕೆಟ್‌ಗಳಲ್ಲಿಯೂ ಲಭ್ಯವಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನೇರಳೆ ಮಾರ್ಗ: ಏ.5ಕ್ಕೆ ಎರಡು ತಾಸು ಸ್ಥಗಿತ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಮೈಸೂರು ರಸ್ತೆ ಮೆಟ್ರೊ ನಿಲ್ದಾಣಗಳ ನಡುವೆ ಏಪ್ರಿಲ್ 5ರಂದು ಬೆಳಿಗ್ಗೆ ಎರಡು ತಾಸು ಮೆಟ್ರೊ ಸಂಚಾರ ಸ್ಥಗಿತಗೊಳ್ಳಲಿದೆ.

ವಿಜಯನಗರ ಮತ್ತು ಅತ್ತಿಗುಪ್ಪೆ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಬೆಳಿಗ್ಗೆ 7ರಿಂದ 9ರವರೆಗೆ ತಾತ್ಕಾಲಿಕವಾಗಿ ಮೆಟ್ರೊ ಸಂಚಾರ ಇರುವುದಿಲ್ಲ.

ಚಲ್ಲಘಟ್ಟದಿಂದ ಮೈಸೂರು ರಸ್ತೆ ವರೆಗೆ, ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ವೈಟ್‌ಫೀಲ್ಡ್‌ವರೆಗೆ ಎಂದಿನ ವೇಳಾಪಟ್ಟಿಯಂತೆ ರೈಲುಗಳು ಸಂಚರಿಸಲಿವೆ. ಮಾದಾವರ-ರೇಷ್ಮೆ ಸಂಸ್ಥೆ ನಡುವಿನ ಹಸಿರು ಮಾರ್ಗ ಮತ್ತು ಆರ್.ವಿ. ರಸ್ತೆ-ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ: 106 ರೈಲುಗಳ ವೇಗ ಹೆಚ್ಚಳ

ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಲ್ಲಿ 2025-26ರ ಹಣಕಾಸು ವರ್ಷದಲ್ಲಿ ನಾಲ್ಕು ಮೇಲ್ಸೇತುವೆ, 10 ಕೆಳ ಸೇತುವೆಗಳನ್ನು ನಿರ್ಮಿಸಿ 8 ಲೆವೆಲ್ ಕ್ರಾಸಿಂಗ್‌ಗಳನ್ನು ತೆರವುಗೊಳಿಸಲಾಗಿದೆ. 106 ರೈಲುಗಳ ವೇಗ ಹೆಚ್ಚಿಸಲಾಗಿದೆ ಎಂದು ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ತಿಳಿಸಿದರು.



ಅಶುತೋಷ್ ಕುಮಾರ್

ಬೆಂಗಳೂರು ವಿಭಾಗದ ವಾರ್ಷಿಕ ಸಾಧನೆಯ ಬಗ್ಗೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಯಲಹಂಕ - ಧರ್ಮಾವರಂ ವಿಭಾಗದಲ್ಲಿ ರೈಲುಗಳ ವೇಗವನ್ನು 130 ಕಿ.ಮೀ.ಗೆ ಹೆಚ್ಚಿಸಲಾಗಿದೆ. ಚಿಕ್ಕಬಳ್ಳಾಪುರ - ಚಿಂತಾಮಣಿ ಮತ್ತು ಬೈಯಪ್ಪನಹಳ್ಳಿ - ಓಮಲೂರು ವಿಭಾಗಗಳಲ್ಲಿ ವೇಗವನ್ನು 110 ಕಿ.ಮೀ.ಗೆ ಹೆಚ್ಚಿಸಲಾಗಿದೆ ಎಂದರು.

ಬೆಳ್ಳಂದೂರು ರಸ್ತೆ - ಕಾರ್ಮೆಲಾರಾಂ ನಡುವೆ 3.5 ಕಿ.ಮೀ. ಮತ್ತು ಮಕ್ಕಜಿಪಲ್ಲಿ - ನಾಗಸಮುದ್ರಂ - ಧರ್ಮಾವರಂ ನಡುವಿನ 28.6 ಕಿ.ಮೀ. ಮಾರ್ಗದ ದ್ವಿಪಥ ಮತ್ತು ವಿದ್ಯುದೀಕರಣ ಕಾಮಗಾರಿ ಪೂರ್ಣಗೊಂಡಿದ್ದು ರೈಲು ಸಂಚಾರ ಕಾರ್ಯಾರಂಭಗೊಂಡಿದೆ. ತುಮಕೂರು, ಊರುಕೆರೆ ಮತ್ತು ತಿಮ್ಮರಾಜನಹಳ್ಳಿ ನಡುವೆ 24 ಕಿ.ಮೀ. ಉದ್ದದ ಹೊಸ ರೈಲ್ವೆ ಮಾರ್ಗ ಪೂರ್ಣಗೊಂಡಿದೆ. ಬೆಂಗಳೂರು ಕಂಟೋನ್ಮೆಂಟ್ ಮತ್ತು ಬೈಯಪ್ಪನಹಳ್ಳಿ ಪಶ್ಚಿಮ ನಡುವಿನ 3ನೇ ಮತ್ತು 4ನೇ ಮಾರ್ಗಗಳ (4.92 ಕಿಮೀ) ಕಾಮಗಾರಿ ಮುಕ್ತಾಯಗೊಂಡಿದ್ದು, ಲೋಕಾರ್ಪಣೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಬೆಂಗಳೂರಿನಿಂದ ಬೆಳಗಾವಿ ಮತ್ತು ಎರ್ನಾಕುಲಂಗೆ ವಂದೇ ಭಾರತ್ ರೈಲು ಸೇರಿದಂತೆ 18 ರೈಲುಗಳನ್ನು ಆರಂಭಿಸಲಾಗಿದೆ. ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ಮೊಬೈಲ್ ಯುಟಿಎಸ್ ಸಹಾಯಕ್ ಆರಂಭಿಸಲಾಗಿದೆ. ಪ್ರಯಾಣಿಕರ ಸುಲಭ ಸಂಚಾರಕ್ಕಾಗಿ ಪ್ರಮುಖ 14 ನಿಲ್ದಾಣಗಳಲ್ಲಿ ನಮ್ಮ ನಕ್ಷೆ ಆ್ಯಪ್ ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದರು.

ಬೆಂಗಳೂರು ವಿಭಾಗದಲ್ಲಿ ದೂರುಗಳ ಸಂಖ್ಯೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 18ರಷ್ಟು ಇಳಿಕೆಯಾಗಿದೆ. ಹಬ್ಬದ ಸಮಯದಲ್ಲಿ ದಟ್ಟಣೆ ನಿಯಂತ್ರಿಸಲು 4,706 ವಿಶೇಷ ರೈಲುಗಳ ಸಂಚಾರ ನಡೆಸಲಾಗಿದೆ. 14 ರೈಲುಗಳನ್ನು ಡೀಸೆಲ್‌ನಿಂದ ವಿದ್ಯುತ್ ಎಂಜಿನ್‌ಗೆ ಪರಿವರ್ತಿಸಲಾಗಿದೆ, ಇದರಿಂದ ₹43.73 ಕೋಟಿ ಇಂಧನ ಉಳಿತಾಯವಾಗಿದೆ ಎಂದರು.

ರೈಲಿಗೆ ಹತ್ತುವಾಗ ಅಥವಾ ಇಳಿಯುವಾಗ ಅಪಘಾತ ಉಂಟಾಗಬಹುದಾದ ಸಂದರ್ಭದಲ್ಲಿ 16 ಪುರುಷರು ಮತ್ತು 11 ಮಹಿಳೆಯರನ್ನು ರಕ್ಷಿಸಲಾಗಿದೆ. ಟಿಕೆಟ್ ಅನ್ನು ಅಧಿಕ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದ 144 ದಲ್ಲಾಳಿಗಳನ್ನು ಬಂಧಿಸಿ, ₹ 4.08 ಲಕ್ಷ ಮೌಲ್ಯದ ಟಿಕೆಟ್ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಪರೀಕ್ಷಿತ್ ಮೋಹನ್‌ಪುರಿಯಾ, ಪ್ರವೀಣ್ ಕಾತರಕಿ, ಮುಖ್ಯ ಯೋಜನಾ ವ್ಯವಸ್ಥಾಪಕ ಗುಲ್ ಅಶ್ಫಾಕ್ ಮೊಹಮ್ಮದ್, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಕೃಷ್ಣ ಚೈತನ್ಯ, ಹಿರಿಯ ವಿಭಾಗೀಯ ಪರಿಚಾಲನಾ ವ್ಯವಸ್ಥಾಪಕಿ ಪ್ರಿಯಾ, ಹಿರಿಯ ವಿಭಾಗೀಯ ಎಂಜಿನಿಯರ್ ಹರ್ಷಿತ್ ಗುಪ್ತ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ನಾಲ್ಕು ಮೇಲ್ಸೇತುವೆ, 10 ಕೆಳ ಸೇತುವೆ ನಿರ್ಮಾಣ
- 8 ಲೆವೆಲ್ ಕ್ರಾಸಿಂಗ್‌ಗಳ ತೆರವು
- ಪ್ರಮುಖ 14 ನಿಲ್ದಾಣಗಳಲ್ಲಿ ನಮ್ಮ ನಕ್ಷೆ ಆ್ಯಪ್ ಬಿಡುಗಡೆ

ವರಮಾನದಲ್ಲೂ ಏರಿಕೆ

ಬೆಂಗಳೂರು ವಿಭಾಗದಲ್ಲಿ ಟಿಕೆಟ್ ತಪಾಸಣೆಯಿಂದ ಕಳೆದ ಹಣಕಾಸು ವರ್ಷದಲ್ಲಿ ₹ 37.83 ಕೋಟಿ ವರಮಾನ ಬಂದಿರುವುದು ದಾಖಲೆಯಾಗಿತ್ತು. ಈ ವರ್ಷ ಅದನ್ನು ಹಿಂದಿಕ್ಕಿ ₹ 39.68 ಕೋಟಿ ಬಂದಿದೆ ಎಂದು ಅಶುತೋಷ್ ಕುಮಾರ್ ಸಿಂಗ್ ತಿಳಿಸಿದರು.

ಪ್ರಯಾಣಿಕರಿಂದ ₹ 2420.55 ಕೋಟಿ ವರಮಾನ ಬಂದಿದೆ. ಸರಕು ಸಾಗಣೆಯಿಂದ ₹ 351.07 ಕೋಟಿ, ಪಾರ್ಸೆಲ್‌ನಿಂದ ₹140.31 ಕೋಟಿ, ಊಟೋಪಾಹಾರದಿಂದ (ಕೆಟರಿಂಗ್) ₹ 17.37 ಕೋಟಿ ವರಮಾನ ಬಂದಿದೆ ಎಂದು ಮಾಹಿತಿ ನೀಡಿದರು.

21.30 ಲಕ್ಷ ಟನ್ ಸರಕು ಲೋಡಿಂಗ್ ಮಾಡಲಾಗಿದೆ. ಒಟ್ಟು 2,681 ರೇಕ್ ಲೋಡಿಂಗ್ ಮಾಡಿರುವುದು ದಾಖಲೆಯಾಗಿದ್ದು, ಇದು ಹಿಂದಿನ ವರ್ಷಕ್ಕಿಂತ ಶೇ 20ರಷ್ಟು ಅಧಿಕ ಎಂದು ವಿವರಿಸಿದರು.

ಶಿವಕುಮಾರ ಸ್ವಾಮೀಜಿ ಜಯಂತಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಪಟ್ಟಣಗೆರೆಯ ಕರ್ನಾಟಕ ಸಂಸ್ಕೃತಿ ವಿದ್ಯಾಪೀಠ ಶಾಲೆಯಲ್ಲಿ ವಿದ್ಯಾರ್ಥಿಗಳು ಆಡಳಿತ ಮಂಡಳಿಯ ಜೊತೆಗೂಡಿ ಸಿದ್ಧಗಂಗಾ ಪೀಠಾಧ್ಯಕ್ಷರಾಗಿದ್ದ ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ ಆಚರಿಸಿದರು. ವಿದ್ಯಾರ್ಥಿಗಳೇ ಅನ್ನಪ್ರಸಾದ ತಯಾರಿಸಿ ವಿವಿಧೆಡೆ ಅನ್ನದಾಸೋಹ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



ಕರ್ನಾಟಕ ಸಂಸ್ಕೃತಿ ವಿದ್ಯಾಪೀಠ ಶಾಲೆಯ ವಿದ್ಯಾರ್ಥಿಗಳು ಅನ್ನದಾಸೋಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಬುಧವಾರ ಮುಂಜಾನೆ 6 ರಿಂದ ವಿದ್ಯಾರ್ಥಿಗಳು, ಶಿಕ್ಷಕಿಯರು, ಸಿಬ್ಬಂದಿ ವರ್ಗದವರು ಸೇರಿ ಟೊಮೆಟೊ ಬಾತ್, ಪುಳಿಯೋಗರೆ, ಕೋಸಂಬರಿ, ಸಿಹಿ ತಯಾರಿಸಿ ಮೈಲಸಂದ್ರ, ಹಲಗೆವಡೇರಹಳ್ಳಿ, ಕೆಂಚೇನಹಳ್ಳಿನಲ್ಲಿ ಪೆಂಡಾಲ್ ಹಾಕಿ ಸಾರ್ವಜನಿಕರಿಗೆ ವಿತರಿಸಿದರು.

'ಶಿಕ್ಷಣ ಸಂಸ್ಥೆಯ ಬಹುತೇಕ ವಿದ್ಯಾರ್ಥಿಗಳು ಜನ್ಮದಿನ ಆಚರಣೆ ಮಾಡಿಕೊಳ್ಳುವುದಿಲ್ಲ. ಆ ದಿನ ತಗಲುವ ವೆಚ್ಚದಲ್ಲಿ ದವಸಧಾನ್ಯ, ಅಡುಗೆ ಎಣ್ಣೆಯನ್ನು ಶಿಕ್ಷಣ ಸಂಸ್ಥೆಯ ದೊಡ್ಡ ಗಾತ್ರದ ಪಾತ್ರೆಯಲ್ಲಿ ಹಾಕುತ್ತಾರೆ. ಅದು ತುಂಬಿದ ಕೂಡಲೇ ವಿವಿಧ ಅನಾಥಾಶ್ರಮ, ವೃದ್ಧಾಶ್ರಮ, ಅಂಧ ಮಕ್ಕಳ ಶಾಲೆಗೆ ತಲುಪಿಸುತ್ತಾರೆ. ಮಕ್ಕಳು ಅನ್ನದಾಸೋಹ, ಮಾನವೀಯತೆ, ಕಲೆ, ಸಂಸ್ಕೃತಿ ಉಳಿಸುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ' ಎಂದು ಶಾಲೆಯ ಸಂಸ್ಥಾಪಕ ಬಸವಾನಂದ ಪ್ರಕಾಶ್ ತಿಳಿಸಿದರು.

'ಹಸಿದವರಿಗೆ ಅನ್ನ, ನೊಂದವರಿಗೆ ಸಹಾಯ ಹಸ್ತ ಚಾಚುವ ಜೊತೆಗೆ ಜಾತಿ, ಧರ್ಮ ಮೀರಿ ವಿದ್ಯೆಯನ್ನು ಶಿವಕುಮಾರ ಸ್ವಾಮೀಜಿ ನೀಡಿದ್ದರು' ಎಂದರು.

ಪ್ರಾಂಶುಪಾಲ ಡಿ.ಬಿ. ವಿವೇಕಾನಂದ, ನಿರ್ದೇಶಕ ಡಿ.ಬಿ. ವಿಜಯಾನಂದ ಉಪಸ್ಥಿತರಿದ್ದರು.

ದುಬೈ ಕನ್ನಡಿಗರ ಕೂಟಕ್ಕೆ ಆಯ್ಕೆ

ಬೆಂಗಳೂರು: ದುಬೈ ಕನ್ನಡಿಗರ ಕೂಟದ 2026–28ನೇ ಅವಧಿಗೆ ಅಧ್ಯಕ್ಷರಾಗಿ ಬೆಂಗಳೂರಿನ ಎಂ.ಕೆ. ಅರುಣ್‌ಕುಮಾರ್ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಅರುಣ್ ಕುಮಾರ್

ಪಶ್ಚಿಮ ಏಷ್ಯಾದ ಪ್ರಮುಖ ಕನ್ನಡ ಸಂಘಟನೆಗಳಲ್ಲಿ ದುಬೈ ಕನ್ನಡಿಗರ ಕೂಟವು ಪ್ರಮುಖವಾಗಿ ಗುರುತಿಸಿಕೊಂಡಿದ್ದು, ಕನ್ನಡಿಗರ ಕೂಟ, ದುಬೈಯು 2002 ರಿಂದ ಸ್ಥಾಪನೆಗೊಂಡು, ಎರಡು ದಶಕಗಳಿಂದ ನಿರಂತರವಾಗಿ ಚಟುವಟಿಕೆ ನಡೆಸುತ್ತಾ ಬಂದಿದೆ. ಯುದ್ಧದ ಪರಿಸ್ಥಿತಿ ನೋಡಿಕೊಂಡು ಏಪ್ರಿಲ್‌ನಲ್ಲಿ ಸಂಗೀತ ಸೌರಭ ಕಾರ್ಯ ಕ್ರಮ ಆಯೋಜಿಸಲಾಗುವುದು. ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.7ರಂದು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಅರುಣ್‌ಕುಮಾರ್ ತಿಳಿಸಿದ್ದಾರೆ.



ಬೆಂಗಳೂರಿನ ವಿಜಯನಗರದ ಬಂಡೆ ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ವಿಶೇಷ ಹೂವಿನ ಅಲಂಕಾರ ಹಾಗೂ ಪೂಜೆ ಮಾಡಲಾಯಿತು ಪ್ರಜಾವಾಣಿ ಚಿತ್ರ

ಎತ್ತಿನಹೊಳೆಗೆ ತಾತ್ವಿಕ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 272 ಎಕರೆ ಅರಣ್ಯಗಳಲ್ಲಿ ಕಾಮಗಾರಿ ನಡೆಸಲು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ತಾತ್ವಿಕ ಅನುಮೋದನೆ ನೀಡಿದೆ.

ಈ ಸಂಬಂಧ ಸಚಿವಾಲಯದ ಅರಣ್ಯ ಸಂರಕ್ಷಣಾ ವಿಭಾಗವು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ತಾತ್ವಿಕ ಅನುಮೋದನೆ ಪತ್ರವನ್ನು ಬುಧವಾರ ಕೊಟ್ಟಿದೆ. ಸಾಮಾನ್ಯ 28 ಹಾಗೂ ಆರು ವಿಶೇಷ ಷರತ್ತುಗಳನ್ನು ವಿಧಿಸಲಾಗಿದೆ. ಈ ಷರತ್ತುಗಳನ್ನು ಪಾಲಿಸಿದ ಬಳಿಕ ಅಂತಿಮ ಅನುಮೋದನೆ ನೀಡಲಾಗುವುದು ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಅರಣ್ಯ ಬಳಕೆಗೆ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿಯು ಕಳೆದ ತಿಂಗಳು ಷರತ್ತುಬದ್ಧ ಒಪ್ಪಿಗೆ ಕೊಟ್ಟಿತ್ತು.


ಶ್ರೀನಿಧಿ ಸೌಹಾರ್ದ ಬ್ಯಾಂಕ್: ₹ 836 ಕೋಟಿ ವ್ಯವಹಾರ

ಬೆಂಗಳೂರು: ಒಟ್ಟು 9 ಶಾಖೆಗಳನ್ನು ಹೊಂದಿರುವ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2025–26ನೇ ಸಾಲಿನಲ್ಲಿ ₹ 836.23 ಕೋಟಿ ವ್ಯವಹಾರ ನಡೆಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಸದಾಶಿವರೆಡ್ಡಿ ತಿಳಿಸಿದರು. ₹ 7.92 ಕೋಟಿ ನಿವ್ವಳ ಲಾಭ ಗಳಿಸಿದೆ. ಬ್ಯಾಂಕಿನ ಠೇವಣಿ ₹ 493.59 ಕೋಟಿ, ಸಾಲ ಮತ್ತು ಮುಂಗಡಗಳು ₹342.64 ಕೋಟಿ. ನಿವ್ವಳ ನಿಷ್ಕ್ರಿಯ ಆಸ್ತಿ ಪ್ರಮಾಣ ಶೂನ್ಯ ಎಂದು ಮಾಹಿತಿ ನೀಡಿದರು.

ನಿಧನ ವಾರ್ತೆ

ಕೆ.ಎನ್. ಯಲ್ಲಪ್ಪ

ಕೆ.ಆರ್.ಪುರ: ಶ್ರೀಮಾರುತಿ ಬಲಿಜ ಸಂಘದ ಅಧ್ಯಕ್ಷ, ಕೆ.ಆರ್. ಪುರದ ನಿವಾಸಿ ಕೆ.ಎನ್.ಯಲ್ಲಪ್ಪ (75) ಅವರು ಗುರುವಾರ ಬೆಳಿಗ್ಗೆ ನಿಧನರಾದರು.



ಮೃತರಿಗೆ ಪತ್ನಿ, ಇಬ್ಬರು ಗಂಡು ಮಕ್ಕಳಿದ್ದಾರೆ. ಕೆ.ಎನ್.ಯಲ್ಲಪ್ಪ ಅವರು ಬಲಿಜ ಸಮಾಜದ ಮುಖಂಡರಾಗಿ ಗುರುತಿಸಿಕೊಂಡು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಮೃತರ ಅಂತ್ಯಕ್ರಿಯೆ ಕೆ.ಟಿ.ವಿ. ಬಡಾವಣೆ ಸ್ವಂತ ಜಾಗದಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸೆಟ್‌ಬ್ಯಾಕ್ ಉಲ್ಲಂಘನೆ: ಶೇ 15ಕ್ಕೆ ಏರಿಕೆ

ಪಿಸಿ ಇಲ್ಲದಿದ್ದರೆ ದಂಡ; ಕರಡು ಅಧಿಸೂಚನೆ ಪ್ರಕಟ • ಆಕ್ಷೇಪಣೆಗೆ 30 ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಕಟ್ಟಡಗಳ ಸೆಟ್‌ಬ್ಯಾಕ್ ಉಲ್ಲಂಘನೆಯನ್ನು ಶೇ 5ರಿಂದ ಶೇ 15ಕ್ಕೆ ವಿಸ್ತರಿಸಿ ಕರಡು ಅಧಿಸೂಚನೆಯನ್ನು ಆಯಾ ನಗರ ಪಾಲಿಕೆ ಆಯುಕ್ತರು ಹೊರಡಿಸಿದ್ದಾರೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಅಡಿಯಲ್ಲಿ ಸೆಟ್‌ಬ್ಯಾಕ್ ಉಲ್ಲಂಘನೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಏಪ್ರಿಲ್ 1ರಂದು ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ನಾಗರಿಕರು ಆಕ್ಷೇಪಣೆ ಸಲ್ಲಿಸಲು 30 ದಿನಗಳ ಅವಕಾಶ ನೀಡಲಾಗಿದೆ. ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ, ನಿರ್ಮಾಣವಾಗುತ್ತಿರುವ ಹಾಗೂ ನಿರ್ಮಾಣವಾಗಲಿರುವ ಕಟ್ಟಡಗಳಿಗೆ ಸೆಟ್‌ಬ್ಯಾಕ್ ಉಲ್ಲಂಘನೆ ಸಡಿಲಿಕೆಯಾಗಿದ್ದು, ದಂಡ ಪಾವತಿಸಿ ಸಕ್ರಮ ಮಾಡಿಕೊಳ್ಳಬಹುದು.

ಸೆಟ್‌ಬ್ಯಾಕ್ ಉಲ್ಲಂಘನೆಗೆ ವಿನಾಯಿತಿ ನೀಡುವ ವರದಿ 'ಸೆಟ್‌ಬ್ಯಾಕ್ ಉಲ್ಲಂಘನೆ: ಶೇ 15ಕ್ಕೆ ಏರಿಕೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಮಾರ್ಚ್ 4ರಂದು ಪ್ರಕಟವಾಗಿತ್ತು.

ಕರಡು ಅಧಿಸೂಚನೆಯಂತೆ, ಪ್ರಸ್ತುತ ಚಾಲ್ತಿಯಲ್ಲಿರುವ ಸೆಟ್‌ಬ್ಯಾಕ್‌ನಲ್ಲಿ ಎಡ–ಬಲ, ಹಿಂದೆ–ಮುಂದೆ ಎಂಬ ಲೆಕ್ಕಾಚಾರವನ್ನು ಕೈಬಿಟ್ಟು, ಒಟ್ಟು ಶೇ 15ರಷ್ಟು ಸೆಟ್‌ಬ್ಯಾಕ್ ಉಲ್ಲಂಘನೆಯಾಗಿದ್ದರೆ ಅದನ್ನು ಸಕ್ರಮ ಮಾಡಲಾಗುತ್ತದೆ.

ಪಿಸಿ ಇಲ್ಲದಿದ್ದರೆ ದಂಡ: ನಕ್ಷೆ ಮಂಜೂರಾದ ಮೇಲೆ ಕಟ್ಟಡ ನಿರ್ಮಾಣಕ್ಕೆ ಮೊದಲು, ಅಡಿಪಾಯ ಹಾಕಿ (ಪ್ಲಿಂತ್ ಪ್ರಮಾಣಪತ್ರ) ಅದಕ್ಕೆ ಪ್ರಮಾಣ ಪತ್ರ ಪಡೆಯಬೇಕು. ಇದನ್ನು ಉಲ್ಲಂಘಿಸಿದರೆ, ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ಮಾರ್ಗಸೂಚಿ ದರದಲ್ಲಿ ವಸತಿ ಕಟ್ಟಡಗಳಿಗೆ ಶೇ 0.07ರಷ್ಟು, ವಾಣಿಜ್ಯ ಕಟ್ಟಡಗಳಿಗೆ ಶೇ 0.10ರಷ್ಟು ದಂಡ ವಿಧಿಸಲಾಗುತ್ತದೆ. ಮಾರ್ಗಸೂಚಿ ದರವನ್ನು ಪ್ರತಿ ಚದರ ಮೀಟರ್‌ಗೆ ಕನಿಷ್ಠ ₹50 ಸಾವಿರ ಎಂದು ನಿಗದಿಯಾಗಿದೆ. ಕಟ್ಟಡದ ಎತ್ತರದ ಉಲ್ಲಂಘನೆ ಪ್ರಮಾಣವನ್ನು ಶೇ 5ರಿಂದ ಶೇ 7.5ಕ್ಕೆ ಏರಿಸಲಾಗುತ್ತದೆ. ಎಫ್‌ಎಆರ್ (ಫ್ಲೋರ್ ಏರಿಯಾ ರೇಷಿಯೊ) ಉಲ್ಲಂಘನೆ ಪ್ರಮಾಣವನ್ನು ಶೇ 5ರಿಂದ ಶೇ 15ಕ್ಕೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ. ಈ ಎಲ್ಲ ಉಲ್ಲಂಘನೆ ಪ್ರಮಾಣ 5 ಸಾವಿರ ಚದರಡಿ ಒಳಗಿನ ನಿವೇಶನಗಳಿಗೆ ಮಾತ್ರ ಅನ್ವಯ ಆಗಲಿದೆ.

'ವಿದ್ಯುತ್, ನೀರಿನ ಸಂಪರ್ಕಕ್ಕೆ ಅನುಕೂಲ'

ನಗರದ ವ್ಯಾಪ್ತಿಯಲ್ಲಿ ಭೂಮಿಗೆ ಅಧಿಕ ಬೆಲೆ ಇರುವುದು ಸೇರಿದಂತೆ ಹಲವು ಕಾರಣಗಳಿಂದ ನಿವೇಶನ ಮಾಲೀಕರು ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕೆಲವೊಂದು ಬದಲಾವಣೆಗಳೊಂದಿಗೆ ಕಡಿಮೆ ಜಾಗಗಳನ್ನು ಬಿಟ್ಟು ಹೆಚ್ಚುವರಿ ಕಟ್ಟಡ ನಿರ್ಮಾಣ ಮಾಡಿ ಸಂಕಷ್ಟ ಅನುಭವಿಸುತ್ತಿದ್ದಾರೆ. ಇಂತಹ, ಬಹುತೇಕ ಕಟ್ಟಡಗಳಲ್ಲಿ ಉಲ್ಲಂಘನೆ ಪ್ರಮಾಣವು ಶೇ 5ಕ್ಕಿಂತ ಹೆಚ್ಚಾಗಿರುತ್ತದೆ. ಈ ರೀತಿ ನಿರ್ಮಾಣವಾಗಿರುವ ಹಲವಾರು ಕಟ್ಟಡಗಳಿಗೆ ನಗರ ಪಾಲಿಕೆಗಳಿಂದ ಸ್ವಾಧೀನಾನುಭವ ಪ್ರಮಾಣ ಪತ್ರ ದೊರೆಯದೇ ಕಟ್ಟಡಗಳಿಗೆ ನೀರು ಸರಬರಾಜು ಹಾಗೂ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ ಹೀಗಾಗಿ ಶೇ 15ರಷ್ಟು ಉಲ್ಲಂಘನೆವರೆಗೆ ದಂಡ ಪಾವತಿಸಿ ಸಕ್ರಮ ಮಾಡಿಕೊಳ್ಳಬಹುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

'ಈ ತಿದ್ದುಪಡಿಯು ಬೆಂಗಳೂರು ನಗರದ ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಸರ್ಕಾರವು ಕೈಗೊಂಡಿರುವ ಒಂದು ಮಹತ್ವಪೂರ್ಣವಾದ ಮತ್ತು ಜನಪರ ಕಾಳಜಿಯ ನಿರ್ಧಾರವಾಗಿದೆ. ಇದರ ಹೊರತಾದ ಹೆಚ್ಚುವರಿ ಉಲ್ಲಂಘನೆಗಳ ವಿಚಾರದಲ್ಲಿ ಇನ್ನೂ ಹೆಚ್ಚಿನ ಕಠಿಣ ಅನುಷ್ಠಾನ ಕ್ರಮಗಳನ್ನು ಜಾರಿಗೊಳಿಸಲು ಯೋಚಿಸಲಾಗುತ್ತಿದೆ' ಎಂದಿದ್ದಾರೆ.

'ಜನರ ಸಂಕಷ್ಟಗಳನ್ನು ಬಗೆಹರಿಸಲು ಕೈಗೊಂಡಿರುವ ನಿರ್ಧಾರ ಮತ್ತು ಜನ ಸಾಮಾನ್ಯರ ಆರೋಗ್ಯಕರ ಜೀವನಕ್ಕಾಗಿ ಬೇಕಾದ ಗಾಳಿ, ಬೆಳಕು ಮತ್ತು ಸುರಕ್ಷತೆ ಮಾನದಂಡಗಳನ್ನು ಪರಿಗಣಿಸಿ, ತಿದ್ದುಪಡಿಯನ್ನು ರೂಪಿಸಲಾಗಿದೆ. ಈ ಕರಡು ಅಧಿಸೂಚನೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಂತರ್ಜಾಲ https://updates.bbmpgov.in/public ರಲ್ಲಿ ಸಾರ್ವಜನಿಕರು ವೀಕ್ಷಿಸಬಹುದಾಗಿರುತ್ತದೆ ಎಂದು ತಿಳಿಸಿದ್ದಾರೆ.


ಕಿಶೋರ ಸ್ವಾಸ್ಥ್ಯ: ಸ್ನೇಹ ಕೇಂದ್ರಗಳ ವಿಸ್ತರಣೆ

ಬೆಂಗಳೂರು: ಹದಿಹರೆಯದವರ ಆರೋಗ್ಯ ಸೇವೆಗಳನ್ನು ಬಲಪಡಿಸಲು 'ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ'ದಡಿ (ಆರ್‌ಕೆಎಸ್‌ಕೆ) ರಾಜ್ಯದಾದ್ಯಂತ ಜಿಲ್ಲಾ ಆಸ್ಪತ್ರೆಯಿಂದ ಉಪಕೇಂದ್ರಗಳವರೆಗೆ, ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಸ್ನೇಹ ಕೇಂದ್ರಗಳ ವಿಸ್ತರಣೆ ಹಾಗೂ ಬಲವರ್ಧನೆಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಕೇಂದ್ರಗಳಲ್ಲಿ ಸಮಾಲೋಚನೆ ಸೇವೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಇತರೆ ಆರೋಗ್ಯ ಕಾರ್ಯಕ್ರಮಗಳಡಿ ಲಭ್ಯವಿರುವ ಸಮಾಲೋಚಕರಿಂದ, ಕೇಂದ್ರಗಳಲ್ಲಿ ತರಬೇತಿ ಹೊಂದಿದ ವೈದ್ಯಾಧಿಕಾರಿಗಳು, ಶುಶ್ರೂಷಕರು ಮತ್ತು ಉಪಕೇಂದ್ರದ ಸಿಬ್ಬಂದಿ ಸೇವೆ ನೀಡಲು ತಿಳಿಸಲಾಗಿದೆ.

ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 'ಸಮಗ್ರ ಸಮಾಲೋಚನಾ ಕೇಂದ್ರ (ಎಸ್‌ಎಸ್‌ಕೆ) ಸ್ಥಾಪಿಸಬೇಕು. ಸಮಾಲೋಚಕರನ್ನು ಬಳಸಿಕೊಳ್ಳಬೇಕು. ಸಮಾಲೋಚನೆಗೆ ಅಗತ್ಯ ಪರಿಕರ ಕಲ್ಪಿಸಿ, ಗೋಪ್ಯತೆ ಕಾಯ್ದುಕೊಳ್ಳಬೇಕು ಎಂದು ಹೇಳಲಾಗಿದೆ.

ಮಕ್ಕಳಿಗೆ ಹೆಚ್ಚಿನ ಸೇವೆ ಒದಗಿಸಲು ಪ್ರತಿ ತಿಂಗಳ 13ರಂದು ಮಕ್ಕಳ ತಜ್ಞರು, ಮನೋವೈದ್ಯರು, ಮೂಳೆ ಚಿಕಿತ್ಸಕರ ಸಮಾಲೋಚನೆ ಆಯೋಜಿಸಬೇಕು. ಶಾಲೆಗಳು ಮತ್ತು ಕ್ಷೇತ್ರ ಭೇಟಿಯ ಸಮಾಲೋಚಕರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಪಾವತಿಗೆ ಶಿಕ್ಷಣ ಇಲಾಖೆ ಕ್ರಮವಹಿಸಲು ತಿಳಿಸಲಾಗಿದೆ.



ಜಿಬಿಎ, ನಗರ ಪಾಲಿಕೆಗಳ ಲೋಗೊ ಅನಾವರಣ

ಜಿಬಿಎ | ಉತ್ತರ ನಗರ ಪಾಲಿಕೆ | ದಕ್ಷಿಣ ನಗರ ಪಾಲಿಕೆ | ಪೂರ್ವ ನಗರ ಪಾಲಿಕೆ | ಪಶ್ಚಿಮ ನಗರ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದು ನಗರ ಪಾಲಿಕೆಗಳ ಲೋಗೊವನ್ನು ಆಯಾ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಅನಾವರಣಗೊಳಿಸಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 20ರಂದು ನಡೆದಿದ್ದ ಜಿಬಿಎ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಲೋಗೊವನ್ನು ಅಂತಿಮಗೊಳಿಸಲಾಗಿತ್ತು. ಇವುಗಳನ್ನು ಸದ್ಯದಲ್ಲಿಯೇ ಅನಾವರಣ ಮಾಡುವುದಾಗಿ ಶಿವಕುಮಾರ್ ಹೇಳಿದ್ದರು ಆದರೆ, ಯಾವುದೇ ಅಧಿಕೃತ ಕಾರ್ಯಕ್ರಮವಿಲ್ಲದೆ, ಅಂತರ್ಜಾಲ, ಸಾಮಾಜಿಕ ತಾಣಗಳಲ್ಲಿ ಹೊಸ ಲೋಗೊ ಬಳಸಲಾಗುತ್ತಿದೆ. ಜಿಬಿಎ ಹಾಗೂ ಐದು ನಗರ ಪಾಲಿಕೆಗಳ ಲೋಗೊವನ್ನು ಚಿತ್ರಕಲಾ ಪರಿಷತ್‌ನವರು ಸಿದ್ಧಪಡಿಸಿದ್ದಾರೆ. ಇವುಗಳಿಗೆ ಜಿಬಿಎ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು.

ಹಿಂದಿನ ಬಿಬಿಎಂಪಿಯಲ್ಲಿ ಬಳಸಲಾಗುತ್ತಿದ್ದ ಕೆಂಪೇಗೌಡರ ಗೋಪುರದ ಜೊತೆಗೆ ಕೆಂಪೇಗೌಡರ ಚಿತ್ರವನ್ನು ಅಳವಡಿಸಿ ಜಿಬಿಎ ಲೋಗೊ ಸಿದ್ಧಪಡಿಸಲಾಗಿದೆ. ಇನ್ನು ಐದು ನಗರ ಪಾಲಿಕೆಗಳ ಲೋಗೊದಲ್ಲಿ ಕೆಂಪೇಗೌಡ ಗೋಪುರ ಮಾತ್ರವಿದ್ದು, ಪ್ರತ್ಯೇಕ ಬಣ್ಣವನ್ನು ಅಳವಡಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಗರ ಪಾಲಿಕೆಗಳ ಹೆಸರನ್ನು ವೃತ್ತಾಕಾರದಲ್ಲಿ ಬಳಸಲಾಗಿದೆ.

ಖಾತಾ ಬದಲಾವಣೆಗೆ ₹3 ಲಕ್ಷ ಲಂಚ: ಆರ್‌ಐ, ಟಿಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಕಟ್ಟಡವೊಂದರ ಖಾತಾ ಬದಲಾವಣೆ ಮಾಡಿಕೊಡಲು ₹3 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಯ ತಣಿಸಂದ್ರ ವಾರ್ಡ್‌ನ ಕಂದಾಯ ನಿರೀಕ್ಷಕ (ಆರ್‌ಐ) ವೆಂಕಟೇಶ್ ಮತ್ತು ತೆರಿಗೆ ನಿರೀಕ್ಷಕ (ಟಿಐ) ಶ್ರೀನಿವಾಸ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಹೆಗ್ಗಡೆ ನಗರ ನಿವಾಸಿ ನಯಾಮತ್ ಉಲ್ಲಾ ಖಾನ್ ಅವರು ತಣಿಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ವಸತಿ ಕಟ್ಟಡ ಹೊಂದಿದ್ದಾರೆ. ಆ ಕಟ್ಟಡದ ಖಾತಾ ಬದಲಾವಣೆಗೆ ಅವರು ಅರ್ಜಿ ಸಲ್ಲಿಸಿದ್ದರು. ಆ ಕೆಲಸ ಮಾಡಿಕೊಡಲು ವೆಂಕಟೇಶ್ ಮತ್ತು ಶ್ರೀನಿವಾಸ ಅವರು ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ನಯಾಮತ್ ಅವರು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಎಸ್‌ಪಿ ಕೋನ ವಂಶಿಕೃಷ್ಣ ಅವರ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಪೂವಯ್ಯ.ಕೆ ಅವರ ತಂಡವು ಕಾರ್ಯಾಚರಣೆ ರೂಪಿಸಿತ್ತು. ಅದರಂತೆ ನಯಾಮತ್ ಅವರು ಆರೋಪಿಗಳ ಕಚೇರಿಗೆ ತೆರಳಿ, ಹಣ ನೀಡಿದ್ದರು. ಆಗ ದಾಳಿ ನಡೆಸಿ ಆರೋಪಿಗಳಿಬ್ಬರನ್ನೂ ಬಂಧಿಸಲಾಯಿತು. ತನಿಖೆ ಮುಂದುವರೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಲೈಬ್ರರಿ ಅಪ್ರೆಂಟಿಸ್: ಸಂದರ್ಶನ 6ಕ್ಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಅವಧಿಗೆ ಲೈಬ್ರರಿ ಅಪ್ರೆಂಟಿಸ್ ಟ್ರೈನಿಗಳ ಆಯ್ಕೆಗಾಗಿ ಏಪ್ರಿಲ್ 6ರಂದು ಬೆಳಿಗ್ಗೆ 11 ಗಂಟೆಗೆ ಜ್ಞಾನಭಾರತಿ ಆವರಣದಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಆಸಕ್ತರು ಭಾಗವಹಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ತಿಂಗಳು ₹15 ಸಾವಿರ ಶಿಷ್ಯವೇತನ ನೀಡಲಾಗುತ್ತದೆ. ಅಭ್ಯರ್ಥಿಗಳು ಮಾಹಿತಿಗೆ ಬೆಂಗಳೂರು ವಿಶ್ವ ವಿದ್ಯಾಲಯದ https://bangaloreuniversity.Karnataka.gov.in ಜಾಲತಾಣಕ್ಕೆ ಭೇಟಿ ನೀಡಿ, ಅರ್ಜಿ ನಮೂನೆಯಲ್ಲಿ ಸ್ವವಿವರ ಭರ್ತಿ ಮಾಡಬೇಕು. ದಾಖಲೆ ಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.


ಚೈತನ್ಯ ಸ್ಕೂಲ್ ವಿದ್ಯಾರ್ಥಿಗಳು ವಿಶ್ವಚಾಂಪಿಯನ್

ಬೆಂಗಳೂರು: ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾದ 'ಎನ್‌ಎಸ್‌ಎಸ್ ಸ್ಪೇಸ್ ಸೆಟಲ್ಮೆಂಟ್' ಸ್ಪರ್ಧೆಯಲ್ಲಿ ಶ್ರೀ ಚೈತನ್ಯ ಸ್ಕೂಲ್ ಸತತ 15ನೇ ಬಾರಿ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಈ ಜಾಗತಿಕ ಸ್ಪರ್ಧೆಯಲ್ಲಿ 31ದೇಶಗಳ ವಿದ್ಯಾರ್ಥಿಗಳು ಭಾಗವಹಿಸಿದ್ದು, 131 ಪ್ರಾಜೆಕ್ಟ್‌ಗಳು ಬಹುಮಾನ ಪಡೆದವು. ಅವುಗಳಲ್ಲಿ ಭಾರತದ 80 ಪ್ರಾಜೆಕ್ಟ್‌ಗಳು ಸೇರಿವೆ. ಶ್ರೀ ಚೈತನ್ಯ ಸ್ಕೂಲ್‌ನ ವಿದ್ಯಾರ್ಥಿಗಳು 57 ಪ್ರಾಜೆಕ್ಟ್‌ಗಳಿಗೆ ಬಹುಮಾನ ಪಡೆಯುವ ಮೂಲಕ ಪಾರುಪತ್ಯ ಸಾಧಿಸಿದ್ದಾರೆ. ದೇಶದ ವಿದ್ಯಾರ್ಥಿಗಳು ಜಯಿಸಿದ ಒಟ್ಟು ಬಹುಮಾನಗಳಲ್ಲಿ ಶೇ 71ರಷ್ಟು ಬಹುಮಾನವನ್ನು ಚೈತನ್ಯ ಸ್ಕೂಲ್ ವಿದ್ಯಾರ್ಥಿಗಳೇ ಪಡೆದಿದ್ದಾರೆ ಎಂದು ಶ್ರೀ ಚೈತನ್ಯ ಸಂಸ್ಥೆಯ ನಿರ್ದೇಶಕಿ ಸೀಮಾ ತಿಳಿಸಿದ್ದಾರೆ.

'ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಮಾತ್ರ ವಿಶ್ವದಲ್ಲಿ ಈ ಮೈಲಿಗಲ್ಲು ಸಾಧಿಸಿದ್ದಾರೆ. ವಿಜೇತ ಬಹುಮಾನಗಳಲ್ಲಿ 6 ಪ್ರಾಜೆಕ್ಟ್‌ಗಳು ಪ್ರಥಮ ಬಹುಮಾನ ಪಡೆದರೆ, 11 ಪ್ರಾಜೆಕ್ಟ್‌ಗಳು ದ್ವಿತೀಯ ಬಹುಮಾನ, 10 ಪ್ರಾಜೆಕ್ಟ್‌ಗಳು ತೃತೀಯ ಬಹುಮಾನ ಹಾಗೂ 30 ಪ್ರಾಜೆಕ್ಟ್‌ಗಳು ಸಮಾಧಾನಕರ ಬಹುಮಾನ ಪಡೆದಿವೆ. ಬಹುಮಾನಿತ 57 ಪ್ರಾಜೆಕ್ಟ್‌ಗಳಲ್ಲಿ 549 ವಿದ್ಯಾರ್ಥಿಗಳು ಭಾಗವಹಿಸಿದ್ದರು' ಎಂದು ಹೇಳಿದ್ದಾರೆ.

'ಭಾರತ ಹೊರತುಪಡಿಸಿ ಉಳಿದ 30 ದೇಶಗಳ ವಿದ್ಯಾರ್ಥಿಗಳು 54 ಪ್ರಾಜೆಕ್ಟ್‌ಗಳಲ್ಲಿ ಬಹುಮಾನ ಗಳಿಸಿದರೆ, ಶ್ರೀ ಚೈತನ್ಯ ಸ್ಕೂಲ್‌ನ ವಿದ್ಯಾರ್ಥಿಗಳು ಅದಕ್ಕಿಂತ ಹೆಚ್ಚಿನ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದು ದೇಶಕ್ಕೆ ಹೆಮ್ಮೆ' ಎಂದಿದ್ದಾರೆ.





ಮುಂಗಾರು ಮಳೆ: ಪೂರ್ವ ಸಿದ್ಧತೆಗೆ ಸೂಚನೆ

ಪ್ರವಾಹ ಪೀಡಿತ ಪ್ರದೇಶಗಳಿಗೆ ಶಾಶ್ವತ ಪರಿಹಾರ ಒದಗಿಸಿ: ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಗೆ ಮುನ್ನ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಐದು ನಗರ ಪಾಲಿಕೆಗಳಿಗೆ ಸೂಚನೆ ನೀಡಿದ್ದಾರೆ.

ಮಳೆಯ ಸಮಯದಲ್ಲಿ ಯಾವುದೇ ತೊಂದರೆ ಅಥವಾ ಪ್ರವಾಹ ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲಾ ಐದು ನಗರ ಪಾಲಿಕೆಗಳು ಹಾಗೂ ಕಾಮಗಾರಿಗಳ ಉಸ್ತುವಾರಿ ವಹಿಸಿರುವ ವಿಭಾಗಗಳು ತಮ್ಮ ವ್ಯಾಪ್ತಿಯಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ನಗರದ ಐದು ಪಾಲಿಕೆಗಳಲ್ಲಿ ವಿಪತ್ತು ನಿರ್ವಹಣೆ ಜವಾಬ್ದಾರಿ ಆಯಾ ಪಾಲಿಕೆಗಳ ಆಯುಕ್ತರದ್ದಾಗಿದೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಳೆಗಾಲಕ್ಕೂ ಮುನ್ನ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಆಯುಕ್ತರಿಗೆ ಸೂಚಿಸಲಾಗಿದೆ.

ಜಿಬಿಎ ವ್ಯಾಪ್ತಿಯಲ್ಲಿ ಈ ಹಿಂದೆ ಗುರುತಿಸಲಾಗಿದ್ದ 209 ಪ್ರವಾಹ ಪೀಡಿತ ಪ್ರದೇಶಗಳ ಪೈಕಿ, 2025ನೇ ಸಾಲಿನಲ್ಲಿ 49 ಪ್ರದೇಶಗಳು ಪ್ರವಾಹ ಪೀಡಿತ ಪ್ರದೇಶಗಳಾಗಿ ಉಳಿದಿವೆ. ಈ ಪ್ರದೇಶಗಳಲ್ಲಿ ಪ್ರವಾಹ ತಡೆಗಟ್ಟಲು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿ ಶಾಶ್ವತ ಪರಿಹಾರ ಒದಗಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಆದ್ಯತೆಯ ಮೇಲೆ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ರಾಜಕಾಲುವೆಗಳಲ್ಲಿ ಹೂಳೆತ್ತಿ ಸ್ವಚ್ಛಗೊಳಿಸಬೇಕು. ರಸ್ತೆ ನಿರ್ವಹಣಾ ತಂಡಗಳ ಮೂಲಕ ಹೂಳು ತೆಗೆಯುವ ಕಾರ್ಯವನ್ನು ಕೈಗೊಳ್ಳಬೇಕು. ನಿಯಂತ್ರಣ ಕೊಠಡಿಗಳಿಗೆ ಅಧಿಕಾರಿಗಳನ್ನು ನಿಯೋಜಿಸಿ, ವಿಪತ್ತು ನಿರ್ವಹಣಾ ತಂಡಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಮಳೆಗಾಲ ಆರಂಭವಾಗುವ ಮುನ್ನ ನಗರ ಪಾಲಿಕೆಗಳ ನಿಯಂತ್ರಣ ಕೊಠಡಿಗಳಿಗೆ ಪಾಲಿಕೆ, ಬೆಸ್ಕಾಂ ಹಾಗೂ ಜಲಮಂಡಳಿ ಅಧಿಕಾರಿಗಳನ್ನು ನಿಯೋಜಿಸಲು ಕ್ರಮವಹಿಸಬೇಕು. ಇದರ ಜೊತೆಗೆ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಅಧಿಕಾರಿಗಳ ಪಟ್ಟಿಯನ್ನೂ ಸಿದ್ಧಪಡಿಸಬೇಕು.

ಗೆದ್ದಲಹಳ್ಳಿ ರೈಲ್ವೆ ವೆಂಟ್: ಕಳೆದ ವರ್ಷ ಗೆದ್ದಲಹಳ್ಳಿ ರೈಲ್ವೆ ವೆಂಟ್ ಕಿರಿದಾಗಿದ್ದ ಕಾರಣ ಸಾಯಿ ಲೇಔಟ್, ಪೈ ಲೇಔಟ್ ಮತ್ತು ಎಚ್‌ಬಿಆರ್ ಲೇಔಟ್ ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿತ್ತು. ಈ ರೈಲ್ವೆ ಮಾರ್ಗದಲ್ಲಿ ಹೆಚ್ಚುವರಿ ವೆಂಟ್‌ಗಳ ನಿರ್ಮಾಣ ನಡೆಯುತ್ತಿದ್ದು, ಕಾಮಗಾರಿಯನ್ನು ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು.

ಇಲಾಖೆಗಳು/ಸಂಸ್ಥೆಗಳ ಕಾಮಗಾರಿಗಳು ನಡೆಯುತ್ತಿರುವ ಸ್ಥಳಗಳಲ್ಲಿ ಸಮನ್ವಯ ಸಾಧಿಸಿ, ರಸ್ತೆಗಳಲ್ಲಿ ನೀರು ನಿಲ್ಲದಂತೆ ಹಾಗೂ ಅಗೆದಿರುವ ರಸ್ತೆಗಳನ್ನು ಸಮರ್ಪಕವಾಗಿ ಪುನರ್ ನಿರ್ಮಾಣ ಮಾಡಲು ಕ್ರಮವಹಿಸಬೇಕು ಎಂದು ಸೂಚಿಸಿದ್ದಾರೆ.

'ಕನ್ನಡ ದೋಷರಹಿತವಾಗಿರಲಿ'

ಐದು ನಗರ ಪಾಲಿಕೆಗಳ ವತಿಯಿಂದ ಅಳವಡಿಸಲಾಗುವ ನಾಮಫಲಕಗಳು, ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಣೆಗಳು ಹಾಗೂ ಇತರೆ ಮಾಹಿತಿ ಫಲಕಗಳಲ್ಲಿ ಬಳಸುವ ಕನ್ನಡ ಭಾಷೆ ವ್ಯಾಕರಣ ದೋಷರಹಿತ ಹಾಗೂ ಸರಿಯಾದ ಪದಪ್ರಯೋಗದೊಂದಿಗೆ ಇರಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದ್ದಾರೆ.

ಯಾವುದೇ ನಾಮಫಲಕ ಅಥವಾ ಪ್ರಕಟಣೆ ಹೊರಡಿಸುವ ಮೊದಲು ಅದರಲ್ಲಿರುವ ಕನ್ನಡ ಪದಗಳು, ಲಿಪಿ, ವ್ಯಾಕರಣ, ಕಾಗುಣಿತ ಹಾಗೂ ವಾಕ್ಯರಚನೆಗಳು ಸರಿಯಾಗಿರುವುದನ್ನು ಪರಿಶೀಲಿಸಿ, ದೋಷರಹಿತ ಕನ್ನಡ ಬಳಸುವಂತೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ.

ಬಜೆಟ್‌ಗಳಿಗೆ ಅನುಮೋದನೆ

2026–27ನೇ ಸಾಲಿಗೆ ಐದು ನಗರ ಪಾಲಿಕೆಗಳು ಮಂಡಿಸಿದ್ದ ಬಜೆಟ್‌ನ ಒಟ್ಟಾರೆ ₹20,220.48 ಕೋಟಿ ಮೊತ್ತಕ್ಕೆ ಯಾವುದೇ ಬದಲಾವಣೆ ಇಲ್ಲದೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

ಮಾರ್ಚ್ 27ರಂದು ಕೇಂದ್ರ ನಗರ ಪಾಲಿಕೆ ₹3,427.34 ಕೋಟಿ, ಪೂರ್ವ ನಗರ ಪಾಲಿಕೆ ವತಿಯಿಂದ ₹3,889.98 ಕೋಟಿ ಬಜೆಟ್ ಮಂಡಿಸಲಾಗಿತ್ತು. ಮಾರ್ಚ್ 28ರಂದು ಉತ್ತರ ನಗರ ಪಾಲಿಕೆ ₹4,344 ಕೋಟಿ, ಪಶ್ಚಿಮ ನಗರ ಪಾಲಿಕೆ ₹4,732.73 ಕೋಟಿ ಹಾಗೂ ದಕ್ಷಿಣ ನಗರ ಪಾಲಿಕೆ ₹3826.43 ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದವು. ಆಡಳಿತಾಧಿಕಾರಿ ಮಹೇಶ್ವರ್ ರಾವ್ ಅವರ ಅನುಮೋದನೆಗೊಂಡ ಈ ಬಜೆಟ್‌ಗಳನ್ನು ನಗರಾಭಿವೃದ್ಧಿ ಇಲಾಖೆಗೆ ಪ್ರತ್ಯೇಕವಾಗಿ ಸಲ್ಲಿಸಿ, ಅನುಮೋದನೆಗೆ ಕೋರಲಾಗಿತ್ತು. ಬದಲಾವಣೆ ಇಲ್ಲದೆ ಅದನ್ನು ಅನುಮೋದಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಆಸ್ತಿ ತೆರಿಗೆ: ಶೇ 5ರಷ್ಟು ರಿಯಾಯಿತಿ

ಬೆಂಗಳೂರು: ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ಪ್ರಕಟಿಸಲಾಗಿದೆ.

ಆಸ್ತಿ ತೆರಿಗೆ ರಿಯಾಯಿತಿ ಪ್ರಸಕ್ತ ಆರ್ಥಿಕ ಸಾಲಿಗೆ ಮಾತ್ರ ಅನ್ವಯವಾಗಲಿದ್ದು, ಏಪ್ರಿಲ್ 30ರವರೆಗೆ ಲಭ್ಯವಿರುತ್ತದೆ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಸುದ್ದಿ 2 ನಿಮಿಷ

ಅನುಮಾನಾಸ್ಪದವಾಗಿ ವಾಹನ ಓಡಾಟ: ತನಿಖೆ

ಬೆಂಗಳೂರು: ಬನಶಂಕರಿ ಸೇರಿದಂತೆ ಸುತ್ತಮುತ್ತಲ ಬಡಾವಣೆಗಳಲ್ಲಿ ಬೊಲೆರೊ ವಾಹನದಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಓಡಾಟ ನಡೆಸುತ್ತಿದ್ದಾರೆ ಎಂದು ಸಾರ್ವಜನಿಕರು ಅನುಮಾನ ವ್ಯಕ್ತಪಡಿಸಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಇದುವರೆಗೆ ಯಾರೂ ಅಧಿಕೃತವಾಗಿ ದೂರು ನೀಡಿಲ್ಲ. ಆದರೆ, ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಪರಿಶೀಲನೆ ನಡೆಸಲಾಗಿದೆ. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ವಾಹನ ನಿಲ್ಲಿಸಿ ಆಶೀರ್ವಾದ ಮಾಡುವ ನೆಪದಲ್ಲಿ ಕೆಲವರನ್ನು ಅಡ್ಡಗಟ್ಟಲಾಗಿದೆ. ರಸ್ತೆಯಲ್ಲಿ ತೆರಳುತ್ತಿದ್ದ ಬೊಲೆರೊ ವಾಹನ ಮನೆಯೊಂದರ ಗೇಟ್ ಬಳಿ ಶಾಲಾ ಬಾಲಕಿ ಕಾಣುತ್ತಿದ್ದಂತೆಯೇ ನಿಂತಿದೆ. ಬಳಿಕ ವಾಹನವು ಹಿಮ್ಮುಖವಾಗಿ ಚಲಿಸಿದೆ. ವಾಹನದಲ್ಲಿ ಇದ್ದವರು ಬಾಲಕಿಯ ಬಳಿಗೆ ತೆರಳಿ ಮಾತುಕತೆ ನಡೆಸಿದ್ದಾರೆ. ಈ ವೇಳೆ ಬಾಲಕಿಯನ್ನು ಮನೆಯವರು ಕರೆದಿದ್ದಾರೆ. ತಕ್ಷಣವೇ ವಾಹನ ಸಹಿತ ಅಪರಿಚಿತರು ಪರಾರಿ ಆಗುತ್ತಿರುವ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ.

ವಿಭಜಕಕ್ಕೆ ಆಂಧ್ರ ಬಸ್ ಡಿಕ್ಕಿ



ಬೆಂಗಳೂರು: ಶಿವಾನಂದ ವೃತ್ತದ ಬಳಿ ಆಂಧ್ರಪ್ರದೇಶ ಸಾರಿಗೆ ಸಂಸ್ಥೆಗೆ ಸೇರಿದ ಬಸ್‌ವೊಂದು ಗುರುವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಅನಂತಪುರದ ಮೂಲಕ ನಗರಕ್ಕೆ ಬಸ್ ಬಂದಿತ್ತು. ಅಪಘಾತದಿಂದ ಬಸ್‌ನ ಮುಂಭಾಗದ ಚಕ್ರ ಹಾಗೂ ಎಂಜಿನ್ ಕಿತ್ತು ಹೊರಬಂದಿತ್ತು. ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಹೈಗ್ರೌಂಡ್ಸ್ ಸಂಚಾರ ಠಾಣಾ ಪೊಲೀಸರು ತಿಳಿಸಿದರು.

ಆಭರಣ ಕದ್ದಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಓಬುಳ ರೆಡ್ಡಿ

ಅಪರಾಧ ಸುದ್ದಿ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನದ ಆಭರಣ ಕಳ್ಳತನ ಮಾಡಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಓಬುಳ ರೆಡ್ಡಿ (25) ಬಂಧಿತ ಆರೋಪಿ.

ಕೆಲಸ ಹುಡುಕಿಕೊಂಡು ಆಂಧ್ರ ಪ್ರದೇಶದಿಂದ ನಗರಕ್ಕೆ ಬಂದಿದ್ದ ಆರೋಪಿ, ಠಾಣಾ ವ್ಯಾಪ್ತಿಯ ಕೆಂಪಾಪುರದಲ್ಲಿ ನೆಲಸಿದ್ದ. ಕೆಲಸಕ್ಕೆಂದು ಬಂದು ಮನೆಗೆ ನುಗ್ಗಿ ಚಿನ್ನದ ಆಭರಣ ಕಳ್ಳತನ ಮಾಡುತ್ತಿದ್ದ. ಆರೋಪಿಯಿಂದ ₹15 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೆಬ್ಬಾಳದ ಕೆಂಪಾಪುರದ ನಿವಾಸಿ ಸುಮತಿ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುಮತಿ ಅವರು ಮನೆಗೆಲಸ ಮಾಡುತ್ತಿದ್ದರು. ಮನೆಯಲ್ಲಿದ್ದ ಕಬೋರ್ಡ್‌ನಲ್ಲಿ 100 ಗ್ರಾಂ ಚಿನ್ನಾಭರಣ ಬಚ್ಚಿಟ್ಟಿದ್ದರು. ಮಾರ್ಚ್ 11ರಂದು ಪರಿಶೀಲನೆ ನಡೆಸಿದಾಗ ಆಭರಣ ಇರಲಿಲ್ಲ. ಬಳಿಕ, ದೂರು ನೀಡಿದ್ದರು ಎಂದು ಪೊಲೀಸರು ಹೇಳಿದರು.

ಶೂ ರ್‍ಯಾಕ್‌ನಲ್ಲಿ ಕೀ: ಸುಮತಿ ಅವರು ಮನೆ ಕೆಲಸಕ್ಕೆ ಹೋಗಿದ್ದರೆ, ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಮನೆಯ ಕೀ ಅನ್ನು ಶೂ ರ್‍ಯಾಕ್‌ನಲ್ಲಿ ಬಚ್ಚಿಟ್ಟು ಹೋಗುತ್ತಿದ್ದರು. ಅದನ್ನು ಗಮನಿಸಿದ್ದ ಆರೋಪಿ, ಕೀ ತೆಗೆದುಕೊಂಡು ಮನೆಯ ಬಾಗಿಲು ತೆಗೆದು ಆಭರಣ ಕಳ್ಳತನ ಮಾಡಿಕೊಂಡು ಹೋಗಿದ್ದ ಎಂದು ಪೊಲೀಸರು ಹೇಳಿದರು.

ಕದ್ದ ಚಿನ್ನವನ್ನು ಚಿಕ್ಕಪೇಟೆಯ ಆಭರಣ ಅಂಗಡಿಗೆ ಮಾರಾಟ ಮಾಡಿದ್ದ. ಅಲ್ಲಿಂದ ಚಿನ್ನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನವನ್ನು ಆರೋಪಿ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಮೋಜು–ಮಸ್ತಿಗೆ ಬಳಕೆ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ಚಂದ್ರಾಲೇಔಟ್‌ನ ಭೈರವೇಶ್ವರ ನಗರದಲ್ಲಿ ಹೃದಯವಿದ್ರಾವಕ ಘಟನೆ

ಮಗು ಸಾವು, ನೊಂದ ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಅಗಸ್ತ್ಯ



ಪ್ರತಿಭಾ ವಾಲಿ

ಬೆಂಗಳೂರು: ಬಕೆಟ್‌ನಲ್ಲಿದ್ದ ನೀರಿನಲ್ಲಿ ಮುಳುಗಿ, 11 ತಿಂಗಳ ಕಂದಮ್ಮ ಮೃತಪಟ್ಟಿದ್ದು, ಆ ಘಟನೆಯ ಬಳಿಕ ನೊಂದ ತಾಯಿ ಸಹ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ಚಂದ್ರಾ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಭೈರವೇಶ್ವರ ನಗರದಲ್ಲಿ ನಡೆದಿದೆ.

ಅಗಸ್ತ್ಯ ಮೃತ ಮಗು. ಮಗುವಿನ ತಾಯಿ, ಸಾಫ್ಟ್‌ವೇರ್ ಎಂಜಿನಿಯರ್ ಪ್ರತಿಭಾ ವಾಲಿ (29) ಆತ್ಮಹತ್ಯೆ ಮಾಡಿಕೊಂಡವರು.

ಪ್ರತಿಭಾ ಅವರ ಪತಿ ಮಹಾಂತೇಶ್ ನೀಡಿದ ದೂರಿನ ಮೇಲೆ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಮಹಾಂತೇಶ್ ಅವರು ಪೀಣ್ಯ ಎರಡನೇ ಹಂತದಲ್ಲಿರುವ 'ಐಸ್ ಡಿಸೈನರ್' ಕಂಪನಿಯಲ್ಲಿ ಎಂಜಿನಿಯರ್ ಆಗಿದ್ದಾರೆ. ಪ್ರತಿಭಾ ಅವರೂ ಸಿಲ್ಕ್ ಬೋರ್ಡ್ ಬಳಿಯ ಇನ್ ಟ್ರೈಮ್‌ಟೆಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಚಿಕ್ಕ ಮಗುವಿದ್ದ ಕಾರಣ ಪ್ರತಿಭಾ ಮನೆಯಿಂದಲೇ ಕಂಪನಿ ಕೆಲಸ ಮಾಡುತ್ತಿದ್ದರು. ನಾಲ್ಕು ವರ್ಷದಿಂದ ಭೈರವೇಶ್ವರ ನಗರದಲ್ಲಿ ಬಾಡಿಗೆ ಮನೆಯಲ್ಲಿ ದಂಪತಿ ನೆಲಸಿದ್ದರು ಎಂದು ಮೂಲಗಳು ಹೇಳಿವೆ.

ಮಹಾಂತೇಶ್ ಬುಧವಾರ ಬೆಳಿಗ್ಗೆ 9ರ ಸುಮಾರಿಗೆ ಕೆಲಸಕ್ಕೆ ತೆರಳಿದ್ದರು. ತಾಯಿ–ಮಗು ಮನೆಯಲ್ಲೇ ಇದ್ದರು. ಬುಧವಾರ ಮಧ್ಯಾಹ್ನ ಮಗು ಆಟವಾಡುತ್ತಿತ್ತು. ಮಗುವನ್ನು ಅದೇ ಸ್ಥಳದಲ್ಲಿ ಬಿಟ್ಟು ಪ್ರತಿಭಾ ಮಹಡಿಯಲ್ಲಿ ಒಣಗಲು ಹಾಕಿದ್ದ ಬಟ್ಟೆಗಳನ್ನು ತರಲು ಹೋಗಿದ್ದರು. ಆ ಸಮಯದಲ್ಲಿ ಮಗು ಆಟವಾಡುತ್ತಾ ಸ್ನಾನದ ಕೊಠಡಿಯತ್ತ ಹೋಗಿತ್ತು. ಬಕೆಟ್‌ನಲ್ಲಿ ತುಂಬಿದ್ದ ನೀರಿನಲ್ಲಿ ಮುಳುಗಿ ಮಗು ಉಸಿರುಗಟ್ಟಿ ಮೃತಪಟ್ಟಿತ್ತು.

ಆಘಾತಕ್ಕೆ ಒಳಗಾಗಿದ್ದ ತಾಯಿ: ಬಟ್ಟೆ ತೆಗೆದುಕೊಂಡು ಮನೆಯ ಒಳಗೆ ಬಂದಾಗ ಉಸಿರುಗಟ್ಟಿ ಮಗು ಮೃತಪಟ್ಟಿರುವುದನ್ನು ಕಂಡು ತಾಯಿ ಆಘಾತಕ್ಕೆ ಒಳಗಾಗಿದ್ದರು. ಬಳಿಕ ಅವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಬುಧವಾರ ಸಂಜೆ 6.30ರ ಸುಮಾರಿಗೆ ಮಹಾಂತೇಶ್ ಅವರು ಕಚೇರಿಯಿಂದ ಮನೆಗೆ ಬಂದಿದ್ದರು. ಒಳಗಿನಿಂದ ಬಾಗಿಲನ್ನು ಲಾಕ್ ಮಾಡಿಕೊಳ್ಳಲಾಗಿತ್ತು. ಕಿಟಕಿಯ ಒಳಗಡೆ ಭಾಗದಲ್ಲಿದ್ದ ಕೀಯನ್ನು ತೆಗೆದುಕೊಂಡು ಬಾಗಿಲು ತೆರೆದು ಪರಿಶೀಲಿಸಿದಾಗ ಪ್ರತಿಭಾ ನೇಣು ಹಾಕಿಕೊಂಡಿರುವುದು ಪತ್ತೆ ಆಗಿತ್ತು. ಹಾಸಿಗೆ ಮೇಲೆ ಮಗುವಿನ ಮೃತದೇಹವಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಚಂದ್ರಾಲೇಔಟ್ ಪೊಲೀಸರು, ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

15 ಮಾತ್ರೆ ಸೇವಿಸಿದ್ದ ತಾಯಿ

ನೇಣು ಹಾಕಿಕೊಳ್ಳುವುದಕ್ಕೂ ಮುನ್ನ ಪ್ರತಿಭಾ ಮನೆಯಲ್ಲಿ ಇದ್ದ 15 ಮಾತ್ರೆಗಳನ್ನು ಸೇವಿಸಿದ್ದರು. ಬಳಿಕ, ಚಾಕುವಿನಿಂದ ಕೈಯನ್ನು ಕೊಯ್ದುಕೊಂಡಿದ್ದರು. ನಂತರ, ಜೋಕಾಲಿಯ ಹುಕ್‌ಗೆ ಸೀರೆ ಕಟ್ಟಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಅಂಶಗಳನ್ನು ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ.

'ಅಗಸ್ತ್ಯನನ್ನು ಪ್ರತಿಭಾ ತುಂಬಾ ಪ್ರೀತಿಸುತ್ತಿದ್ದಳು. ಅವನು ಮೃತಪಟ್ಟ ದುಃಖದಲ್ಲಿ ಆಕೆಯೂ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಮಹಾಂತೇಶ್ ರೋದಿಸಿದರು.

'ನನ್ನನ್ನು ಕ್ಷಮಿಸಿ'

'ನನ್ನ ಮಗ ನೀರಿನಲ್ಲಿ ಬಿದ್ದು ಉಸಿರುಗಟ್ಟಿ ಮೃತಪಟ್ಟಿದ್ದಾನೆ. ಅವನನ್ನು ಉಳಿಸಿಕೊಳ್ಳಲು ಆಗಲಿಲ್ಲ. ನನ್ನನ್ನು ಕ್ಷಮಿಸಿ' ಎಂದು ಪ್ರತಿಭಾ ಅವರು ಪತ್ರ ಬರೆದಿದ್ದಾರೆ.

'ಪ್ರತಿಭಾ ಅವರು ಇಂಗ್ಲಿಷ್‌ನಲ್ಲಿ ಬರೆದಿದ್ದರು ಎನ್ನಲಾದ ಪತ್ರವನ್ನು ವಶಕ್ಕೆ ಪಡೆಯಲಾಗಿದೆ. ಹಾಸಿಗೆಯ ಪಕ್ಕದಲ್ಲಿ ಪತ್ರವಿತ್ತು. ಕೈಬರಹ ಅವರದ್ದೇ ಹೌದೋ ಅಲ್ಲವೋ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಹಣಕಾಸು ವಿಚಾರಕ್ಕೆ ಗಲಾಟೆ: ಪತ್ನಿ ಕೊಲೆ



ಕಾವ್ಯಾ

ಬೆಂಗಳೂರು: ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯ ನಾಗಸಂದ್ರದ ಮನೆ ಯೊಂದರಲ್ಲಿ ಹಣಕಾಸಿನ ವಿಚಾರಕ್ಕೆ ಪತ್ನಿ ಹಾಗೂ ಪತಿಯ ನಡುವೆ ಆರಂಭವಾದ ಗಲಾಟೆಯು ಪತ್ನಿಯ ಕೊಲೆಯಲ್ಲಿ ಅಂತ್ಯವಾಗಿದೆ.

ಕಾವ್ಯಾ (34) ಕೊಲೆಯಾದವರು.

ಪತ್ನಿಯ ಕುತ್ತಿಗೆ ಮೇಲೆ ಪತಿ ದರಿಯಪ್ಪ ಕಾಲಿಟ್ಟು ತುಳಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ದರಿಯಪ್ಪನನ್ನು ಪೀಣ್ಯ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿಯ ದಂಪತಿ ನಾಗಸಂದ್ರದಲ್ಲಿ ನೆಲಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ದರಿಯಪ್ಪ ಗುತ್ತಿಗೆ ಕೆಲಸ ಮಾಡುತ್ತಿದ್ದ. ಹಣಕಾಸಿನ ವಿಚಾರಕ್ಕೆ ದಂಪತಿ ನಡುವೆ ಒಂದು ವಾರದಿಂದ ಗಲಾಟೆ ನಡೆಯುತ್ತಿತ್ತು. ಬುಧವಾರ ರಾತ್ರಿ ₹2 ಲಕ್ಷ ಹಣವನ್ನು ದರಿಯಪ್ಪ ತಂದು ಮನೆಯಲ್ಲಿ ಇಟ್ಟಿದ್ದ. ಆ ಹಣವನ್ನು ಅಣ್ಣನಿಗೆ ಕೊಡುವುದಾಗಿ ಪತ್ನಿ ಹೇಳಿದ್ದರು. ಇದೇ ವಿಚಾರಕ್ಕೆ ಗಲಾಟೆ ವಿಕೋಪಕ್ಕೆ ತಿರುಗಿತ್ತು ಎಂದು ಪೊಲೀಸರು ಹೇಳಿದರು.

ಆಸ್ತಿ, ಹಣಕಾಸಿನ ವಿಚಾರಕ್ಕೆ ಗಲಾಟೆ ಮಾಡಿಕೊಳ್ಳುತ್ತಿದ್ದರು. ದರಿಯಪ್ಪ ಬೇರೆ ಮಹಿಳೆಯ ಜತೆಗೆ ಓಡಾಟ ನಡೆಸುತ್ತಿದ್ದನ್ನು ಕಾವ್ಯಾ ನೋಡಿದ್ದರು. ಈ ವಿಚಾರಕ್ಕೂ ಗಲಾಟೆ ನಡೆದಿದೆ ಎಂಬ ಮಾಹಿತಿಯಿದೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೇತಗಾನಹಳ್ಳಿ ಭೂ ಅಕ್ರಮ ತುರ್ತು ವಿಚಾರಣೆಗೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇತಗಾನಹಳ್ಳಿಯ ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಿಸಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ವಿರುದ್ಧದ ಅರ್ಜಿ ವಿಚಾರಣೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕೆಂಬ ಸಮಾಜ ಪರಿವರ್ತನಾ ಸಂಸ್ಥೆಯ ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ತಳ್ಳಿ ಹಾಕಿದೆ.

ಅರ್ಜಿದಾರರ ಪರವಾಗಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿದರು. ಪ್ರಕರಣವನ್ನು ಸಾಮಾನ್ಯ ಪ್ರಕರಣದ ವಿಚಾರಣೆಯಂತೆಯೇ ಕೈಗೆತ್ತಿಕೊಳ್ಳಲಾಗುವುದು ಎಂದು ನ್ಯಾಯಪೀಠ ತಿಳಿಸಿತು.

'ಕುಮಾರಸ್ವಾಮಿ ಮತ್ತು ಅವರ ಸಂಬಂಧಿಕರು ಕೇತಗಾನಹಳ್ಳಿಯ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಆದರೆ, ಈ ಆದೇಶವನ್ನು ಜಾರಿಗೊಳಿಸಿಲ್ಲ' ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯವು ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು. ಈ ಬಗ್ಗೆ ತನಿಖೆ ನಡೆಸಲು ಹೈಕೋರ್ಟ್ ಸೂಚಿಸಿತ್ತು.

14 ಎಕರೆ ಜಮೀನಿನ ಮಾಲೀಕತ್ವದ ಕುರಿತಂತೆ ವಿಚಾರಣೆ ನಡೆಸಲು ಐಎಎಸ್ ಅಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. ಪ್ರಕರಣದಲ್ಲಿ ತಮ್ಮ ಮೇಲಿನ ಆರೋಪವನ್ನು ಪ್ರಶ್ನಿಸಿ ಕುಮಾರಸ್ವಾಮಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಪೀಠವು ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತ್ತು.

ತಲೆಮರೆಸಿಕೊಂಡ ಆರೋಪಿ ಸೆರೆ ನ್ಯಾಯೋಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆದಾರರಿಗೆ ಲಕ್ಷಾಂತರ ಮೊತ್ತದ ಹಣ ವಂಚಿಸಿದ ಆರೋಪದಲ್ಲಿ ತನಿಖೆಗೆ ಸಹಕರಿಸದೆ 40 ದಿನ ತಲೆಮರೆಸಿಕೊಂಡಿದ್ದ ಯೋಗ ಶಿಕ್ಷಕರೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ 39ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ವಿಚಾರಣೆ ರದ್ದುಪಡಿಸಿ ನನ್ನ ಬಿಡುಗಡೆಗೆ ಆದೇಶಿಸಬೇಕು' ಎಂದು ಕೋರಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ತಮಿಳುನಾಡಿನ ಕಡಲೂರು ನಿವಾಸಿ ಆರ್‌.ಯುಗದೇವ್ (34) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್‌ಎಸ್) ಕಲಂ 35(3)ರ ಪ್ರಕಾರ ಪೊಲೀಸರು ಅರ್ಜಿದಾರರಿಗೆ ವಿದ್ಯುನ್ಮಾನ ಅಥವಾ ಭೌತಿಕವಾಗಿ ನೋಟಿಸ್ ನೀಡಿಲ್ಲ. ಬಂಧನಕ್ಕೆ ಸೂಕ್ತ ಕಾರಣ ನೀಡಿಲ್ಲ' ಎಂಬ ಅರ್ಜಿದಾರರ ಪರ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಳ್ಳಿ ಹಾಕಿದೆ.

'ಆರೋಪಿ ನೋಟಿಸ್ ಸ್ವೀಕರಿಸಲು ನಿರಾಕರಿಸಿದಾಗ ಅಥವಾ ತನಿಖೆಗೆ ಸಹಕರಿಸದೇ ಇದ್ದಾಗ, ಪೊಲೀಸರು ಅವರನ್ನು ಬಂಧಿಸುವ ಅಧಿಕಾರ ಹೊಂದಿರುತ್ತಾರೆ' ಎಂದು ಸ್ಪಷ್ಟಪಡಿಸಿದೆ.

'ಈ ಪ್ರಕರಣದಲ್ಲಿ ಅರ್ಜಿದಾರರು 40 ದಿನ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದಾರೆ. ಇದು ಬಂಧನಕ್ಕೆ ಪೂರಕವಾದ ಸನ್ನಿವೇಶ. ಹಾಗಾಗಿ, ನೋಟಿಸ್ ನೀಡುವ ಪ್ರಕ್ರಿಯೆ ಪೂರ್ಣಗೊಳ್ಳದೇ ಇದ್ದರೂ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆಯಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ, ಅರ್ಜಿದಾರರನ್ನು ಬಂಧಿಸಿರುವಲ್ಲಿ ಕಾನೂನು ಲೋಪ ಕಂಡು ಬರುತ್ತಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಯುಗದೇವ್ ಮತ್ತು ಅವರ ಪತ್ನಿ 'ಜೈ ಭೈರವಿ ದೇವಿ (ಜೆಬಿಡಿ) ಫೈನಾನ್ಶಿಯಲ್ ಸಲ್ಯೂಷನ್ಸ್' ಎಂಬ ಸಂಸ್ಥೆ ಪ್ರಾರಂಭಿಸಿದ್ದರು. ಆನ್‌ಲೈನ್ ಮೂಲಕ ಸಾರ್ವಜನಿಕರಿಂದ ಹಣ ಹೂಡಿಕೆಗೆ ಅವಕಾಶ ಕಲ್ಪಿಸಿದ್ದರು.

ಅರ್ಜಿದಾರರು ಮತ್ತು ಅವರ ಪತ್ನಿಯ ಖಾತೆಗೆ ₹98 ಲಕ್ಷ ಪಾವತಿಯಾಗಿತ್ತು. ಹೂಡಿಕೆದಾರರಲ್ಲಿ ಮೂವರು ಬೆಂಗಳೂರಿನ ನಿವಾಸಿಗಳು, 'ನಾವು ಹೂಡಿಕೆ ಮಾಡಿರುವ ₹39 ಲಕ್ಷ ಬಂಡವಾಳದ ಮೊತ್ತವನ್ನು ಹಿಂದಿರುಗಿಸಿಲ್ಲ' ಎಂದು ಆರೋಪಿಸಿ ಯುಗದೇವ್ ವಿರುದ್ಧ ದೂರು ನೀಡಿದ್ದರು.

ದೂರಿನ ಅನುಸಾರ ಆಡುಗೋಡಿ ಠಾಣೆ ಪೊಲೀಸರು ಯುಗದೇವ್ ವಿರುದ್ಧ, ಮಾಹಿತಿ ತಂತ್ರಜ್ಞಾನ ಕಾಯ್ದೆ–2000 ಕಲಂ 66(ಸಿ), 66(ಡಿ) ಮತ್ತು ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 318(4)ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಅರ್ಜಿದಾರರಿಗೆ ನೋಟಿಸ್ ಜಾರಿಗೊಳಿಸಲು ಮುಂದಾಗಿದ್ದರೂ ಆರೋಪಿ 40 ದಿನಗಳ ಕಾಲ ನೋಟಿಸ್ ಪಡೆಯದೆ ಮತ್ತು ಪೊಲೀಸರ ಕೈಗೂ ಸಿಗದೆ ತಲೆಮರೆಸಿ ಕೊಂಡಿದ್ದರು.

ಬಳಿಕ ತಮಿಳುನಾಡಿನ ಕಡಲೂರಿನಲ್ಲಿ ಇರುವುದು ಪತ್ತೆಯಾದಾಗ ಪೊಲೀಸರು ನೋಟಿಸ್ ಜಾರಿಗೊಳಿಸಲು ಮುಂದಾಗಿದ್ದರು. ಈ ಸಂದರ್ಭದಲ್ಲಿ, 'ಯುಗದೇವ್ ಸಹಕರಿಸದೇ ಉಡಾಫೆಯಿಂದ ವರ್ತಿಸಿದ್ದಾರೆ' ಎಂಬ ಕಾರಣ ವಶಕ್ಕೆ ಪಡೆದುಕೊಂಡಿದ್ದ ಪೊಲೀಸರು ಅವರನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಿದ್ದರು. ಮ್ಯಾಜಿಸ್ಟ್ರೇಟ್ ಆರೋಪಿ ಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಯುಗದೇವ್ ಹೈಕೋರ್ಟ್ ಮೆಟ್ಟಿಲೇರಿದ್ದರು.

'ತಲೆಮರೆಸಿಕೊಂಡಿದ್ದರೆ ನೇರ ಬಂಧನ'



'7 ವರ್ಷಕ್ಕಿಂತ ಕಡಿಮೆ ಅವಧಿಯ ಶಿಕ್ಷೆ ವಿಧಿಸಬಹುದಾದ ಅಪರಾಧ ಪ್ರಕರಣಗಳಲ್ಲಿ ಆರೋಪಿಯನ್ನು ಬಂಧಿಸುವ ಮುನ್ನ ನೋಟಿಸ್ ನೀಡುವುದು ಕಡ್ಡಾಯ ಆಗಿದ್ದರೂ ಆರೋಪಿ ಉದ್ದೇಶಪೂರ್ವಕವಾಗಿ ಪೊಲೀಸ್ ನೋಟಿಸ್ ಸ್ವೀಕರಿಸದೆ ತಲೆಮರೆಸಿಕೊಂಡು ತನಿಖೆಗೆ ಅಸಹಕಾರ ತೋರಿದ ವೇಳೆ ನೇರವಾಗಿ ಬಂಧಿಸಬಹುದಾಗಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಡಿಸಿಇಟಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಪ್ಲೊಮಾ ವಿದ್ಯಾರ್ಥಿ ಗಳಿಗೆ ಎರಡನೇ ವರ್ಷದ ಎಂಜಿನಿಯರಿಂಗ್ ನೇರ ಪ್ರವೇಶಕ್ಕೆ ನಡೆಸುವ ಡಿಸಿಇಟಿ ಅವಧಿಯನ್ನು ಏಪ್ರಿಲ್ 10ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌.ಪ್ರಸನ್ನ ಹೇಳಿದ್ದಾರೆ.

ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ದಿನಾಂಕ ವಿಸ್ತರಿಸಿದ್ದು, ಶುಲ್ಕ ಪಾವತಿಗೂ ಏ.10 ಕೊನೆ ದಿನ. ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬೇಕು. ವಿವರಗಳಿಗೆ ಕೆಇಎ ವೆಬ್ ಸೈಟ್ ನೋಡಬೇಕು ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಪ್ರತಿಪಾದನೆ

'ಅಕ್ಕಮಹಾದೇವಿ ಮೊದಲ ಮಹಿಳಾ ಹೋರಾಟಗಾರ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಸಮುದಾಯದ ಪ್ರಜ್ಞೆಯನ್ನು ಜಾಗೃತಿಗೊಳಿಸಿದ ವಿಶ್ವದ ಮೊದಲ ಮಹಿಳಾ ಹೋರಾಟಗಾರ್ತಿ ಅಕ್ಕಮಹಾದೇವಿ' ಎಂದು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುರುವಾರ ಇಲ್ಲಿ ಆಯೋಜಿಸಿದ್ದ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'12ನೇ ಶತಮಾನದಲ್ಲಿ ಅಕ್ಕಮಹಾದೇವಿ ರಚಿಸಿದ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ವಚನಗಳಲ್ಲಿ ಭಕ್ತಿ ಮತ್ತು ಸಾಮಾಜಿಕ ಕಳಕಳಿಯನ್ನು ಕಾಣಬಹುದಾಗಿದೆ. ಅಕ್ಕಮಹಾದೇವಿ ಕೇವಲ ಬರಹಗಾರ್ತಿ, ಐತಿಹಾಸಿಕ ವ್ಯಕ್ತಿಯಲ್ಲ. ಸಮಾಜದ ಕಣ್ಣು ತೆರೆಸಿದ ಮಹಾನ್ ಹೋರಾಟಗಾರ್ತಿ' ಎಂದು ತಿಳಿಸಿದರು.

'ಮನುವಾದಿಗಳು ಸಮಸಮಾಜದ ಪರಿಕಲ್ಪನೆಯಿಂದ ಹೆಣ್ಣುಮಕ್ಕಳನ್ನು ಬಹಳ ದೂರ ಇಟ್ಟಿದ್ದಾರೆ. ಇಂದಿಗೂ ಮಹಿಳೆಯರನ್ನು ದಾಸಿಯನ್ನಾಗಿ ನೋಡಲಾಗುತ್ತಿದೆ. ಅವರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. 12ನೇ ಶತಮಾನದಲ್ಲಿಯೇ ಅಕ್ಕಮಹಾದೇವಿ ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ್ದರು' ಎಂದರು.

'ಬೆಂಗಳೂರು ನಗರದಲ್ಲಿ ಅಕ್ಕಮಹಾದೇವಿಯ ಪುತ್ಥಳಿಯನ್ನು ಸ್ಥಾಪಿಸಬೇಕು. ಜೊತೆಗೆ ಅಕ್ಕಮಹಾದೇವಿಯ ಜಯಂತಿಯನ್ನು ರಾಜ್ಯದಾದ್ಯಂತ ಆಚರಿಸುವ ಕುರಿತು ರಾಜ್ಯ ಸರ್ಕಾರ ಆದೇಶ ಹೊರಡಿಸಬೇಕು' ಎಂದು ಅವರು ಮನವಿ ಮಾಡಿದರು.

ನಿವೃತ್ತ ಪ್ರಾಧ್ಯಾಪಕಿ ವಿಜಯಶ್ರೀ ಸಬರದ ಅವರು ಅಕ್ಕಮಹಾದೇವಿಯ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ, ಜಂಟಿ ನಿರ್ದೇಶಕ ಬಲವಂತ ರಾವ್ ಪಾಟೀಲ್, ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಗೀತಾ ಜಯಂತ್, ಪ್ರೇಮಾ ಸೋಮಸುಂದರ್ ಉಪಸ್ಥಿತರಿದ್ದರು.





ಕಾರ್ಯಕ್ರಮದಲ್ಲಿ ವಿಜಯಶ್ರೀ ಸಬರದ, ಪ್ರೇಮಾ ಸೋಮಸುಂದರ್, ಗೀತಾ ಜಯಂತ್, ಕೆ.ವಿ. ನಾಗರಾಜಮೂರ್ತಿ, ಬಲವಂತರಾವ್ ಪಾಟೀಲ್ ಮತ್ತು ಬಿ.ಎಸ್. ಮಂಜುನಾಥಸ್ವಾಮಿ ಅವರು ಅಕ್ಕಮಹಾದೇವಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು (ಎಡಚಿತ್ರ). ಅಕ್ಕಮಹಾದೇವಿ ಭಾವಚಿತ್ರಕ್ಕೆ ಪಿನಾಕಪಾಣಿ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಚನ್ನಮಲ್ಲಯ್ಯ, ರೇಷ್ಮೆ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕಿ ರೂಪಾ ಪ್ರಸಾದ್, ವಚನಜ್ಯೋತಿ ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಗಾಯಕಿಯರಾದ ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ ಪುಷ್ಪಾರ್ಚನೆ ಮಾಡಿದರು –ಪ್ರಜಾವಾಣಿ ಚಿತ್ರ

ಕನ್ನಡದ ಅಮೂಲ್ಯ ರತ್ನ ಅಕ್ಕ: ಪಿನಾಕಪಾಣಿ

ಬೆಂಗಳೂರು: ಕನ್ನಡವಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿಯೂ ಅಕ್ಕ ಎಂದು ಕರೆಯಲಾಗುವ ಅಕ್ಕಮಹಾದೇವಿ ಕನ್ನಡದ ಅಮೂಲ್ಯ ರತ್ನ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ಕಲ್ಯಾಣ ಬಡಾವಣೆಯ ಬಸವ ಮಂಟಪದಲ್ಲಿ ವಚನಜ್ಯೋತಿ ಬಳಗ ಗುರುವಾರ ಆಯೋಜಿಸಿದ್ದ 'ಮಹಾದೇವಿ ಅಕ್ಕನವರಿಗೆ ವಚನ ಪ್ರಣಾಮ' ಕಾರ್ಯಕ್ರಮದಲ್ಲಿ ಮಾತನಾಡಿ, 'ಅಕ್ಕನ ಭಾವಗೀತಾತ್ಮಕವಾದ ಅನುಭಾವಗಳು ಒಂದೆಡೆ ಆಧ್ಯಾತ್ಮಿಕ ನಿಲುವನ್ನು ಅಭಿವ್ಯಕ್ತಗೊಳಿಸಿದರೆ, ಮತ್ತೊಂದೆಡೆ ಜೀವನದ ನೋವು ನಲಿವುಗಳನ್ನು ಪ್ರತಿಬಿಂಬಿಸುತ್ತವೆ' ಎಂದರು.

ಕಾರ್ಯಕ್ರಮದಲ್ಲಿ ವಚನಜ್ಯೋತಿ ಬಳಗದ ಮುಖ್ಯ ಕಾರ್ಯನಿರ್ವಾಹಕ ರಾಜಾ ಗುರುಪ್ರಸಾದ್, ಕಲಿಕಾ ತರಗತಿಯ ಕಾತ್ಯಾಯಿನಿ, ಪುಷ್ಪಲತಾ, ಲೀಲಾವತಿ ಹಾಗೂ ವಿಜಯ ವಚನಯಾನದ ಬಾಲಕೃಷ್ಣ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಎಂ. ವಸುಧಾ, ಅತಿಥಿಗಳು: ಶೀಲಾ ಶ್ರೀಧರ್, ಸಂಜಯ್ ಶಾಂತಾರಾಮ್, ರೇಖಾ ಜಗದೀಶ್, ಆಯೋಜನೆ: ಶ್ರೀರಾಜರಾಜೇಶ್ವರಿ ಕಲಾನಿಕೇತನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಗೌರವ ಡಾಕ್ಟರೇಟ್ ಪಡೆದ ಪಿ.ಜಿ. ಆರ್. ಸಿಂಧ್ಯ ಅವರಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ಯು.ಟಿ. ಖಾದರ್, ಎನ್. ಸಂತೋಷ್ ಹೆಗ್ಡೆ, ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ: ಕೊಂಡಜ್ಜಿ ಬ. ಷಣ್ಮುಖಪ್ಪ, ಆಯೋಜನೆ: ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಭುವನ್ ಎ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಶಿವಶ್ರೀ ಸ್ಕಂದಪ್ರಸಾದ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ



ಶಿವಶ್ರೀ ಸ್ಕಂದಪ್ರಸಾದ್

ಲಯ ವಾಹಿನಿ: ಕೊಳಲು: ಬಿ.ಕೆ. ಅನಂತರಾಮ್, ಪಿಟೀಲು: ಜೆ.ಕೆ. ಶ್ರೀಧರ್, ಮೃದಂಗ: ಬಿ.ಎಸ್. ಆನಂದ್, ತಬಲಾ: ಅಶ್ವತ್ಥನಾರಾಯಣ್, ಮೋರ್ಸಿಂಗ್: ಅಭಿಜಿತ್, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ಒಂಬತ್ತನೆ ಮುಖ್ಯರಸ್ತೆ, ವೈಯಾಲಿಕಾವಲ್, ಸಂಜೆ 6

ಡಾ.ರಾಜ್ ಗಾನ ವೈಭವ: ಗಾಯನ: ಶ್ರೀನಾಥ ಭಾರದ್ವಾಜ್, ಷಣ್ಮುಖ ಗೋವಿಂದರಾಜ್, ವಿಜಯಾನಂದ್ ನಾಯಕ್, ಅಂಜಲಿ ಹಳಿಯಾಳ, ಲಕ್ಷ್ಮೀ ಶ್ರೇಯಾಂಸಿ, ನಂಜಪ್ಪ, ಸಿರಿ ಚಂದ್ರಶೇಖರ್, ಭೂಪಶ್ರೀ ನುಲಿ, ಅತಿಥಿಗಳು: ಎಸ್‌.ಎ. ಗೋವಿಂದರಾಜ್, ಲಕ್ಷ್ಮೀ ಗೋವಿಂದರಾಜ್, ಬಿ.ಕೆ. ಶಿವರಾಂ, ಬಾಲಚಂದ್ರ, ಆಯೋಜನೆ: ಕಾಡು ಮಲ್ಲೇಶ್ವರ ಗೆಳೆಯರ ಬಳಗ, ಶೃತಿಲಯ ಸಂಗೀತ ಕಲ್ಚರಲ್ ಅಕಾಡೆಮಿ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 6.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸುಚೇತನ್ ರಂಗಸ್ವಾಮಿ, ಪಿಟೀಲು: ಪ್ರದೇಶ್ ಆಚಾರ್, ಮೃದಂಗ: ನಿಕ್ಷಿತ್ ಪುತ್ತೂರು, ಖಂಜೀರಾ: ಭಾರ್ಗವ ಹಾಲಂಬಿ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಇ-ಮೇಲ್ nagaradalli_indu@prajavani.co.in ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..





ಕರಗ ಮಹೋತ್ಸವ

ನಗರದಲ್ಲಿ ಬುಧವಾರ ತಡರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವದ ಅಂಗವಾಗಿ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಎ.ಜ್ಞಾನೇಂದ್ರ ಸ್ವಾಮಿ ಅವರು ಕರಗ ಹೊತ್ತು ಹೊರಬಂದ ಕ್ಷಣ (ಎಡಚಿತ್ರ). ಭಕ್ತರು ಹೂಮಳೆಗರೆದು ಕರಗವನ್ನು ಸ್ವಾಗತಿಸಿದರು

ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಬಾಗಲೂರು ಗ್ರಾಮದಲ್ಲಿ ಹೂವಿನ ಕರಗ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಬಾಗಲೂರು ಗ್ರಾಮದಲ್ಲಿ ದ್ರೌಪದಮ್ಮ ಮತ್ತು ಧರ್ಮರಾಯಸ್ವಾಮಿಯ 20ನೇ ವರ್ಷದ ಹೂವಿನ ಕರಗ ಮಹೋತ್ಸವ ಹಾಗೂ ಗ್ರಾಮದೇವತೆಗಳ ಪಲ್ಲಕ್ಕಿ ಉತ್ಸವ, ಬುಧವಾರ ವಿಜೃಂಭಣೆಯಿಂದ ನೆರವೇರಿತು.

ದ್ರೌಪದಮ್ಮ ಮತ್ತು ಧರ್ಮರಾಯಸ್ವಾಮಿ ದೇವಾಲಯದಿಂದ ಮಧ್ಯರಾತ್ರಿ 12.30ಕ್ಕೆ ಹೊರಟ ಕರಗ, ಗ್ರಾಮದ ರಾಜಬೀದಿಗಳಲ್ಲಿ ಸಂಚರಿಸಿ, ಗುರುವಾರ ಬೆಳಿಗ್ಗೆ 7.30ಕ್ಕೆ ಮತ್ತೆ ದೇವಾಲಯಕ್ಕೆ ಆಗಮಿಸಿತು. ಕರಗ, ಮನೆಗಳ ಮುಂದೆ ಬಂದಾಗ ಮಹಿಳೆಯರು ಆರತಿ ಬೆಳಗಿ ಹೂವಿನ ಅರ್ಚನೆ ಮಾಡಿ ಭಕ್ತಿಯಿಂದ ಸ್ವಾಗತಿಸಿದರು. ಗ್ರಾಮದೇವತೆಗಳ ಪಲ್ಲಕ್ಕಿ ಉತ್ಸವ ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿತು. ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನರು ಕರಗ ವೀಕ್ಷಿಸಿದರು.

ಊರಿನ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಈ ಬಾರಿ ಜಿ.ಮಂಜುನಾಥ್ ಅವರು ಕರಗವನ್ನು ಹೊತ್ತಿದ್ದರು.



ಬಾಗಲೂರು ಗ್ರಾಮದಲ್ಲಿ ನಡೆದ ಹೂವಿನ ಕರಗ

ವೇಣುಗೋಪಾಲಸ್ವಾಮಿ ಬ್ರಹ್ಮರಥೋತ್ಸವ

ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು • ದೇವಾಲಯಗಳಲ್ಲಿ ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಯಲಹಂಕ: ಚೋಳರ ಕಾಲದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಬ್ರಹ್ಮರಥೋತ್ಸವ ಗುರುವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ವಿಶ್ವನಾಥೇಶ್ವರ ಮತ್ತು ವೇಣುಗೋಪಾಲಸ್ವಾಮಿ ಧರ್ಮದರ್ಶಿ ಮಂಡಳಿ ವತಿಯಿಂದ ಬೆಳಿಗ್ಗೆಯಿಂದಲೇ ದೇವರಿಗೆ ವಿಶೇಷ ಅಲಂಕಾರ, ಅಭಿಷೇಕ, ಅರ್ಚನೆ, ಹೋಮ ಹಾಗೂ ಮಹಾ ಮಂಗಳಾರತಿ ಸೇರಿದಂತೆ ವಿವಿಧ ರೀತಿಯ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು. ಮಧ್ಯಾಹ್ನ 12.50ಕ್ಕೆ ಗರುಡಪಕ್ಷಿ, ರಥದ ಮೇಲೆ ಸುತ್ತು ಹಾಕಿದ ನಂತರ, ಭಕ್ತರ ಘೋಷಣೆಗಳ ನಡುವೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಆಂಧ್ರಪ್ರದೇಶ, ತಮಿಳುನಾಡು ಸೇರಿ ವಿವಿಧ ಜಿಲ್ಲೆಗಳು ಹಾಗೂ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ, ದೇವರ ದರ್ಶನ ಪಡೆದು, ಬಾಳೆಹಣ್ಣು ಮತ್ತು ದವನವನ್ನು ರಥದ ಮೇಲೆ ಎಸೆದು ಹರಕೆ ತೀರಿಸಿದರು.

ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆಯಿತು. ಭಕ್ತರಿಗೆ ಕೋಸಂಬರಿ, ಪಾನಕ, ಮಜ್ಜಿಗೆಯನ್ನೂ ವಿತರಿಸಲಾಯಿತು. ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ವೇಳೆಯಲ್ಲಿ ವೇಣುಗೋಪಾಲಸ್ವಾಮಿಯ ಉತ್ಸವ ಮೂರ್ತಿಯನ್ನು ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಶಾಸಕ ಎಸ್.ಆರ್.ವಿಶ್ವನಾಥ್ ಅವರು ಉಪಸ್ಥಿತರಿದ್ದರು.



ಯಲಹಂಕದಲ್ಲಿ ವೇಣುಗೋಪಾಲಸ್ವಾಮಿಯ ಬ್ರಹ್ಮರಥೋತ್ಸವ ನಡೆಯಿತು

ಪಟಾಲಮ್ಮ ದೇವಿ ಜಾತ್ರಾ ವೈಭವ

ಯಲಹಂಕ: ರಾಜಾನುಕುಂಟೆ ಸಮೀಪದ ಅದ್ದಿಗಾನಹಳ್ಳಿಯಲ್ಲಿ ಪಟಾಲಮ್ಮ ದೇವಿಯ ಜಾತ್ರಾ ಮಹೋತ್ಸವ ಬುಧವಾರ ವೈಭವದಿಂದ ನೆರವೇರಿತು.

ಬೆಳಿಗ್ಗೆಯಿಂದಲೇ ದೇವಿಗೆ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ವಿಧಿ-ವಿಧಾನಗಳು ನಡೆದವು.

ಅದ್ದಿಗಾನಹಳ್ಳಿ ಗ್ರಾಮದಲ್ಲಿ ಪಟಾಲಮ್ಮ ದೇವಿಯ ಉತ್ಸವ ಮೂರ್ತಿಗೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ಬಳಿಕ, ಅಲ್ಲಿಂದ ರಥೋತ್ಸವ ಮತ್ತು ಆರತಿಗಳ ಸಮೇತ ಹೊರಟ ಉತ್ಸವ ದೇವಿಯ ಮೆರವಣಿಗೆಯು ದೇವಸ್ಥಾನದ ಬಳಿಗೆ ಆಗಮಿಸಿತು.

ಅದ್ದಿಗಾನಹಳ್ಳಿ, ಸಾದೇನಹಳ್ಳಿ ಹಾಗೂ ತರಹುಣಿಸೆ ಗ್ರಾಮಗಳಿಂದ ವಿಶೇಷವಾಗಿ ಅಲಂಕರಿಸಲಾದ ರಥಗಳನ್ನು ಮೆರವಣಿಗೆಯ ಮೂಲಕ ದೇವಸ್ಥಾನದ ಬಳಿಗೆ ತರಲಾಯಿತು. ಅದ್ದಿಗಾನಹಳ್ಳಿ, ಸಾದೇನಹಳ್ಳಿ, ಮಾರಗೊಂಡನಹಳ್ಳಿ, ತರಹುಣಿಸೆ, ಅಗ್ರಹಾರ, ತಿಮ್ಮಸಂದ್ರ, ನಾಗದಾಸನಹಳ್ಳಿ, ರಾಜಾನುಕುಂಟೆ, ಚೊಕ್ಕನಹಳ್ಳಿ, ಅದ್ದೆ ವಿಶ್ವನಾಥಪುರ ಮತ್ತು ಬೆಟ್ಟೇನಹಳ್ಳಿ ಗ್ರಾಮಗಳ ಮಹಿಳೆಯರು, ವಿವಿಧ ರೀತಿಯ ಕಳಸಗಳನ್ನು ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡ ದೃಶ್ಯ ಗಮನ ಸೆಳೆಯಿತು.

ಉತ್ಸವ ದೇವಿಯ ಮೂರ್ತಿಯೊಂದಿಗೆ ಆರತಿಗಳನ್ನು ಹೊತ್ತ ಮಹಿಳೆಯರು, ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿ, ಬಳಿಕ ದೇವಿಗೆ ಪೂಜೆ ಸಲ್ಲಿಸಿ, ಆರತಿ ಬೆಳಗಿದರು.



ಪಟಾಲಮ್ಮ ದೇವಿಯ ಜಾತ್ರಾ ಮಹೋತ್ಸವ ಬುಧವಾರ ನೆರವೇರಿತು

ನಾಲ್ವರಿಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬಿ.ವಿ. ವಸಂತ ಕುಮಾರ್



ಕಲ್ಯಾಣ ರಾವ್



ದೇವಿಕಾ



ಕಾಂತೇಶರೆಡ್ಡಿ ಗೋಡಿಹಾಳ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ 2025ನೇ ಸಾಲಿನ ದತ್ತಿ ಪ್ರಶಸ್ತಿಗೆ ನಾಲ್ವರನ್ನು ಆಯ್ಕೆ ಮಾಡಲಾಗಿದೆ.

ಕಮಲಮ್ಮ ಜಿ.ಎ.ಶಿವಲಿಂಗಯ್ಯ ದತ್ತಿ ಪ್ರಶಸ್ತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಬಿ.ವಿ.ವಸಂತ ಕುಮಾರ್, ಕಲಬುರಗಿಯ ಕಲ್ಯಾಣರಾವ್ ಪಾಟೀಲ ಅವರನ್ನು ಆಯ್ಕೆ ಮಾಡಲಾಗಿದೆ. ಈ ಇಬ್ಬರಿಗೆ ಪ್ರಶಸ್ತಿಯೊಂದಿಗೆ ₹25 ಸಾವಿರ ನಗದು, ಫಲಕ ಪ್ರದಾನ ಮಾಡಲಾಗುತ್ತದೆ.

ವಚನ ಸಾಹಿತ್ಯದಲ್ಲಿ ಸಂಶೋಧನೆ ಮಾಡಿರುವ ಬೆಂಗಳೂರು ಗ್ರಾಮಾಂತರದ ಎಸ್.ದೇವಿಕಾ ಹಾಗೂ ಹಾವೇರಿಯ ಕಾಂತೇಶ ರೆಡ್ಡಿ ಗೋಡಿಹಾಳ ಅವರನ್ನು ಆಯ್ಕೆ ಮಾಡಲಾಗಿದ್ದು, ಪ್ರಶಸ್ತಿಯೊಂದಿಗೆ ₹10 ಸಾವಿರ ನಗದು ಹಾಗೂ ಫಲಕ ನೀಡಲಾಗುತ್ತದೆ.

ಏ.7ರಂದು ಸಂಜೆ 5.30ಕ್ಕೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಹಿತಿ ಸಿಪಿಕೆ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ, ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ಸೋಮಶೇಖರ್, ದತ್ತಿ ಸ್ಥಾಪಕ ಜಿ.ಎ.ಶಿವಲಿಂಗಯ್ಯ, ಮೈಸೂರು ನಗರ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಜಯಪ್ಪ ಹೊನ್ನಾಳಿ ಅವರು ಉಪಸ್ಥಿತರಿರುವರು.

ಸಚಿವರ ಸಭೆಗೆ ವಿಷ ತಂದ ರೈತ

ದೇವನಹಳ್ಳಿ: ಜಮೀನು ವಾಜ್ಯ ವಿಚಾರದಲ್ಲಿ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಪರಿಶಿಷ್ಟ ಸಮುದಾಯದ ರೈತರೊಬ್ಬರು ಸಚಿವ ಕೆ.ಎಚ್. ಮುನಿಯಪ್ಪ ಮುಂದೆ ವಿಷದ ಬಾಟಲಿ ಪ್ರದರ್ಶಿಸಿದರು.

ಡಾ.ಬಾಬು ಜಗಜೀವನ್ ರಾಮ್ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಕುರಿತು ಚರ್ಚಿಸಲು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ನೇತೃತ್ವದಲ್ಲಿ ಗುರುವಾರ ಜಿಲ್ಲಾಡಳಿತ ಭವನದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿತ್ತು.

ಅಗಲಗುರ್ಕಿ ಗ್ರಾಮದ ಪರಿಶಿಷ್ಟ ಸಮುದಾಯಕ್ಕೆ ಸೇರಿದ ರೈತ ಆಂಜಿನಪ್ಪ ಅವರು ವಿಷದ ಬಾಟಲಿ ಹಿಡಿದು ಸಭೆಯಲ್ಲಿ ತಮ್ಮ ಅಳಲು ತೋಡಿಕೊಂಡರು.

ಸ್ಥಳದಲ್ಲಿದ್ದ ಪೊಲೀಸ್ ಸಿಬ್ಬಂದಿ ರೈತನ ಕೈಯಲ್ಲಿದ್ದ ವಿಷದ ಬಾಟಲಿಯನ್ನು ಕಿತ್ತುಕೊಂಡು ಅಪಾಯ ತಪ್ಪಿಸಿದರು. ನಂತರ ದಲಿತ ಮುಖಂಡರು ರೈತನನ್ನು ಸಮಾಧಾನಪಡಿಸಿದರು.ಈ ಘಟನೆ ಸಭೆಯಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ಸೃಷ್ಟಿಸಿದರೂ, ನಂತರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿತು.

‘ನನ್ನ ಜಮೀನು ವ್ಯಾಜ್ಯದ ವಿಚಾರದಲ್ಲಿ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ. ತಾಲ್ಲೂಕಿನಲ್ಲಿ ಭೂ ಮಾಫಿಯಾ ಸಕ್ರಿಯವಾಗಿದ್ದು, ಸವರ್ಣೀಯರು ದಲಿತರ ಭೂಮಿಯನ್ನು ಕಬಳಿಸಲು ಅಧಿಕಾರಿಗಳೊಂದಿಗೆ ಶಾಮೀಲಾಗಿ ಅನ್ಯಾಯ ಮಾಡುತ್ತಿದ್ದಾರೆ’ ಎಂದು ಅಂಜಿನಪ್ಪ ದೂರಿದರು.

ಕೋಲ್ಕತ್ತ ರೇಸ್

ಕಂಜೂರರ್ ಗೆಲ್ಲುವ ನಿರೀಕ್ಷೆ

ಪಂಟರ್ಸ್ ಡಿಲೈಟ್ ಹ್ಯಾಂಡಿಕ್ಯಾಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಂಜೂರರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ನೋ ವರಿ 3, ಡೈಮಂಡ್ ಗೋಲ್ಡ್ 7, ಹರ್ಮಿಸ್ 8
2ನೇ ರೇಸ್: ರಾಯಲ್ ಕಿಂಗ್ 5, ಸ್ವರ್ಜೆನೆಗರ್ 10, ಲೈನ್‌ಅಪ್‌ಅಂಡ್‌ಕಲೆಕ್ಟ್ 8
3ನೇ ರೇಸ್: ಕ್ಯಾಷೆ 1, ರುದ್ರ 4, ನೂರಿ 3
4ನೇ ರೇಸ್: ಸರ್ ವಿನ್‌ಸ್ಟಂಟ್ 1, ಮಿಡ್‌ನೈಟ್ ಬ್ಲೂ 6, ಹೋರಸ್ ದಿ ಗ್ರೇಟ್ 8
5ನೇ ರೇಸ್: ವೆರಜ್ಞಾನೊ 4, ರಾಯಲ್ ಮೆಂಬರ್ 7, ವೆನೆನೊ 10
6ನೇ ರೇಸ್: ಕಂಜೂರರ್ 8, ಗಿರಾರ್ಡೆಲಿ 10, ಮರ್ಲೆಟ್ 7
7ನೇ ರೇಸ್: ಕ್ಯಾಶ್ ಎನ್ ರನ್ 1, ವಿಕ್ಟೋರಿಯಸ್ ಒಮೆನ್ 3, ಟೈಕೂನಿಸ್ಟ್ 7
8ನೇ ರೇಸ್: ಎನ್ಚಾಂಟಿಂಗ್ 2, ಕೊರ್ಟಾಡೊ 3, ಜಿಮ್ಮಿ ಬೀ 1

ಉತ್ತಮ ಬೆಟ್: ಸರ್ ವಿನ್‌ಸ್ಟಂಟ್

ಜಾಕ್‌ಪಾಟ್	1ನೇ ಟ್ರಿಬಲ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	1,2,3	3,4,5	6,7,8

ನವೀಕರಿಸಬಹುದಾದ ಇಂಧನ: ಸುಧಾರಿತ ತಂತ್ರಜ್ಞಾನ ಬಳಕೆಗೆ ಅನುವು

ನವೋದ್ಯಮಗಳ ಉತ್ತೇಜನಕ್ಕೆ ಒಪ್ಪಂದ

ಪ್ರಜಾವಾಣಿ ವಾರ್ತೆ



ನವೀಕರಿಸಬಹುದಾದ ಇಂಧನ, ನವೋದ್ಯಮಗಳಲ್ಲಿ ನಾವೀನ್ಯತೆ ಮತ್ತು ಬೆಳವಣಿಗೆಗೆ ಚಾಲನೆ ಸಿಗಲಿದೆ. ಆಸ್ಟ್ರೇಲಿಯಾ ಜತೆಗೆ ಕರ್ನಾಟಕದ ಸಂಬಂಧ ಬಲಪಡಲಿದೆ. ಹೂಡಿಕೆಗೆ ಅವಕಾಶಗಳನ್ನು ಸೃಷ್ಟಿಸಲಿದೆ
ಕೆ.ಜೆ. ಜಾರ್ಜ್, ಇಂಧನ ಸಚಿವ



ನವೀಕರಿಸಬಹುದಾದ ಇಂಧನ ತಂತ್ರಜ್ಞಾನದ ನವೋದ್ಯಮಗಳಿಗೆ ನಾವೀನ್ಯ ಮತ್ತು ಇನ್‌ಕ್ಯುಬೇಷನ್ ಅವಕಾಶ ಹೆಚ್ಚಿಸಲು ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ
ಟಿ.ಡಿ.ರಾಜೇಗೌಡ, ಕ್ರೆಡಲ್ ಅಧ್ಯಕ್ಷ

ಬೆಂಗಳೂರು: ನವೀಕರಿಸಬಹುದಾದ ಇಂಧನ ವಲಯದಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯ, ಬೆಂಗಳೂರಿನ ಐಐಎಸ್‌ಸಿಯ ಎಫ್‌ಎಸ್‌ಐಡಿ, ಐಐಎಂನ ಎನ್‌ಎಸ್ ಆರ್‌ಸಿಇಎಲ್ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಬೆಸ್ಕಾಂ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಹಾಗೂ ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಲಿಸಾ ಝೂಂಬರ್ಲಾನ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು. ಇದೇ ಸಂದರ್ಭದಲ್ಲಿ ಐಐಎಸ್‌ಸಿಯ ಎಫ್‌ಎಸ್‌ಐಡಿ, ಐಐಎಂಬಿಯ ಎನ್‌ಎಸ್ ಆರ್‌ಸಿಇಎಲ್ ಮುಖ್ಯಸ್ಥರು ಕ್ರೆಡಲ್ ಜತೆಗಿನ ಒಪ್ಪಂದಕ್ಕೆ ಸಹಿ ಹಾಕಿದರು.

ಆಸ್ಟ್ರೇಲಿಯಾದ ಕಾನ್ಸುಲ್ ಜನರಲ್ ಹಿಲರಿ ಮೆಕ್‌ಗೀಚಿ ಮತ್ತು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಆಸ್ಟ್ರೇಲಿಯಾ – ಭಾರತದ ನಡುವಿನ ವ್ಯಾಪಾರ, ಹೂಡಿಕೆಗೆ ಒತ್ತು ನೀಡುವ ‘ಆಸ್ಟ್ರೇಲಿಯಾ ಇಂಡಿಯಾ ಬಿಸಿನೆಸ್ ಕೌನ್ಸಿಲ್’ ಒಪ್ಪಂದಕ್ಕೆ ನೆರವಾಗಿದೆ.

ಒಪ್ಪಂದದ ಅಡಿ ಪ್ರತಿ ವರ್ಷ 20 ನವೋದ್ಯಮಗಳಿಗೆ ಬೆಂಬಲ ಸಿಗಲಿದೆ. ಕಾರ್ಯಕ್ರಮದ ಅವಧಿಯಲ್ಲಿ ಮೂಲ ಮಾದರಿ ಅಭಿವೃದ್ಧಿ ಹಾಗೂ ನವೋದ್ಯಮಗಳಿಗೆ ಕ್ರೆಡಲ್ ನೆರವು ನೀಡಲಿದೆ. ಇದರಿಂದ ಸ್ಟಾರ್ಟ್‌ಅಪ್‌ಗಳಿಗೆ ಜಾಗತಿಕ ಮಟ್ಟದ ಸಂಪರ್ಕ, ಸುಧಾರಿತ ಇನ್‌ಕ್ಯುಬೇಷನ್, ಅಂತರರಾಷ್ಟ್ರೀಯ ಮಾನ್ಯತೆ ಮತ್ತು ಮಾರುಕಟ್ಟೆ ಸೌಲಭ್ಯ ದೊರೆಯಲಿದೆ.

ಒಪ್ಪಂದಕ್ಕೆ ಸಹಿ ಹಾಕಿದ ವೇಳೆ ಮಾತನಾಡಿದ ಗೌರವ್ ಗುಪ್ತ, ‘ಇಂತಹ ಸಹಯೋಗದಿಂದ ಆಸ್ಟ್ರೇಲಿಯಾದ ಸುಧಾರಿತ ತಂತ್ರಜ್ಞಾನ ಬಳಸಿಕೊಳ್ಳಲು ಸಾಧ್ಯವಾಗಲಿದೆ. ಜಾಗತಿಕ ವ್ಯವಸ್ಥೆಯೊಂದಿಗೆ ನಾವು ಕೈಜೋಡಿಸಬಹುದಾಗಿದೆ. ಮೂರು ಒಪ್ಪಂದಗಳು ರಾಜ್ಯದ ಉದ್ದಿಮೆಗಳಿಗೆ ನೆರವಾಗಲಿದ್ದು, ಉದ್ಯೋಗ ಸೃಷ್ಟಿ ಆಗಲಿದೆ’ ಎಂದರು.

ರಕ್ತಚಂದನ ರಫ್ತು ಮಿತಿ ಹೆಚ್ಚಳಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ತಚಂದನ ರಫ್ತು ಪ್ರಮಾಣ ಮಿತಿಯನ್ನು ಹೆಚ್ಚಳ ಮಾಡಬೇಕು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಅವರಿಗೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ ಅವರು ಮಾಡಿದರು.

ಸಂಸತ್ ಭವನದಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಅವರು, ‘ಕರ್ನಾಟಕಕ್ಕೆ 10 ಟನ್ ರಫ್ತಿಗೆ ಮಾತ್ರ ಅವಕಾಶ ನೀಡಲಾಗಿದೆ. ಈ ಮಿತಿಯನ್ನು ಹೆಚ್ಚಳ ಮಾಡಬೇಕು. ಇದರಿಂದ ರಾಜ್ಯದ ರೈತರಿಗೆ ಅನುಕೂಲವಾಗಲಿದೆ’ ಎಂದು ಹೇಳಿದರು.

ರೋಗ ನಿರ್ಣಯ ವ್ಯವಸ್ಥೆ ಪ್ರಯೋಗಾಲಯ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2 ಸರ್ಕಾರಿ ಆಸ್ಪತ್ರೆಗಳಲ್ಲಿ ಹಿಂಡ್‌ಲ್ಯಾಬ್ಸ್ ಘಟಕ ಪ್ರಾರಂಭಕ್ಕೆ ಆದೇಶ
- ಸಿಜಿಎಚ್‌ಎಸ್ ದರಗಳಡಿ ಪರೀಕ್ಷಾ ಶುಲ್ಕ ನಿಗದಿ

ಬೆಂಗಳೂರು: ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗ ನಿರ್ಣಯ ವ್ಯವಸ್ಥೆಯ ಬಲವರ್ಧನೆಗೆ ಕ್ರಮಕೈಗೊಂಡಿರುವ ಆರೋಗ್ಯ ಇಲಾಖೆ, ಸರ್ ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಚ್‌ಎಲ್‌ಎಲ್ ಲೈಫ್‌ಕೇರ್‌ನ (ಹಿಂಡ್‌ಲ್ಯಾಬ್ಸ್) ಪ್ರಯೋಗಾಲಯಗಳನ್ನು ಪ್ರಾರಂಭಿಸಲು ಆದೇಶಿಸಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿನ ಪ್ರಯೋಗಾಲಯ ಸೇವೆ ಒಳ ಹಾಗೂ ಹೊರ ರೋಗಿಗಳಿಗೆ ಲಭ್ಯವಿರುತ್ತದೆ. ವಿವಿಧ ಪರೀಕ್ಷೆಗಳ ಸಂಬಂಧ ನೇರವಾಗಿ ಬರುವವರಿಗೆ ಇಲ್ಲಿ ಸೇವೆ ಸಾಧ್ಯವಿಲ್ಲ. ಅಂತಹವರಿಗಾಗಿ ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಈ ಹಿಂದೆ ಎಚ್‌ಎಲ್‌ಎಲ್ ಲೈಫ್‌ಕೇರ್‌ನ ಪ್ರಯೋಗಾಲಯ ಪ್ರಾರಂಭಿಸಲಾಗಿತ್ತು. ಆ ಪ್ರಯೋಗಾಲಯಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾದ ಕಾರಣ, ಸರ್ ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಚ್‌ಎಲ್‌ಎಲ್ ಲೈಫ್‌ಕೇರ್ ಪ್ರಯೋಗಾಲಯ ಪ್ರಾರಂಭಿಸಲಾಗುತ್ತಿದೆ.

ಈ ಪ್ರಯೋಗಾಲಯಗಳಲ್ಲಿ ನೇರವಾಗಿ ಭೇಟಿ ನೀಡುವ ರೋಗಿಗಳಿಗೂ ರೋಗ ನಿರ್ಣಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್) ದರಗಳಡಿ ಪರೀಕ್ಷಾ ಶುಲ್ಕ ಪಡೆಯಲಾಗುತ್ತದೆ.

ಆರೋಗ್ಯ ಸೇವೆಗಳ ಸುಧಾರಣೆ ಮತ್ತು ರೋಗಿಗಳಿಗೆ ಸುಗಮ ವೈದ್ಯಕೀಯ ಸೇವೆಗಳನ್ನು ಒದಗಿಸಲು, ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಉನ್ನತ ಮಟ್ಟದ ರೋಗ ನಿರ್ಣಯ ಪರೀಕ್ಷೆಗಳನ್ನು ಮಾಡಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು ಹಬ್ ಆಗಿ ಗುರುತಿಸಲಾಗುತ್ತಿದೆ.

ಮಾದರಿ ಸಂಗ್ರಹ: ವೃದ್ಧರು, ತೀವ್ರ ಅನಾರೋಗ್ಯ ಸಮಸ್ಯೆ ಹೊಂದಿದವರು, ದೀರ್ಘಕಾಲೀನ ಹಾಗೂ ಗಂಭೀರ ಸಮಸ್ಯೆ ಇರುವವರಿಗೆ ನಿಯಮಿತವಾಗಿ ಆಸ್ಪತ್ರೆಗೆ ಭೇಟಿ ನೀಡಿ, ಪರೀಕ್ಷೆಗೆ ಒಳಪಡಲು ಸಾಧ್ಯವಾಗುವುದಿಲ್ಲ. ಅಂತಹವರಿಗಾಗಿ ರೋಗಿಯ ಮನೆಗೆ ತೆರಳಿ, ಪರೀಕ್ಷೆಗೆ ರಕ್ತದ ಮಾದರಿ ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸಲು ಕ್ರಮಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ಈ ರೀತಿ ಮಾದರಿ ಸಂಗ್ರಹಿಸಿ ನಡೆಸುವ ಪರೀಕ್ಷೆಗೆ ಸಿಜಿಎಚ್‌ಎಸ್ ದರ ಹಾಗೂ ಸಾರಿಗೆ ವೆಚ್ಚ ಪಾವತಿಸಬೇಕಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಎಚ್‌ಎಲ್‌ಎಲ್ ಹಿಂಡ್‌ಲ್ಯಾಬ್‌ನ ಘಟಕಗಳನ್ನು ಪ್ರಾರಂಭಿಸಲು, ಅಗತ್ಯ ಸ್ಥಳಾವಕಾಶ ಒದಗಿಸುವಂತೆ ಸರ್ ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಗೆ ಸೂಚಿಸಿದೆ.

‘ಜನಗಣತಿ: ಸಚಿವಾಲಯ ಸಿಬ್ಬಂದಿ ಬಿಟ್ಟುಕೊಡಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಸಚಿವಾಲಯದ ಅಧಿಕಾರಿ, ನೌಕರರನ್ನು ಜನಗಣತಿ ಕಾರ್ಯಗಳಿಗೆ ಯಾವುದೇ ಕಾರಣಕ್ಕೂ ಬಿಟ್ಟು ಕೊಡಬಾರದೆಂದು ಸಭಾಧ್ಯಕ್ಷರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರಿಗೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪತ್ರ ಬರೆದಿದ್ದಾರೆ.

‘ವಿಧಾನಸಭೆ ಸಚಿವಾಲಯದ ಯಾವುದೇ ಅಧಿಕಾರಿ, ನೌಕರರನ್ನು ಪ್ರಸ್ತುತ ಹಾಗೂ ಭವಿಷ್ಯದಲ್ಲಿ ಜನಗಣತಿ ಕಾರ್ಯಗಳಿಗೆ ನಿಯೋಜಿಸದಂತೆ ಈ ಹಿಂದೆಯೇ ಸಭಾಧ್ಯಕ್ಷರು ಆದೇಶಿಸಿದ್ದರು. ಹೀಗಾಗಿ, ಈ ಬಗ್ಗೆ ಇದೇ 27ರಂದು ತಮಗೆ ಪತ್ರವನ್ನೂ ಬರೆಯಲಾಗಿತ್ತು. ಆದರೂ, ಜನಗಣತಿ ಕಾರ್ಯಗಳಿಗೆ ನಿಯೋಜಿಸಿ ಆದೇಶಿಸಿರುವುದನ್ನು ಸಭಾಧ್ಯಕ್ಷರು ಗಂಭೀರವಾಗಿ ಪರಿಗಣಿಸಿದ್ದು, ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ವಿಧಾನಸಭೆ ಸಚಿವಾಲಯವು ಲೋಕಸಭಾ ಸಚಿವಾಲಯದ ಮಾದರಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರದ ಅಧೀನ ಸಂಸ್ಥೆಯಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೂರು ಅಂಗಗಳಲ್ಲಿ ಒಂದಾದ ಶಾಸಕಾಂಗದ ವ್ಯಾಪ್ತಿಗೆ ಒಳಪಡುತ್ತದೆ. ಶಾಸಕಾಂಗದ ಮುಖ್ಯಸ್ಥರು ಸಭಾಧ್ಯಕ್ಷರು. ಅದೊಂದು ಸಾಂವಿಧಾನಿಕ ಹುದ್ದೆ. ಈ ಸಚಿವಾಲಯವು ಸಭಾಧ್ಯಕ್ಷರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಕಾರ್ಯಾಂಗಕ್ಕೆ ಮತ್ತು ವಿಧಾನಮಂಡಲಕ್ಕೆ ತನ್ನದೇ ಆದ ಮೂಲಭೂತ ವ್ಯವಸ್ಥೆಗಳಿದ್ದು, ಕಾರ್ಯಾಂಗವು ಶಾಸಕಾಂಗಕ್ಕೆ ಉತ್ತರದಾಯಿಯಾಗಿದೆ ವಿನಾ ಕಾರ್ಯಾಂಗಕ್ಕೆ ಅಧೀನವಾಗಿರುವುದಿಲ್ಲ’ ಎಂದೂ ಪತ್ರದಲ್ಲಿ ಹೇಳಿದ್ದಾರೆ.

‘ವಿಧಾನ ಸಭೆಯ ಸಚಿವಾಲಯದಲ್ಲಿ ಕೆಲಸ ಮಾಡುವ ಅಧಿಕಾರಿಗಳು, ನೌಕರರ ಮೇಲೆ ದ್ವಿ- ನಿಯಂತ್ರಣವು ಸಭಾಧ್ಯಕ್ಷರ ಘನತೆ ಮತ್ತು ಶಾಸಕಾಂಗ ಸಭೆಯ ಸ್ವಾತಂತ್ರ್ಯಕ್ಕೆ ಅವಮಾನಕರವಾಗಿದೆ. ಅಲ್ಲದೆ, ಸಚಿವಾಲಯದ ಕೆಲಸ ಕಾರ್ಯಗಳಿಗೆ ಹೆಚ್ಚುವರಿ ಸಿಬ್ಬಂದಿ ಮಂಜೂರಾಗಿಲ್ಲದ ಕಾರಣ ಕಾರ್ಯದೊತ್ತಡ ಹೆಚ್ಚಾಗಿದೆ. ಸಚಿವಾಲಯವು ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಕಾರ್ಯಗಳನ್ನೂ ನಿರ್ವಹಿಸಬೇಕಾಗಿದೆ. ಈ ಮಧ್ಯೆ, ಅನೇಕ ಸಚಿವರು, ಸರ್ಕಾರದ ಮುಖ್ಯ ಸಚೇತಕರು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮುಖ್ಯ ಸಚೇತಕರು, ಹಲವು ಶಾಸಕರು ವಿಧಾನ ಸಭೆ ಸಚಿವಾಲಯದ ಅಧಿಕಾರಿ, ನೌಕರರನ್ನು ಕಾರ್ಯಾಂಗದ ಚುನಾವಣೆ, ಮತದಾರರ ಪಟ್ಟಿ, ಹಿಂದುಳಿದ ವರ್ಗಗಳ ಜಾತಿ ಗಣತಿ, ಮತ ಎಣಿಕೆ ಮತ್ತಿತರ ಯಾವುದೇ ಕೆಲಸ ಕಾರ್ಯಗಳಿಗೆ ನಿಯೋಜಿಸುವುದಕ್ಕೆ ಅವಕಾಶ ಕಲ್ಪಿಸಬಾರದೆಂದು ಸಭಾಧ್ಯಕ್ಷರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಅದನ್ನೂ ಸಭಾಧ್ಯಕ್ಷರು ಗಂಭೀರವಾಗಿ ಪರಿಗಣಿಸಿದ್ದಾರೆ’ ಎಂದೂ ಈ ಪತ್ರದಲ್ಲಿ ಹೇಳಿದ್ದಾರೆ.

ಬಿಗಡಾಯಿಸಿದ ಸಮಸ್ಯೆ: ಬಂಕ್‌ಗಳ ಬಳಿ ಸಾಲಿನಲ್ಲಿ ನಿಂತ ರಿಕ್ಷಾಗಳು

ಎಲ್‌ಪಿಜಿ: ಆಟೊ ಚಾಲಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಕೊರತೆಯಿಂದಾಗಿ ನಗರದಲ್ಲಿ ಆಟೊ ಚಾಲಕರು ಎದುರಿಸುತ್ತಿರುವ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಹೆಚ್ಚಿನ ಭಾಗದಲ್ಲಿ ಎಲ್‌ಪಿಜಿ ಸರಬರಾಜು ಆಗದೇ ಇರುವುದರಿಂದ, ದಾಸ್ತಾನು ಲಭ್ಯತೆ ಇರುವ ಕಡೆಗೆ ಆಟೊ ಚಾಲಕರು ತೆರಳಿ ಗಂಟೆಗಟ್ಟಲೇ ಕಾಯುವ ಸನ್ನಿವೇಶ ನಿರ್ಮಾಣವಾಗಿದೆ.

ಎಲ್‌ಪಿಜಿ ಬಂಕ್‌ಗಳ ಬಳಿ ಕಿಲೋಮೀಟರ್ ಗಟ್ಟಲೇ ಆಟೊಗಳು ಸಾಲಿನಲ್ಲಿ ನಿಲ್ಲುತ್ತಿರುವುದರಿಂದ ಸಂಚಾರ ಸಮಸ್ಯೆಯೂ ಉಂಟಾಗಿದೆ. ಉತ್ತರಹಳ್ಳಿ, ರಾಜಾಜಿನಗರ, ಮತ್ತೀಕೆರೆ, ದಾಸರಹಳ್ಳಿ, ಗುಟ್ಟಹಳ್ಳಿ, ಕೋರಮಂಗಲ, ಯಶವಂತಪುರ ಸೇರಿದಂತೆ ಹಲವು ಭಾಗಗಳಲ್ಲಿ ಸಮಸ್ಯೆ ಹೆಚ್ಚಾಗಿದೆ.



ಕದಿರೇನಹಳ್ಳಿಯಲ್ಲಿ ಎಲ್‌ಪಿಜಿಗಾಗಿ ಆಟೊಗಳು ಸಾಲಿನಲ್ಲಿ ನಿಂತಿದ್ದವು

ಚಿತ್ರ: ವಿ.ಪುಷ್ಕರ್

ರಾಜಾಜಿನಗರದ ಬಂಕ್‌ನಲ್ಲಿ ಎಲ್‌ಪಿಜಿ ಸಿಗುತ್ತಿರುವ ಮಾಹಿತಿ ದೊರೆಯುತ್ತಿದ್ದಂತೆಯೇ ಆಟೊ ಚಾಲಕರು ಅತ್ತ ಕಡೆ ಧಾವಿಸುತ್ತಿದ್ದುದು ಕಂಡು ಬಂತು.

‘ಮೂರು ದಿನದಿಂದಲೂ ಸಮಸ್ಯೆಯಿದೆ. ಗುರುವಾರ ಹೆಚ್ಚಿನ ಭಾಗಗಳಲ್ಲಿ ಎಲ್‌ಪಿಜಿ ಕೊರತೆಯಿಂದ ಆಟೊ ಚಾಲಕರು ತೊಂದರೆ ಅನುಭವಿಸಿದರು. ಬಿಸಿಲಲ್ಲಿ ಕಾದರೂ ಎಲ್‌ಪಿಜಿ ಸಿಗದೇ ಹಲವರು ವಾಪಸ್ ಆದರು’ ಎಂದು ಆಟೊ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ.ರುದ್ರಮೂರ್ತಿ ತಿಳಿಸಿದರು.

ಸಂಚಾರ ದಟ್ಟಣೆ ಉಂಟಾದ ಕಾರಣ ರಾಜಾಜಿನಗರ, ಯಶವಂತಪುರ, ಪೀಣ್ಯ ಮೊದಲಾದ ಕಡೆಗಳಲ್ಲಿ ನಿರ್ವಹಣೆಗೆ ಸಂಚಾರ ಪೊಲೀಸರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಉತ್ತರ ಸಂಚಾರ ಡಿಸಿಪಿ ಜಯಪ್ರಕಾಶ್ ವಿವರಿಸಿದರು.

ನಗರದಲ್ಲಿ ಎಲ್‌ಪಿಜಿ ಮಾತ್ರವಲ್ಲದೇ ಸಿಎನ್‌ಜಿ ಸರಬರಾಜಿನಲ್ಲೂ ವ್ಯತ್ಯಯ ಉಂಟಾಗಿದೆ. ಹೀಗಾಗಿ ಆಟೊಗಳಿಗೆ ಸಿಎನ್‌ಜಿ ಬಳಕೆ ಮಾಡುವ ಚಾಲಕರೂ ಪರದಾಡುವಂತಾಗಿದೆ.

ಎಲ್‌ಪಿಜಿ ಲಭ್ಯತೆ ಇಲ್ಲದೆ ಇರುವುದರಿಂದ ಹೆಚ್ಚಿನ ಆಟೊಗಳು ರಸ್ತೆಗೆ ಇಳಿಯಲಿಲ್ಲ. ಇದರಿಂದಾಗಿ ಪ್ರಯಾಣಿಕರು ವಿದ್ಯುತ್ ಚಾಲಿತ ಆಟೊ ಬಳಸುವುದು ಹೆಚ್ಚಾಗಿದೆ.

‘ಚಿತ್ರಮಂದಿರ ಸಂಸ್ಕೃತಿ ಸಾಯುತ್ತಿದೆ’

ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ಅಭಿನಯದ ‘ಫಸ್ಟ್ ನೈಟ್ ವಿತ್ ದೆವ್ವ’ ಚಿತ್ರ ಇಂದು (ಏ.3) ತೆರೆ ಕಾಣುತ್ತಿದೆ. ಚಿತ್ರ ಹಾಗೂ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.



• ವಿನಾಯಕ ಕೆ.ಎಸ್.

• ಚಿತ್ರದ ಶೀರ್ಷಿಕೆಯೇ ವಿಚಿತ್ರವಾಗಿದೆಯಲ್ಲ?

ಇದು ಹಾರರ್ ಜಾನರ್‌ನ ಸಿನಿಮಾ. ಚಿತ್ರದ ಮೊದಲ ದೃಶ್ಯವೇ ಮದುವೆ. ಮದುವೆಯಾದ ಬಳಿಕ ತಾನು ದ್ವೇಷ ತೀರಿಸಿಕೊಳ್ಳಲು ಬಂದಿರುವ ಹುಡುಗಿ ಜತೆ ಮದುವೆಯಾಗಿದ್ದೇನೆ ಎಂಬುದು ಹುಡುಗನಿಗೆ ಗೊತ್ತಾಗುತ್ತದೆ. ಆಕೆಯ ಜತೆ ಮೊದಲ ರಾತ್ರಿ ನಡೆಯುತ್ತದೆಯೋ ಅಥವಾ ಹುಡುಗಿ ತನ್ನ ದ್ವೇಷ ತೀರಿಸಿಕೊಳ್ಳುತ್ತಾಳೋ ಎಂಬುದು ಚಿತ್ರದ ಒಟ್ಟಾರೆ ಕಥೆ. ಅದಕ್ಕೆ ಈ ಶೀರ್ಷಿಕೆಯೇ ಸೂಕ್ತ ಎಂದು ಇಟ್ಟಿದ್ದೇವೆ. ಇದು ಪ್ಯಾನ್ ಇಂಡಿಯಾ ಭ್ರಮೆಯ ಸಿನಿಮಾವಲ್ಲ. ಕನ್ನಡ ಸೊಗಡಿನ, ಪ್ರೇಮಕಥೆಯ ಹಾರರ್ ಚಿತ್ರ.

• ನೀವು ವಿಭಿನ್ನ, ವಿವಾದಾತ್ಮಕ ವಿಷಯಗಳಿಗೆ ಆಗಾಗ ಸುದ್ದಿಯಾಗುತ್ತಾ ಇರುತ್ತೀರಿ. ಅದು ಸಿನಿಮಾ ವಿಷಯಕ್ಕೆ ಬಂದಾಗ ಫಲ ನೀಡುತ್ತದೆಯಾ?

ಪ್ರಾಮಾಣಿಕವಾಗಿ ಸಿನಿಮಾ ಮಾಡುತ್ತಿರುವೆ. ಜೂಜಾಟ ಉತ್ತೇಜಿಸುವ, ಡೇಟಿಂಗ್ ಆ್ಯಪ್‌ಗಳನ್ನು ಜನಪ್ರಿಯಗೊಳಿಸುವ ಜಾಹೀರಾತುಗಳಲ್ಲಿ ಕಾಣಿಸಿಕೊಂಡರೆ ಸಾವಿರಾರು ರೂಪಾಯಿ ನೀಡುತ್ತಾರೆ. ಅಂಥವುಗಳನ್ನು ಮಾಡಿಕೊಂಡು ನೆಮ್ಮದಿಯಾಗಿ ಇರಬಹುದಿತ್ತು. ಆದರೆ ನಾನು ಈತನಕ ಸಮಾಜಕ್ಕೆ ತಪ್ಪು ಸಂದೇಶ ರವಾನಿಸುವ ಜಾಹೀರಾತುಗಳನ್ನು ಮಾಡದೆ, ಸಿನಿಮಾ ಮಾಡಿಕೊಂಡು ಕುಳಿತಿರುವೆ. ನನ್ನ ಕೈಯಿಂದಾಗುವಷ್ಟು ಸಿನಿಮಾ ಮಾಡಿರುವೆ. ಇದರಿಂದ ಸಾಕಷ್ಟು ಕಲಾವಿದರು, ತಂತ್ರಜ್ಞರಿಗೆ ಕೆಲಸ ಸಿಕ್ಕಿದೆ.

ಬಿಗ್‌ಬಾಸ್‌ನಲ್ಲಿ ಜನ ಗೆಲ್ಲಿಸಿಕೊಟ್ಟಿದ್ದಾರೆ. ಜನರನ್ನು ಸಹಜವಾಗಿ ತಲುಪಬೇಕು. ಹೀಗಾಗಿ ನನ್ನ ಶಕ್ತಿ ಮೀರಿ ಸಿನಿಮಾಗಳನ್ನು ಮಾಡುತ್ತಿರುವೆ. ಜನ ಕೈಹಿಡಿದರೆ ನನಗೊಂದು ಶಕ್ತಿ ಬರುತ್ತದೆ. ನನ್ನ ಹಿಂದಿನ ಸಿನಿಮಾಗಳ ಪ್ರಚಾರಕ್ಕೆ ಜನಪ್ರಿಯ ಕಲಾವಿದರನ್ನು ಕರೆಸಿದ್ದೆ. ಆದರೆ ಈ ಸಿನಿಮಾಕ್ಕೆ ಆ ರೀತಿ ಮಾಡಿಲ್ಲ. ಹಿರಿಯ ಕಲಾವಿದರನ್ನು ಕರೆಸಿ ಪ್ರಚಾರ ಮಾಡಿರುವೆ. ಜತೆಗೆ ಸಿನಿಮಾದಲ್ಲಿಯೂ ಶ್ರೀನಿವಾಸಮೂರ್ತಿ, ರಮೇಶ್ ಭಟ್, ಹರೀಶ್ ರಾಜ್ ಅವರಂಥ ಹಿರಿಯ ಕಲಾವಿದರು ಇದ್ದಾರೆ.

• ಸಿನಿಮಾದ ಯಶಸ್ಸು ನಿಮ್ಮ ಪಾಲಿಗೆ ಎಷ್ಟು ಸವಾಲು?

ಸಿನಿಮಾ ಮಾಡುವುದು ಕಷ್ಟ. ಅದನ್ನು ಪ್ರಚಾರ ಮಾಡುವುದು ಮತ್ತೂ ಕಷ್ಟ. ಚಿತ್ರಮಂದಿರಗಳಿಗೆ ಜನರನ್ನು ಕರೆಸುವುದು ನರಕ. ಸರ್ಕಸ್ ಮಾಡಿ, ವಿಚಿತ್ರ ರೀತಿಯಲ್ಲಿ ಪ್ರಚಾರ ಮಾಡಿ, ಏನೇ ಮಾಡಿದರೂ ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ. ಹೀಗಾಗಿ ಯಾವುದೇ ನಿರೀಕ್ಷೆ ಇಟ್ಟುಕೊಳ್ಳದೇ ಪ್ರಾಮಾಣಿಕವಾಗಿ ಸಿನಿಮಾ ಮಾಡಿರುವೆ. ಈ ಚಿತ್ರದ ಕಥೆ, ಚಿತ್ರಕಥೆ ನನ್ನದು. ಜನ ಮನಬಿಚ್ಚಿ ನಗುವಂತ ಸಿನಿಮಾ ಮಾಡಿರುವೆ ಎಂಬ ವಿಶ್ವಾಸವಿದೆ. 30 ಸೆಕೆಂಡ್‌ನ ರೀಲ್ಸ್‌ಗೆ ಜನ ಅಂಟಿಕೊಂಡಿದ್ದಾರೆ. ಕೆಲ ಒಳ್ಳೆಯ ಸಿನಿಮಾಗಳು ಇಲ್ಲಿ ಸೋತಿವೆ. ಸುಮಾರಾಗಿರುವ ಸಿನಿಮಾಗಳು ಗೆದ್ದಿವೆ. ಹೀಗಾಗಿ ಗೆಲುವು ಹೀಗೇ ಎನ್ನಲು ಸಾಧ್ಯವಿಲ್ಲ.

ಮಾರುಕಟ್ಟೆಗೆ ಎಐ ಬಂದಿದೆ. ಎಐನಲ್ಲಿ ಬಹಳ ಕಡಿಮೆ ಬಂಡವಾಳದಲ್ಲಿ ಮಾಸ್ ಸಿನಿಮಾ ಮಾಡಬಹುದು. ಮುಂದಿನ ದಿನಗಳಲ್ಲಿ ಮನುಷ್ಯ ಭಾವನೆಗಳನ್ನು ಹೊಂದಿರುವ ಸಿನಿಮಾಗಳು ಇರುವುದಿಲ್ಲ. ನಟ, ನಟಿಯರು ಬೇಕಾಗುವುದಿಲ್ಲ. ಜನ ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡದಿದ್ದರೆ, ಒಂದೆರಡು ವರ್ಷಗಳಲ್ಲಿ ನೋಡಲು ಸಿನಿಮಾಗಳಿಲ್ಲ ಎಂಬ ಪರಿಸ್ಥಿತಿ ಬರಬಹುದು. ಚಿತ್ರಮಂದಿರ ಸಂಸ್ಕೃತಿ ಸಾಯುತ್ತಿದೆ. ಇದನ್ನು ಪ್ರೇಕ್ಷಕರಿಗೆ ಮನವರಿಕೆ ಮಾಡಿಕೊಡಬೇಕಿದೆ. ನನ್ನ ಸಿನಿಮಾಗೆ ಅಂತಲ್ಲ, ಬೇರೆ ಸಿನಿಮಾಗಳಿಗಾದರೂ ಜನ ಬರಲಿ.

• ನಿಮಗೆ ಚಿತ್ರರಂಗದ ಹಿನ್ನೆಲೆಯಿತ್ತಾ? ಈತನಕದ ಸಿನಿಮಾ ಪಯಣ ಹೇಗಿದೆ?

ಮೊದಲಿನಿಂದಲೂ ನಿರ್ದೇಶಕನಾಗಬೇಕೆಂಬ ಆಸೆಯಿತ್ತು. ನಾಯಕ ಆಗಬೇಕು ಅಂದುಕೊಂಡವನಲ್ಲ. ನನಗೆ ಅದು ಸಿಕ್ಕಿರುವುದೇ ಹೆಚ್ಚು. ‘ಬಿಗ್‌ಬಾಸ್’ನಲ್ಲಿ ಕಾಣಿಸಿಕೊಂಡೆ. ಅದರಿಂದ ನಟನಾದೆ. ‘ಸಿಲ್ಲಿ ಲಲ್ಲಿ’, ‘ಪರಮ ಪದ’ ಮೊದಲಾದ ಧಾರಾವಾಹಿಗಳಲ್ಲಿ ಸಹ, ಸಹಾಯಕ ನಿರ್ದೇಶಕನಾಗಿದ್ದೆ. ಅಲ್ಲಿಂದ ಈ ಮಟ್ಟಕ್ಕೆ ಬೆಳೆದಿದ್ದು ಖುಷಿಯಿದೆ.

• ನಿಮ್ಮ ಮುಂದಿನ ಯೋಜನೆಗಳೇನು?

ಮೊದಲು ಈ ಸಿನಿಮಾ ದಡ ಮುಟ್ಟಿಸುವುದು. ಇದಾದ ಬಳಿಕ ‘ನೋ ಕೊಕೇನ್’ ಹಾಗೂ ‘ಕರ್ನಾಟಕದ ಅಳಿಯ’ ಸಿನಿಮಾಗಳು ಬಿಡುಗಡೆಗೆ ಬಾಕಿ ಇವೆ. ಅವುಗಳ ಅಂತಿಮ ಹಂತದ ಕೆಲಸಗಳು ನಡೆಯುತ್ತಿವೆ. ಅದಾದ ಬಳಿಕ ಯಾವ ಸಿನಿಮಾವನ್ನೂ ಒಪ್ಪಿಕೊಂಡಿಲ್ಲ.

• ನಿಮ್ಮ ಪ್ರಕಾರ ಪ್ರೇಕ್ಷಕರು ಈ ಸಿನಿಮಾವನ್ನು ಏಕೆ ನೋಡಬೇಕು?

ಒತ್ತಡವನ್ನು ನಿವಾರಿಸುತ್ತದೆ. ದೆವ್ವದ ಜತೆಗೆ ಹುಡುಗನ ಪಯಣ ಮಜವಾಗಿದೆ. ನೋಡಲು ಕಷ್ಟವಾಗುವಂಥ ಕಥೆಯಲ್ಲ, ಇಷ್ಟವಾಗುವ ಮುಖಗಳಿವೆ. ಇಲ್ಲಿರುವ ಪಾತ್ರಗಳಿಗೆ ಜನರನ್ನು ಚಿತ್ರಮಂದಿರಗಳಲ್ಲಿ ಕೂರಿಸುವ ಶಕ್ತಿಯಿದೆ. ಚಿತ್ರದಲ್ಲಿ ಕಥೆ ಹೊರತಾದ ಅವಶ್ಯ ಸನ್ನಿವೇಶಗಳಿಲ್ಲ, ಸಾಕಷ್ಟು ತಿರುವುಗಳಿವೆ.

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ




‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’- ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ


ಸಿನಿ ಸಮ್ಮಾನ ಮೂರನೇ ಆವೃತ್ತಿ ಕಾರ್ಯಕ್ರಮದಲ್ಲಿ ಪೃಥ್ವಿ ಅಂಬಾರ್ ನೃತ್ಯ ಪ್ರದರ್ಶನ

ಟೆರರ್ ಟ್ರೇಲರ್ ಬಿಡುಗಡೆ

ಆದಿತ್ಯ ನಾಯಕನಾಗಿ ನಟಿಸಿರುವ ಮಾಸ್, ಆ್ಯಕ್ಷನ್ ಕಥೆಯ ‘ಟೆರರ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸುಂದರರಾಜ್, ವಿ.ನಾಗೇಂದ್ರ ಪ್ರಸಾದ್, ಲಹರಿ ವೇಲು, ಉಮೇಶ್ ಬಣಕಾರ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಭಾಗಿಯಾಗಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ರಂಜನ್ ಶಿವರಾಮ್ ಗೌಡ ನಿರ್ದೇಶನದ ಚಿತ್ರ ಏ.10ರಂದು ತೆರೆಗೆ ಬರಲಿದೆ. ಉಪ್ಪಿ ಎಂಟರ್‌ಟೈನರ್ಸ್ ಬ್ಯಾನರ್ ಅಡಿಯಲ್ಲಿ ಸಿಲ್ಕ್ ಮಂಜು, ರವಿ ವಸಿಷ್ಠ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘2023ರಲ್ಲಿಯೇ ಚಿತ್ರ ಸೆಟ್ಟೇರಿತ್ತು. ಕಾರಣಾಂತರಗಳಿಂದ ಚಿತ್ರ ಬಿಡುಗಡೆ ತಡವಾಗಿದೆ. ದೇವರ ಸುತ್ತ ಒಂದಷ್ಟು ಮಾಫಿಯಾಗಳು ನಡೆಯುತ್ತವೆ. ನಮ್ಮಲ್ಲಿ ಬಹುತೇಕರು ದೇವರನ್ನು ನಂಬುತ್ತಾರೆ. ಈ ನಂಬಿಕೆಯನ್ನೇ ಬಂಡವಾಳವಾಗಿಸಿಕೊಂಡು ಕೆಲ ದುಷ್ಟಶಕ್ತಿಗಳು ಹೇಗೆ ಕೆಲಸ ಮಾಡುತ್ತವೆ ಎಂಬುದೇ ಚಿತ್ರಕಥೆ’ ಎಂದರು ನಿರ್ದೇಶಕ.

ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್ ಮುಂತಾದವರು ಚಿತ್ರದಲ್ಲಿದ್ದಾರೆ. ಹರ್ಷವರ್ಧನ್ ಸಂಗೀತ, ನವೀನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.


ಶ್ರೀನಗರ ಕಿಟ್ಟಿ

ಎಲ್ರ ಕಾಲೆಳೆಯಲು ಸಜ್ಜಾದ ಚಂದನ್ ಶೆಟ್ಟಿ


ಚಂದನ್ ಶೆಟ್ಟಿ
ಅರ್ಚನಾ ಕೊಟ್ಟಿಗೆ

ಚಂದನ್ ಶೆಟ್ಟಿ ಅಭಿನಯದ ‘ಎಲ್ರ ಕಾಲೆಳೆಯತ್ತೆ ಕಾಲ’ ಚಿತ್ರ ಕೊನೆಗೂ ತೆರೆಗೆ ಬರಲು ಸಜ್ಜಾಗಿದೆ. ಸಮಯದ ಮಹತ್ವ ಸಾರುವ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಸುಜಯ್ ಶಾಸ್ತ್ರಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ‘ಮಾತು ಮಧುರ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.


‘ಕಾರಣಾಂತರದಿಂದ ನಮ್ಮ ಚಿತ್ರ ಬಿಡುಗಡೆ ತಡವಾಗಿದೆ. ಈಗ ಬಿಡುಗಡೆಗೆ ಮುಹೂರ್ತ ಕೂಡಿ ಬಂದಿದೆ. ಏ.17ರಂದು ಚಿತ್ರ ತೆರೆಗೆ ಬರಲಿದೆ. 90ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಕನಕಪುರದಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣವಾಗಿದೆ. ರಾಜಗುರು ಹೊಸಕೋಟೆ ಕಥೆ ಬರೆದಿದ್ದಾರೆ. ಹಾಸ್ಯಮಯ ಕಥೆಯ ಚಿತ್ರ’ ಎಂದರು ನಿರ್ದೇಶಕ.

ಅರ್ಚನಾ ಕೊಟ್ಟಿಗೆ ಈ ಚಿತ್ರದ ನಾಯಕಿ. ದತ್ತಣ್ಣ, ತಾರಾ ಅನುರಾಧ, ಮಂಜು ಪಾವಗಡ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಪ್ರವೀಣ್-ಪ್ರದೀಪ್ ಸಂಗೀತ ನೀಡಿದ್ದಾರೆ. ಗೋಕುಲ ಎಂಟರ್‌ಟೈನರ್ಸ್ ಲಾಂಛನದಲ್ಲಿ ಗೋವಿಂದರಾಜು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಇದು ನಾನು ನಾಯಕನಾಗಿ ನಟಿಸಿರುವ ಮೊದಲ ಚಿತ್ರ. ಸಾಕಷ್ಟು ತಯಾರಿ ಮಾಡಿಕೊಂಡು ಈ ಚಿತ್ರದಲ್ಲಿ ನಟಿಸಿದ್ದೇನೆ. ಪಾತ್ರಕ್ಕಾಗಿ ದೇಹದ ತೂಕ ಕೂಡ ಹೆಚ್ಚಿಸಿಕೊಂಡಿದ್ದೆ. ಸಮಯಕ್ಕೆ ಬೆಲೆ ಕೊಡಬೇಕು. ಇಲ್ಲದಿದ್ದರೆ ಏನೆಲ್ಲಾ ಆಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಮನಮುಟ್ಟುವ ಹಾಗೆ ತೋರಿಸಲಾಗಿದೆ’ ಎಂದರು ಚಂದನ್ ಶೆಟ್ಟಿ.

ಈ ವಾರ ಆರು ಸಿನಿಮಾಗಳು ತೆರೆಗೆ

ನಾನು ಕರುಣಾಕರ


ಆರ್ಯನ್ ತೇಜಸ್, ಭವೀಶ್, ರಾಧಾ ಭಗವತಿ

ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ಆರ್ಯನ್ ತೇಜಸ್ ನಿರ್ದೇಶನದ ಜತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

‘ಅಪ್ಪ–ಮಗ ಹಾಗೂ ಗಂಡ–ಹೆಂಡತಿಯ ಬಾಂಧವ್ಯದ ಸುತ್ತ ಸಾಗುವ ಸಿನಿಮಾ. ಕಾಮಿಡಿ ಜಾನರ್‌ನ ಕಥೆಯಿದು’ ಎಂದಿದ್ದಾರೆ ನಿರ್ದೇಶಕ.

‘ನಮ್ಮ ಪಾಪ್ ಕಾರ್ನ್’ ಸಿನಿಮಾ ಪ್ರೊಡಕ್ಷನ್ ಬಂಡವಾಳ ಹೂಡಿದೆ. ರಾಧಾ ಭಗವತಿ ನಾಯಕಿ. ಭವೀಶ್, ಕರಿಸುಬ್ಬು, ಎಂ.ಕೆ ಮಠ, ಬಿ.ಎಂ. ವೆಂಕಟೇಶ ಮುಂತಾದವರು ಚಿತ್ರದಲ್ಲಿದ್ದಾರೆ.

ಅಪರಿಚಿತೆ

ಗೀತಪ್ರಿಯ, ಶ್ರೀನಾಥ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಚಿತ್ರಕ್ಕೆ ವಿಶ್ವನಾಥ ನಿರ್ದೇಶನವಿದೆ. ಅಮರ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಸುರೇಶ್ ಕುಮಾರ್ ಬಂಡವಾಳ ಹೂಡಿದ್ದಾರೆ.

‘ಸಾಮಾಜಿಕ ಕಳಕಳಿ, ಸಂದೇಶ ಹೊಂದಿರುವ ಚಿತ್ರವಿದು. ಹೆಣ್ಣುಭ್ರೂಣ ಹತ್ಯೆ ಕುರಿತು ನೈಜ ಘಟನೆ ಆಧಾರಿತ ಕಥೆಯನ್ನು ಹೊಂದಿದೆ. ಇಂದಿಗೂ ನಮ್ಮ ಸಮಾಜದಲ್ಲಿ ಹೆಣ್ಣು ಎಂಬ ಕಾರಣಕ್ಕೆ ಭ್ರೂಣವನ್ನೇ ಹತ್ಯೆ ಮಾಡುವವರಿದ್ದಾರೆ. ಅಂಥವರ ವಿರುದ್ಧ ಸಿಡಿದೇಳುವ ಕಥೆ. ಶ್ರೀನಾಥ್ ಮತ್ತು ಅವರ ಪುತ್ರ ರೋಹಿತ್ ಹಲವು ವರ್ಷಗಳ ಬಳಿಕ ಮತ್ತೆ ಒಟ್ಟಾಗಿ ಕಾಣಿಸಿಕೊಂಡಿದ್ದಾರೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಸಿಂಧು ಲೋಕನಾಥ್, ಆರ್.ಜೆ.ನಿಖಿತಾ, ಶ್ರೀನಾಥ್ ಅವರ ಪುತ್ರ ರೋಹಿತ್ ಪ್ರಮುಖ ಪಾತ್ರದಲ್ಲಿದ್ದಾರೆ. ಅನಿಲ್ ಸಂಗೀತ, ಶಂಕರ್ ಛಾಯಾಚಿತ್ರಗ್ರಹಣ, ಮಂಜುನಾಥ್ ಶಿರಸಿ ಸಂಕಲನ ಚಿತ್ರಕ್ಕಿದೆ.

ಸೈಕಿಕ್

ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಪುಷ್ಕರ್ ಗಿರಿಗೌಡ ಆ್ಯಕ್ಷನ್-ಕಟ್ ಹೇಳಿದ್ದಾರೆ. ಸರ್ದಾರ್ ಸತ್ಯ, ಹಂಸಾ ಪ್ರತಾಪ್ ಮುಖ್ಯಭೂಮಿಕೆಯಲ್ಲಿದ್ದಾರೆ. ಸಿಲ್ಕ್ ಸಿನಿಮಾ ಅಡಿಯಲ್ಲಿ ಚೇತನ್ ಮಂಜುನಾಥ್ ಹಾಗೂ ಸಿಲ್ಕ್ ಮಂಜು ಚಿತ್ರವನ್ನು ನಿರ್ಮಿಸಿದ್ದಾರೆ.

‘ಸಾಮಾನ್ಯವಾಗಿ ಕ್ರೈಂ-ಥ್ರಿಲ್ಲರ್- ಇನ್ವೆಸ್ಟಿಗೇಶನ್ ಸಿನಿಮಾಗಳಲ್ಲಿ ರಕ್ತಸಿಕ್ತ ದೃಶ್ಯಗಳನ್ನು ವೈಭವೀಕರಿಸುತ್ತಾರೆ. ಆದರೆ ಈ ಸಿನಿಮಾದಲ್ಲಿ ಅದರ ಹೊರತಾಗಿ ಕ್ರೌರ್ಯವನ್ನು ಪರೋಕ್ಷವಾಗಿ ಮನದಟ್ಟು ಮಾಡುವ ರೀತಿಯಲ್ಲಿ ದೃಶ್ಯ ಸಂಯೋಜನೆ ಮಾಡಿದ್ದೇವೆ. ವ್ಯಕ್ತಿಯೊಬ್ಬ ಸೈಕ್ ಆಗಿ ಸರಣಿ ಕೊಲೆಗಳನ್ನು ಮಾಡುತ್ತಾನೆ. ಅದರ ಹಿಂದೆ ಕಥೆ ಸಾಗುತ್ತದೆ’ ಎಂದಿದ್ದಾರೆ ನಿರ್ದೇಶಕ.

ರಮೇಶ್ ಭಟ್, ಅರವಿಂದ್ (ರಥಸಪ್ತಮಿ), ಕೈಲಾಸ್ ದೇವ್, ನಿಖಿತಾ ದೋರ್ತೋಡಿ ಮುಖ್ಯ ಭೂಮಿಕೆಯಲ್ಲಿರುವ ಸಿನಿಮಾಕ್ಕೆ ಎಂ.ಎಸ್.ತ್ಯಾಗರಾಜ್ ಸಂಗೀತ, ಸಿನಿಟೆಕ್ ಸೂರಿ ಛಾಯಾಚಿತ್ರಗ್ರಹಣ, ವೈ.ಎಸ್.ಶ್ರೀಧರ್ ಸಂಕಲನವಿದೆ.

ಪ್ರೇಮಿ

ಎಸ್.ಪ್ರದೀಪ್ ವರ್ಮ ನಿರ್ದೇಶನ, ಸಂಗೀತ ನಿರ್ದೇಶನವಿದೆ. ಪ್ರೀತಿ ಕುರಿತಾದ ಕಥೆ ಹೊಂದಿರುವ ಸಿನಿಮಾವಿದು. ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಈ ಚಿತ್ರಕ್ಕಿದೆ. ಅದ್ವಿಕ್ ಚಿತ್ರದ ನಾಯಕ. ಸಾತ್ವಿಕಾ, ಶೋಭಿತ, ಎಚ್.ಜಿ. ವೀರೇಶ್, ದ್ವಿತ ಕೆ. ಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.


ಅದ್ವಿಕ್, ಸಾತ್ವಿಕಾ

ಫಸ್ಟ್‌ನೈಟ್ ವಿತ್ ದೆವ್ವ

ಪ್ರಥಮ್ ಅಭಿನಯದ ಚಿತ್ರಕ್ಕೆ ಪಿ.ವಿ.ಆರ್.ಸ್ವಾಮಿ ಗೂಗಾರೆದೊಡ್ಡಿ ನಿರ್ದೇಶನ, ಛಾಯಾಚಿತ್ರಗ್ರಹಣವಿದೆ. ಮನರಂಜನೆ ಜತೆಗೆ ಹಾರರ್ ಕಥಾಹಂದರ ಹೊಂದಿರುವ ಚಿತ್ರವೆಂದು ಚಿತ್ರತಂಡ ಹೇಳಿದೆ.

ನಿಖಿತಾ ಸ್ವಾಮಿ ನಾಯಕಿ. ಸುಶ್ಮಿತಾ, ಹರೀಶ್ ರಾಜ್, ಶ್ರೀನಿವಾಸಮೂರ್ತಿ, ರಮೇಶ್ ಭಟ್, ತುಕಾಲಿ ಸಂತೋಷ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಅದ್ವಿಕ್ ವರ್ಮ ಸಂಗೀತ ನಿರ್ದೇಶನವಿದೆ.

ಇವುಗಳಲ್ಲದೇ ‘ಸಿಂಹಪುರಿಯ ಸಿಂಹ’ ಚಿತ್ರ ಕೂಡ ಈ ವಾರ ತೆರೆ ಕಾಣುತ್ತಿದೆ.

ಗಮನ ಸೆಳೆಯುವ ‘ರಾಮಾಯಣ’ ಟೀಸರ್



ರಣ್‌ಬೀರ್ ಕಪೂರ್, ಯಶ್, ಸಾಯಿ ಪಲ್ಲವಿ, ಸನ್ನಿ ಡಿಯೋಲ್ ಸೇರಿದಂತೆ ಹಲವು ತಾರೆಯರನ್ನು ಹೊಂದಿರುವ ಬಾಲಿವುಡ್‌ನ ಬಹುನಿರೀಕ್ಷಿತ ‘ರಾಮಾಯಣ’ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ರಾಮನಾಗಿ ರಣಬೀರ್ ಕಪೂರ್, ರಾವಣನಾಗಿ ಯಶ್ ಗಮನ ಸೆಳೆಯುತ್ತಿದ್ದಾರೆ.

ನಿತೇಶ್ ತಿವಾರಿ ನಿರ್ದೇಶನದ ಚಿತ್ರ ಎರಡು ಭಾಗಗಳಲ್ಲಿ ಸಿದ್ಧಗೊಳ್ಳುತ್ತಿದ್ದು, ಬೃಹತ್ ಬಜೆಟ್‌ನ ಈ ಚಿತ್ರಕ್ಕೆ ನಮಿತ್ ಮಲ್ಹೋತ್ರಾ ಬಂಡವಾಳ ಹೂಡಿದ್ದಾರೆ. ಪ್ರೈಮ್ ಫೋಕಸ್ ಸ್ಟುಡಿಯೋಸ್, ಡಿಎನ್‌ಇಜಿ ಮತ್ತು ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಜಂಟಿಯಾಗಿ ಚಿತ್ರವನ್ನು ನಿರ್ಮಿಸುತ್ತಿವೆ.

‘ರಾಮಾಯಣದ ಹಿರಿಮೆ ಇರುವುದು ಅದರ ಸಂದೇಶದಲ್ಲಿ. ಇದು ಕೇವಲ ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ಹೋರಾಟವಲ್ಲ, ಬದಲಾಗಿ ಇದು ನಾವು ಮಾಡುವ ಆಯ್ಕೆಗಳು, ಅದರ ಪರಿಣಾಮಗಳು ಮತ್ತು ಸರಿ ದಾರಿಯಲ್ಲಿ ನಡೆಯುವ ನಮ್ಮ ಜವಾಬ್ದಾರಿಯ ಬಗ್ಗೆ ತಿಳಿಸುತ್ತದೆ. ಅದನ್ನೇ ಚಿತ್ರ ಕೂಡ ಹೇಳುತ್ತದೆ’ ಎಂದಿದ್ದಾರೆ ನಿರ್ದೇಶಕ.

ಬ್ರಹ್ಮ, ವಿಷ್ಣು ಮತ್ತು ಶಿವ - ಈ ತ್ರಿಮೂರ್ತಿಗಳು ಜಗತ್ತನ್ನು ಆಳುವ ಕಾಲದಲ್ಲಿ, ಭೂಮಿಯ ಮೇಲೆ ಅರಾಜಕತೆ ತಾಂಡವವಾಡಿದಾಗ, ಸಮತೋಲನವನ್ನು ಕಾಯ್ದುಕೊಳ್ಳಲು ವಿಷ್ಣು ‘ರಾಮ’ನಾಗಿ ಮನುಷ್ಯ ರೂಪದಲ್ಲಿ ಅವತರಿಸುತ್ತಾನೆ. ರಾಮನ ವಿರುದ್ಧವಾಗಿ ನಿಲ್ಲುವವನೇ ರಾಕ್ಷಸ ರಾವಣ. ಇವರಿಬ್ಬರ ನಡುವಿನ ದೃಶ್ಯ ವೈಭವವೇ ರಾಮಾಯಣ ಎಂದಿದೆ ಚಿತ್ರತಂಡ.


‘ರಾಮಾಯಣ: ಭಾಗ 1’ ಚಿತ್ರವು 2026ರ ದೀಪಾವಳಿ ಹಬ್ಬದಂದು ಜಾಗತಿಕವಾಗಿ ತೆರೆಕಾಣಲಿದೆ. ಎರಡನೇ ಭಾಗವು ಪ್ರಸ್ತುತ ನಿರ್ಮಾಣ ಹಂತದಲ್ಲಿದ್ದು, 2027ರ ದೀಪಾವಳಿಗೆ ಬಿಡುಗಡೆಯಾಗಲಿದೆ ಎಂದು ನಿರ್ಮಾಣ ಸಂಸ್ಥೆ ತಿಳಿಸಿದೆ.



ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Coolest Summer SALE
₹25,000 ವರೆಗೆ ಕಡಿತ ಎಕ್ಸ್‌ಚೇಂಜ್ ಮೇಲೆ
1 ಇ.ಎಮ್.ಐ ಉಚಿತ
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
ಫೈನಾನ್ಸ್ ಬೊನಾಂಜಾ
Upto 15,000 CASH BACK*
LG ASSURED GIFTS ON ALL PRODUCTS*
BT SPEAKER INDUCTION COOKER STEAM IRON KETTLE DRY IRON
FREE HOLIDAY PACKAGE WITH FAMILY
2 NIGHTS 3 DAYS
HOLIDAY PACKAGE ₹5000
STORE LOCATOR
ನಮ್ಮ ಮಳಿಗೆಗಳು 10.30AM - 10.00PM ತೆರೆದಿರುತ್ತದೆ
ALTERNATE TO LPG - GO ELECTRIC
LIMITED Stock!
V-GUARD KAFF Prestige Tefal Butterfly Preethi Pigeon
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,058
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier 1.0 TON 4 STAR INVERTER SPLIT AIR CONDITIONER ಇ.ಎಮ್.ಐ ₹2,654
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,679
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,404
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹2,918
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,508
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,567
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
ಕೆಟಲ್ ಕುದಿಯಲು LIMITED Stock!
ರೈಸ್ ಕುಕ್ಕರ್ ಅಡುಗೆಗಾಗಿ LIMITED Stock!
ಮೈಕ್ರೋವೇವ್ ಮತ್ತು ಒಟಿಜಿ ಬೇಕಿಂಗ್‌ಗಾಗಿ LIMITED Stock!
ಏರ್ ಫ್ರೈಯರ್ ಆರೋಗ್ಯಕರ ಅಡುಗೆಗಾಗಿ LIMITED Stock!
ಗೀಸರ್ ಗ್ಯಾಸ್ ಗೀಸರ್ ಬದಲಿಗೆ LIMITED Stock!
Panasonic 27ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್ ಇ.ಎಮ್.ಐ ₹1,441
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 ಲೀ CONVERTIBLE 5IN1 SIDE BY SIDE REFRIGERATOR RS76CG8103S9HL ಇ.ಎಮ್.ಐ ₹4,990
Godrej 600ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ ಇ.ಎಮ್.ಐ ₹5,653
ಉಚಿತ: ₹4,245 ಮೌಲ್ಯದ PREETHI MIXER GRINDER
BOSCH 334ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,791
ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 308ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹2,854
ಉಚಿತ: ₹4,470 ಮೌಲ್ಯದ PREETHI INDUCTION COOKTOP*
Haier 190 ಲೀ ಡೈರೆಕ್ಟ್ ಕೂಲ್ ಸಿಂಗಲ್ ಡೋರ್ ರೆಫ್ರಿಜರೇಟರ್ ಇ.ಎಮ್.ಐ ₹1,908
ಉಚಿತ: ₹1,895 ಮೌಲ್ಯದ PHILIPS TOASTER*
iPhone 17 /17 PRO / 17 PRO MAX STARTS FROM ₹81,500* EMI STARTS FROM ₹3,454
SAMSUNG S26/S26+/ S26 ULTRA EFFECTIVE PRICE ₹79,999* (AFTER CASH BACK) EMI STARTS FROM ₹3,667
oppo F31 / OPPO F31/ OPPO F31+ STARTS FROM ₹25,800* EMI STARTS FROM ₹2,150
Redmi NOTE15 / NOTE15 PRO/ NOTE15 PRO+ ₹1,908 ONWARDS
Lenovo SLIM 3i INTEL CORE i7 13620H 16GB RAM 512GB SSD 15.6" FHD WIN 11 MSO 24 ಇ.ಎಮ್.ಐ ₹6,333 OFFER PRICE ₹75,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp 15 INTEL CORE i5 16GB, 512 GB SSD 15.6 FHD WIN 11 MSO 24 ಇ.ಎಮ್.ಐ ₹5,916 OFFER PRICE ₹64,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 75 INCH ULTRA HD (4K) SMART ಎಲ್‌ಇಡಿ 75NANO83A6A ಇ.ಎಮ್.ಐ ₹6,999
ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K QLED SMART ಎಲ್‌ಇಡಿ QN65Q7FAAFXZA ಇ.ಎಮ್.ಐ ₹6,990
SONY 55 4K ULTRA HD SMART ಎಲ್‌ಇಡಿ K-55S25M2 ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,249
ಉಚಿತ: ₹4,470 ಮೌಲ್ಯದ PREETHI INDUCTION COOKTOP*
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,897
ಉಚಿತ: ₹1,895 ಮೌಲ್ಯದ PHILIPS TOASTER*
LG SOUNDBAR S40T 2.1 CH, 300W, AI Sound Pro, Dolby Digital OFFER PRICE ₹11,990 EMI ₹1,000 MRP ₹26,990
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
facebook
WE SUPPORT ROUND TABLE INDIA LADIES CIRCLE INDIA

ಭೂಮಿಗೆ ಎಂದಿಗೂ ಕಾಣದ ಚಂದ್ರನ ಇನ್ನೊಂದು ಬದಿಯನ್ನು ಕಾಣಲು ಮನುಷ್ಯ ಹೊರಟಿದ್ದಾನೆ. ಮನುಷ್ಯನಿಗೆ ಸುರಕ್ಷಿತವಾಗಿರುವ ಭೂಮಿಯ ಸುತ್ತಲ ವಾತಾವರಣವನ್ನೂ ಮೀರಿ (ಡೀಪ್ ಸ್ಪೇಸ್ ಎನ್ವಿರಾನ್ಮೆಂಟ್) ಚಂದ್ರನನ್ನು ಒಂದು ಸುತ್ತು ಹಾಕಿ ಬರುವ ಸಾಹಸಕ್ಕೆ 'ನಾಸಾ' ಮುಂದಡಿ ಇಟ್ಟಿದೆ. ಈ ಯೋಜನೆಯ ಹೆಸರು 'ಆರ್ಟೆಮಿಸ್–2'. ಕೇವಲ ಬಾಹ್ಯಾಕಾಶ ನೌಕೆಯೊಂದೇ ನಭಕ್ಕೆ ಹಾರದೆ, ನಾಲ್ವರು ಗಗನಯಾನಿಗಳೂ ಬುಧವಾರ ಸಂಜೆ ಅಮೆರಿಕದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಚಂದ್ರನತ್ತ ತೆರಳಿದ್ದಾರೆ. ಮಾನವ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇದು ಸಾಧ್ಯವಾಗಿದೆ. 53 ವರ್ಷಗಳ ಬಳಿಕ ಚಂದ್ರನನ್ನು ಮನುಷ್ಯ ಮತ್ತೊಮ್ಮೆ ಹತ್ತಿರದಿಂದ ನೋಡಲಿದ್ದಾನೆ. 2028ರ ಹೊತ್ತಿಗೆ ಮತ್ತೊಮ್ಮೆ ಚಂದ್ರನಲ್ಲಿ ಇಳಿಯಲು ಇದು ಸಹಕಾರಿಯಾಗಲಿದೆ. ಜೊತೆಗೆ, ಮಂಗಳ ಗ್ರಹಕ್ಕೆ ತೆರಳುವ ಮನುಷ್ಯನ ಮಹದಾಕಾಂಕ್ಷೆಗೂ ಇದು ಮೆಟ್ಟಿಲಾಗಲಿದೆ.

ಚಂದ್ರನಾಚೆಗೂ ಮನುಷ್ಯನ ಹೆಜ್ಜೆ...



ಕ್ರೈಸ್‌ಗೆ ಅನುದಾನ: ₹735 ಕೋಟಿ ಕೊರತೆ

ಬೆಂಗಳೂರು: ವಸತಿಶಾಲೆಗಳ ನಿರ್ವಹಣೆ ಹಾಗೂ ದುರಸ್ತಿಯ ಅನುದಾನದಲ್ಲಿ ₹735 ಕೋಟಿ ಕೊರತೆ ಆಗಿದೆ ಎಂದು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ದೂರಿದೆ.

ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆಯ ಈ ಸಮಿತಿಯು ತನ್ನ ವರದಿಯನ್ನು ಈಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಿದೆ.

2025–26 ಸಾಲಿಗೆ ₹2,361 ಕೋಟಿ ಅನುದಾನದ ಅಗತ್ಯವಿದ್ದು, ಒಟ್ಟು ₹1,635 ಕೋಟಿ ಹಂಚಿಕೆ ಆಗಿದೆ. ವಸತಿಶಾಲೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ₹121 ಕೋಟಿ ಒದಗಿಸುವಂತೆ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದ ಪ್ರಸ್ತಾವ ತಿರಸ್ಕೃತಗೊಂಡಿದೆ ಎಂದು ಕ್ರೈಸ್, ಸಮಿತಿಯ ಮುಂದೆ ಅಳಲು ತೋಡಿಕೊಂಡಿದೆ.

ಪ್ರಸ್ತಾವವನ್ನು ತಿರಸ್ಕರಿಸಿರುವ ಬಗ್ಗೆ ಸಮಿತಿಯು ಆಕ್ಷೇಪ ವ್ಯಕ್ತಪಡಿಸಿದೆ. ವಸತಿಶಾಲಾ ಕಟ್ಟಡಗಳ ದುರಸ್ತಿ ಕಾಮಗಾರಿಗೆ ಹೆಚ್ಚಿನ ಒತ್ತು ನೀಡದಿದ್ದರೆ ಅಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ತೊಂದರೆಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ರಾಜ್ಯದ 153 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ' ಪ್ರದಾನ

ಅಪರಾಧ ತಡೆ: ತಂತ್ರಜ್ಞಾನದ ಬಳಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧ ಪ್ರಕರಣಗಳೂ ಸೇರಿದಂತೆ ವಿವಿಧ ಮಾದರಿಯ ಪ್ರಕರಣಗಳನ್ನು ತಡೆಗಟ್ಟಲು ತಂತ್ರಜ್ಞಾನದಲ್ಲಿ ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ಸೂಚಿಸಿದರು.

ಕೋರಮಂಗಲದ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆದ 'ಪೊಲೀಸ್ ಧ್ವಜ ದಿನಾಚರಣೆ'ಯಲ್ಲಿ ರಾಜ್ಯದ 153 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ 2025ನೇ ಸಾಲಿನ 'ಮುಖ್ಯಮಂತ್ರಿ ಪದಕ' ಪ್ರದಾನ ಮಾಡಿ ಅವರು ಮಾತನಾಡಿದರು.

'ಸೈಬರ್ ಸೇರಿ ಕೆಲವು ಅಪರಾಧ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ. ಅವುಗಳನ್ನು ತಡೆಗಟ್ಟಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚಿಸಿದರು.

'ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರವಾದ ಸಂಬಂಧ ಇರುತ್ತದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯನಿರ್ವಹಿಸಿದರೆ, ಆರ್ಥಿಕತೆಗೂ ದೊಡ್ಡ ಕೊಡುಗೆ ಆಗಲಿದೆ' ಎಂದರು.

'ಠಾಣಾ ವ್ಯಾಪ್ತಿಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ. ಆರೋಪಿಗಳಿಗೆ ನೆರವು ನೀಡುವ ಪೊಲೀಸರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, 'ರಾಜ್ಯದಲ್ಲಿ ಡ್ರಗ್ಸ್ ಜಾಲವನ್ನು ಸಂಪೂರ್ಣ ಮಟ್ಟಹಾಕಲು ರಾಜ್ಯ ಸರ್ಕಾರವು ಮುಂದಾಗಿದೆ. ಸೈಬರ್ ಅಪರಾಧಗಳ ನಿಯಂತ್ರಣಕ್ಕೂ ಕ್ರಮ ತೆಗೆದುಕೊಳ್ಳಲಾಗಿದೆ. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ರಾಜ್ಯದಲ್ಲಿ ಸೈಬರ್ ಕಮಾಂಡ್ ಘಟಕ ಸ್ಥಾಪಿಸಿ, ಡಿಜಿ ಶ್ರೇಣಿಯ ಅಧಿಕಾರಿಯನ್ನು ನೇಮಿಸಲಾಗಿದೆ' ಎಂದು ಹೇಳಿದರು.

ಬಳ್ಳಾರಿ ಎಸ್‌ಪಿ ಸುಮನ್ ಡಿ. ಪನ್ನೇಕರ್, ಉಡುಪಿ ಎಸ್‌ಪಿ ಕೆ.ಅರುಣ್, ಯಾದಗಿರಿ ಎಸ್‌ಪಿ ಪೃಥ್ವಿಕ್ ಶಂಕರ್, ಬೆಂಗಳೂರು ದಕ್ಷಿಣ ಸಂಚಾರ ವಿಭಾಗದ ಡಿಸಿಪಿ ಗೋಪಾಲ ಎಂ. ಬ್ಯಾಕೋಡ, ಹಾಸನ ಜಿಲ್ಲೆಯ ಹೆಚ್ಚುವರಿ ಎಸ್‌ಪಿ ಎಂ.ಕೆ.ತಮ್ಮಯ್ಯ, ಶಿವಮೊಗ್ಗದ ಹೆಚ್ಚುವರಿ ಎಸ್‌ಪಿ ಎಸ್.ರಮೇಶ್ ಕುಮಾರ್, ರಾಜ್ಯ ಗುಪ್ತದಳ ವಿಭಾಗದ ಡಿವೈಎಸ್‌ಪಿ ಆರ್.ವಾಸು, ಬೆಳಗಾವಿ ನಗರ ಮಾರುಕಟ್ಟೆ ಉಪ ವಿಭಾಗದ ಎಸಿಪಿ ಸಂತೋಷ್ ದಯಾನಂದ ಸತ್ಯನಾಯಕ್ ಸೇರಿದಂತೆ 153 ಮಂದಿಗೆ ಪದಕ ಪ್ರದಾನ ಮಾಡಲಾಯಿತು.

> ಮಹಿಳೆ, ಮಕ್ಕಳು ಹಾಗೂ ಅಸಹಾಯಕರ ರಕ್ಷಣೆಗೆ ರಾಜ್ಯ ಸರ್ಕಾರವು ಮೊದಲ ಆದ್ಯತೆ ನೀಡುತ್ತಿದೆ. ಪೊಲೀಸರೂ ಅದನ್ನು ಗಮನದಲ್ಲಿಟ್ಟು ಕೆಲಸ ಮಾಡಬೇಕು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನೇಮಕಾತಿಗೆ ಕ್ರಮ

8 ಸಾವಿರ ಕಾನ್‌ಸ್ಟೆಬಲ್ ಹಾಗೂ 600 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇಲಾಖೆಯಲ್ಲಿ ಮತ್ತಷ್ಟು ಸುಧಾರಣೆ ತರಲಾಗುವುದು ಎಂದು ಪರಮೇಶ್ವರ ತಿಳಿಸಿದರು.



ಬೆಂಗಳೂರಿನ ಕೋರಮಂಗಲದ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಗುರುವಾರ ನಡೆದ 'ಪೊಲೀಸ್ ಧ್ವಜ ದಿನಾಚರಣೆ'ಯಲ್ಲಿ ಮುಖ್ಯಮಂತ್ರಿ ಪದಕ ಸ್ವೀಕರಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ. ಸಿದ್ದರಾಮಯ್ಯ, ಜಿ.ಪರಮೇಶ್ವರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಪಾಲ್ಗೊಂಡಿದ್ದರು —ಚಿತ್ರ: ರಂಜು ಪಿ.

ಸುದ್ದಿ 2 ನಿಮಿಷ

ವಿನಯ ವಿರುದ್ಧದ ಪ್ರಕರಣ: ತೀರ್ಪು ಕಾಯ್ದಿರಿಸಿದ ಕೋರ್ಟ್

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯ ಗುರುವಾರ ಪೂರ್ಣಗೊಳಿಸಿತು.

ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಆರೋಪಿಯಾಗಿರುವ ಈ ಪ್ರಕರಣದ ವಿಚಾರಣೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮುಕ್ತಾಯಗೊಳಿಸಿದ್ದು, ತೀರ್ಪನ್ನು ಇದೇ 9ಕ್ಕೆ ಪ್ರಕಟಿಸುವುದಾಗಿ ತಿಳಿಸಿದರು.



ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೇಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಪುಸ್ತಕ ಬಹುಮಾನಕ್ಕೆ ಕೃತಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪುಸ್ತಕ ಬಹುಮಾನಕ್ಕೆ 2025ರಲ್ಲಿ ಪ್ರಕಟವಾದ ವಿವಿಧ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಿದೆ.

ಕಾವ್ಯ ಹಸ್ತಪ್ರತಿ, ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಾನವಿಕ ವಿಷಯಗಳು, ಸಂಶೋಧನೆ, ಅನುವಾದ, ಸಂಕೀರ್ಣ, ಗಜಲ್ ಕಾವ್ಯ ಸೇರಿದಂತೆ 23 ವಿಭಾಗಗಳಲ್ಲಿ ಬಹುಮಾನಕ್ಕೆ ಕೃತಿಗಳನ್ನು ಕಳುಹಿಸಬಹುದು.

ಕೃತಿಗಳು 2025ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರಬೇಕು. ಮರುಮುದ್ರಣದ ಪುಸ್ತಕಗಳು, ಪಿಎಚ್‌.ಡಿ. ಪದವಿಗೆ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ. ಕೃತಿಯ ನಾಲ್ಕು ಪ್ರತಿಗಳನ್ನು ಜೂನ್ 30ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, 560002 ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ಭೇಟಿ ನೀಡಿ ತಲುಪಿಸಬೇಕು ಎಂದು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ತಿಳಿಸಿದ್ದಾರೆ.

ವಿವರಕ್ಕೆ: sahithyaacademy.karnataka.gov.in

ಎಐಸಿಸಿ: ಸಚಿವ ಜಮೀರ್‌ಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನ ಸದಸ್ಯರನ್ನಾಗಿ ನೇಮಿಸಲಾಗಿದೆ.



ಜಮೀರ್ ಅಹಮದ್

ಕಾಂಗ್ರೆಸ್ ನಾಯಕರಾದ ತಾರೀಖ್ ಅನ್ವರ್, ಸಲ್ಮಾನ್ ಖುರ್ಶಿದ್, ಅಭಿಷೇಕ್ ಮನು ಸಿಂಗ್ವಿ, ಇಮ್ರಾನ್ ಪ್ರತಾಪ್ ಗಡಿ ಅವರೂ ಈ ಪರಿಷತ್‌ನಲ್ಲಿ ಇದ್ದಾರೆ.

ಪ್ರಸನ್ನ ಕೃಷಿ ಮಾರುಕಟ್ಟೆ ಇಲಾಖೆ ನಿರ್ದೇಶಕ

ಬೆಂಗಳೂರು: ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಎಚ್‌. ಪ್ರಸನ್ನ ಅವರನ್ನು ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಈ ಹುದ್ದೆಯನ್ನು ಶಿವಾನಂದ ಕಾಪಸಿ ಹೆಚ್ಚುವರಿಯಾಗಿ ನಿಭಾಯಿಸುತ್ತಿದ್ದರು. ಪ್ರಸನ್ನ ಅವರಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆಯನ್ನೂ ನೀಡಲಾಗಿದೆ.





ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

No: EE/ UTP /RNR/Seepage-Works/SD-3&5/ PB-2/2025-26/3231 Date: 31-03-2026.

ಅಲ್ಪಾವಧಿಟೆಂಡರ್ ಪ್ರಕಟಣೆ ಕರೆ-2 ದ್ವಿ – ಲಕೋಟೆ ಪದ್ಧತಿ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರಕಾಲುವೆ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ರಡಿ 03 ಕಾಮಗಾರಿಗೆ ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯಗಳ ಟೆಂಡರ್ ಮೊತ್ತ ರೂ.494.75 ಲಕ್ಷಗಳಿಂದ ರೂ:497.95 ಲಕ್ಷಗಳ ವರೆಗೆ (GST ಸೇರಿ) ಇರುತ್ತದೆ. ಮತ್ತು ಇ.ಎಂ.ಡಿ ಮೊತ್ತವು ರೂ:6.29 ಲಕ್ಷಗಳಿಂದ ರೂ:6.33 ಲಕ್ಷಗಳವರೆಗೆ ಇರುತ್ತದೆ.ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 02–04–2026 ರಿಂದ 10–04–2026ರ ಸಂಜೆ 5.00 ರವರೆಗೆ (2) ಪ್ರೀ–ಬಿಡ್ ಮೀಟಿಂಗ್ ನಡೆಸುವ ದಿನಾಂಕ: 07–04–2026ಬೆಳಿಗ್ಗೆ 11.30 ಕ್ಕೆ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಕಛೇರಿಯಲ್ಲಿ(3) ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ: 09–04–2026 ಸಂಜೆ 4.00 ರವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 10–04–20263 ರ ಸಂಜೆ5.00 ರ ವರೆಗೆ (5)ದಿನಾಂಕ 13–04–2026ರಂದು ಸಂಜೆ5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ.(08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕಇಂಜಿನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

22

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.

GM/AM(C)/Sug/2026-27 Date:02.04.2026
Telephone:08232-224036

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಎಸ್.30 ಸಕ್ಕರೆಯನ್ನು ಮಾರಾಟ ಮಾಡಲು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ: 01. ಸಾಮಗ್ರಿ ವಿವರ : ಸಕ್ಕರೆ ಎಸ್–30 ಉತ್ಪಾದನೆ 2025–26 ನೇ ಸಾಲು. ಮಾರಾಟದ ಪ್ರಮಾಣ : 450.00 ಕ್ವಿಂಟಾಲ್. ಇ.ಎಂ.ಡಿ ಹಣ (ಪ್ರತಿ ಮೆ.ಟನ್ ಹಾಗೂ ಕ್ವಿಂಟಾಲಿಗೆ) : ರೂ.50/–. ಟೆಂಡರ್ ಫೀ. : ಇ– ಪೋರ್ಟ್‌ಲ್ ನಿಯಾಮಾವಳಿ.

ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯಕ್ಕೆ ಭೇಟಿ ನೀಡಿ, ಸಕ್ಕರೆ ಗೋದಾಮಿಗೆ ಭೇಟಿ ನೀಡಿ ದಾಸ್ತಾನಿನ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು (https://Kppp.Karnataka.gov.in) ತುಂಬುವುದು. ಇ– ಪೋರ್ಟ್‌ಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿನಾಂಕ : 02.04.2026 ಮತ್ತು ಕೊನೆಯ ದಿನಾಂಕ:10.04.2026 ರ ಸಂಜೆ 05.00 ಗಂಟೆ ಆಗಿರುತ್ತದೆ. (1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿನಾಂಕ: 13.04.2026 ಸಮಯ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಾತ್ರ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9964390489/9845937173/7353328103 ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರವರ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿನಾಂಕ:02.04.2026. **ಸಹಿ/–ಪ್ರಧಾನ ವ್ಯವಸ್ಥಾಪಕರು.**

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/009/2026–27

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಕಾಇಂ:ಲೋಇವಿ:ತುಮ.ಸಇಂ–2: ಟೆಂಡರ್ 64:2025–26, ದಿನಾಂಕ: 31–03–2026

ಟೆಂಡರ್ ಪ್ರಕಟಣೆ ಸಂ. 64/2025–26 ದಿನಾಂಕ 31–03–2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:64/2025–26 ದಿನಾಂಕ 31–03–2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054–04–337–0–01–154 ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಅಡಿಯಲ್ಲಿ ಲೆಕ್ಕ ಶೀರ್ಷಿಕೆ 01 ಕಾಮಗಾರಿಗೆ ಹಾಗೂ 5054–03–337–0–17–154 ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ** ಅಡಿಯಲ್ಲಿ **02 ಕಾಮಗಾರಿ**ಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 159.69 ಲಕ್ಷಗಳು** ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 79.84 ಲಕ್ಷಗಳು** ಇ.ಎಂ.ಡಿ ಗರಿಷ್ಠ ಮೊತ್ತ **ರೂ. 2,39,546/–** ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ ರೂ. **1,59,683/–**, ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 06 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ **ಕೊನೆ ದಿನಾಂಕ ಮತ್ತು ವೇಳೆ: 13–04–2026 ರ 17–30 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 31–03–2026 ರಿಂದ 15–04–2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು **ಕೊನೆಯ ದಿನಾಂಕ ಮತ್ತು ವೇಳೆ: 15–04–2026 ರ 16–00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 16–04–2026 ರ 16–30 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 17–04–2026 ರ 17–00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-03/26-27/Oysters

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಯುಪಿ(1)C-65/2025-26 ದಿನಾಂಕ: 24.03.2026

ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ **Consumables** ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ. 30.04.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in**ನ್ನು ಸಂಪರ್ಕಿಸಲು ಕೋರಿದೆ.

Tender number: DHFWS/2026-27/IND2390

ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/13/26-27 dt. 02.04.2026

ದಿ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್

ಅರಣ್ಯ ವಿಭಾಗ, ಪೇಪರ್ ಟೌನ್ ಭದ್ರಾವತಿ–577302–ಕರ್ನಾಟಕ
CIN L99999KA 1936SGC000173 (03.06.2014)
Ph: +91-8282-270094/- Fax: +91-8282-270937
Email: dirforestsmpm@gmail.com

ಸಂಖ್ಯೆ:ಎಂಪಿಎಂ/ಎಫ್‌ಎಫ್‌ಆರ್/ಡಿಎಫ್/ಟಿಎ/2025–26/015–ಕರೆ–2
ದಿನಾಂಕ: 27.03.2026

ಸಂಕ್ಷಿಪ್ತ ಇ–ಟೆಂಡರ್ ಅಹ್ವಾನ ಪ್ರಕಟಣೆ

ಇ–ಟೆಂಡರ್ ನಂ.: MPM/FFR/ DF/TA/25-26/015-CALL-2 Dt: 23.02.2026 **ಕಾಮಗಾರಿ ವಿವರ:** 2026ರ ಮರುನೆಡುತೋಪು ನಿರ್ಮಾಣ & 2025 & 2024ರ ನಿರ್ವಹಣಾ ಕಾಮಗಾರಿ **ಟೆಂಡರ್ ಸಲ್ಲಿಸಲು ಕೊನೆಯ ದಿ:** 13.04.2026 at 5.00 p.m **ಟೆಂಡರ್ ತೆರೆಯುವ ದಿ:** 16.04.2026 at 11.00 a.m

ಎಂ.ಪಿ.ಎಂ ನ ಅರಣ್ಯದಲ್ಲಿ 2026ರ ಮರುನೆಡುತೋಪು ನಿರ್ಮಾಣ ಮತ್ತು 2025 & 2024ರ ನಿರ್ವಹಣಾ ಕಾಮಗಾರಿಯ ಟೆಂಡರ್‌ಗಳನ್ನು, ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಸಲ್ಲಿಸುವುದು. ಟೆಂಡರ್ ದಸ್ತಾವೇಜು ದರ ಇ–ಪೋರ್ಟಲ್ ನಿಯಮಗಳ ಅನ್ವಯ ಟೆಂಡರ್ ದಸ್ತಾವೇಜುಗಳನ್ನು ದಿ:27.03.2026ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್/ಎಂ.ಪಿ.ಎಂ ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಇ ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸದಿರುವ ಟೆಂಡರ್‌ದಾರರು ನೊಂದಣಿ ಮಾಡಿಸಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ಸದರಿ ಟೆಂಡರ್‌ಗ ಯಾವುದೇ ಬದಲಾವಣೆಗಳು/ತಿದ್ದುಪಡಿಗಳಿದ್ದಲ್ಲಿ ಅದನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಎಂ.ಪಿ.ಎಂ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ನಮ್ಮ www.mpm. karnataka.gov.in

ಸಹಿ/– ನಿರ್ದೇಶಕರು(ಅರಣ್ಯ) ಪ್ರಭಾರ.

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/26–27/06/04/16

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(Reproduced masthead:) रजिस्टी सं. डी.एल्. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 16022026-270183
CG-DL-E- 16022026-270183
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. 759] नई दिल्ली, सोमवार, फरवरी 16, 2026 / माघ 27, 1947
No.759] NEW DELHI, MONDAY, FEBRUARY 16, 2026/MAGHA 27, 1947

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ
ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಕೆ.ಬಿ.ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ (ರಾಷ್ಟ್ರೀಯ ಹೆದ್ದಾರಿ 150ಎ)
ತುಮಕೂರು ಜಿಲ್ಲೆ, ತುಮಕೂರು.

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ. 797(ಇ), ದಿನಾಂಕ: 16.02.2026 – ಅಧಿಸೂಚನೆ ಸಂಖ್ಯೆ : **ಎಸ್.ಓ. ನಂ. 1435(ಇ) ದಿನಾಂಕ: 26.03.2025**ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ಮಂಡ್ಯ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎ ರಲ್ಲಿನ Km. Design Ch. 485+240 Km (Existing Km 494.000) to Design Ch. 523+393 Km (Existing km 533.152) & From Design Ch. 530+393 (Existing Km 540.175) to Design Ch.534+476 (Existing Km 544.200** (ಕೆ.ಬಿ. ಕ್ರಾಸ್ ನಿಂದ **ಚುಂಚನಹಳ್ಳಿ ಸೆಕ್ಷನ್‌ವರೆಗೆ) ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ** ಮಾಡುವ ಸಲುವಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ದಿ ಟೈಮ್ಸ್ ಆಫ್ ಇಂಡಿಯಾ" ದಿನಾಂಕ : 09.04.2025 ಮತ್ತು "ಪ್ರಜಾವಾಣಿ" ದಿನಪತ್ರಿಕೆಗಳಲ್ಲಿ ದಿನಾಂಕ : 09.04.2025** ರ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ.

ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1. 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮಗಳ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ನಾಗಮಂಗಲ ತಾಲ್ಲೂಕು ತಾವರೇಕೆರೆ, ಕರಿಜೀರನಹಳ್ಳಿ, ಖಾರಬೈಲು, ನೆಲ್ಲಿಗೆರೆ	**17-04-2026** ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ	ಗ್ರಾಮ ಪಂಚಾಯಿತಿ ಕಾರ್ಯಾಲಯ, ನೆಲ್ಲಿಗೆರೆ, ಬೆಳ್ಳೂರು ಹೋಬಳಿ, ನಾಗಮಂಗಲ ತಾ., ಮಂಡ್ಯ ಜಿಲ್ಲೆ.

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿ ಘಟಕ, ತುಮಕೂರು
ಇಂಪನಾ ಆರ್ಕೇಡ್, 8ನೇ ಕ್ರಾಸ್,
ಉಪ್ಪಾರಹಳ್ಳಿ ಮೈನ್ ರೋಡ್, ತುಮಕೂರು – 572102.

ಷೆಡ್ಯೂಲ್

ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎರಲ್ಲಿ stretch of land from Km. Design Ch. 485+240 Km (Existing Km 494.000) to Design Ch. 523+393 Km (Existing km 533.152) & From Design Ch. 530+393 (Existing Km 540.175) to Design Ch.534+476 (Existing Km 544.200) (ಕೆ.ಬಿ. ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್) ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ **ಜಿಲ್ಲೆಯ ಹೆಸರು : ಮಂಡ್ಯ**

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು : ನಾಗಮಂಗಲ					
ಗ್ರಾಮದ ಹೆಸರು : ತಾವರೇಕೆರೆ					
1	17/3	ಖಾಸಗಿ	ಖುಷ್ಕಿ	0.145	ಕೆ.ಆನಂದ ಬಿನ್ ಅರಸಯ್ಯ (17/4) ಹುಚ್ಚಮ್ಮ ಕೋಂ ಲೇಟ್ ನರಸೇಗೌಡ, ಚಂದ್ರೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ಕೃಷ್ಣೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ರಾಧಾ ಕೆ ಎನ್ ಬಿನ್ ಲೇಟ್ ನರಸೇಗೌಡ, ರಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಉಮೇಶ್ ಕೆ ಎನ್ . ನರಸೇಗೌಡ, ಹುಚ್ಚಮ್ಮ ಕೋಂ ಲೇಟ್ ನರಸೇಗೌಡ, ಚಂದ್ರೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ಕೃಷ್ಣೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ರಾಧಾ ಕೆ ಎನ್ ಬಿನ್ ಲೇಟ್ ನರಸೇಗೌಡ, ರಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಉಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಎಲ್ ಭಾರೇಗೌಡ, ಎಲ್. ಲೇಟ್ ನರಸೇಗೌಡ, ಚಂದ್ರೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ಕೃಷ್ಣೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ರಾಧಾ ಕೆ ಎನ್ ಬಿನ್ ಲೇಟ್ ನರಸೇಗೌಡ, ರಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಉಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಭಾಗ್ಯ ಕೆ ಎನ್ ಬಿನ್ ಲೇಟ್ ನರಸೇಗೌಡ, ಜಯಮ್ಮ ಕೋಂ ಜವರಯ್ಯ, ರಾಮಕೃಷ್ಣ ಬಿನ್ ಲೇಟ್ ನರಸಯ್ಯ, ಸಣ್ಣಮ್ಮ ಕೋಂ ಲೇಟ್ ಉಗ್ರಯ್ಯ, ಹುಚ್ಚಮ್ಮ ಕೋಂ ಲೇಟ್ ನರಸೇಗೌಡ, ಕೆ ಎನ್ ಚಂದ್ರೇಗೌಡ, ಕೆ ಎನ್ ಚಂದ್ರೇಗೌಡ, ಕೃಷ್ಣೇಗೌಡ ಕೆ ಎನ್ ಬಿನ್ ಲೇಟ್ ನರಸೇಗೌಡ, ರಾಧಾ ಕೆ ಎನ್ ಬಿನ್ ಲೇಟ್ ನರಸೇಗೌಡ, ರಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಉಮೇಶ್ ಕೆ ಎನ್ ಬಿನ್ ಲೇಟ್ ನರಸೇಗೌಡ, ಭಾಗ್ಯ ಕೆ ಎನ್ ಬಿನ್ ಲೇಟ್ ನರಸೇಗೌಡ (17)
2	19	ಖಾಸಗಿ	ಖುಷ್ಕಿ	0.265	ಎಂ.ಪ್ರಿಯದರ್ಶಿನಿ ಬಿನ್ ಎಚ್.ಬಿ ಗಂಗಾಧರಗೌಡ, ಕೆ.ರಾಮಯ್ಯ ಬಿನ್ ವೈರಮುಡಯ್ಯ, ಹಾಸನ–ಬೆಂಗಳೂರು ರೈಲ್ವೆ ಬ್ರಾಡ್ ಗೇಜ್‌ಗೆ ಭೂಸ್ವಾಧೀನ, ಜಯಮ್ಮ ಕೋಂ ಲೇಟ್ ಗವಿರಂಗಯ್ಯ, ಕೃಷ್ಣಮೂರ್ತಿ ಬಿನ್ ಲೇಟ್ ಕಾಳಯ್ಯ, ಸಿದ್ದರಾಜು ಬಿನ್ ಲೇಟ್ ಕಾಳಯ್ಯ
ಗ್ರಾಮದ ಹೆಸರು : ಕರಿಜೀರನಹಳ್ಳಿ					
3	35/2	ಖಾಸಗಿ	ಖುಷ್ಕಿ	0.015	ತಿಮ್ಮೇಗೌಡ ಬಿನ್ ದಾಸೇಗೌಡ, ವೈ.ಎಚ್.ಕೃಷ್ಣಪ್ಪ ಬಿನ್ ಹನುಮತೇಗೌಡ ಉರ್ಫ್ ಕರಿಯಪ್ಪ
4	35/3	ಖಾಸಗಿ	ಖುಷ್ಕಿ	0.08	ನಾಗರಾಜು ಬಿನ್ ನಾರಾಯಣಶೆಟ್ಟಿ
5	35/4	ಖಾಸಗಿ	ಖುಷ್ಕಿ	0.015	ಕಲ್ಯಾಣಿ ಬಿನ್ ನಿಂಗ
ಗ್ರಾಮದ ಹೆಸರು : ಖಾರಬೈಲು					
6	31/2	ಖಾಸಗಿ	ಖುಷ್ಕಿ	0.035	ಎನ್.ಗಣೇಶ್ ಬಿನ್ ನಂಜಪ್ಪಗೌಡ
7	31/3	ಖಾಸಗಿ	ಖುಷ್ಕಿ	0.0925	ಲಕ್ಷ್ಮಮ್ಮ ಕೋಂ ಕೋ ಗಂಗಪ್ಪ
8	31/5	ಖಾಸಗಿ	ಖುಷ್ಕಿ	0.245	ಜಯಮ್ಮ ಕೋಂ ಲೇಟ್ ಭದ್ರದಾಸಪ್ಪ, ರಾಷ್ಟ್ರೀಯ ಹೆದ್ದಾರಿ 48ರಲ್ಲಿ ವೀರ ವೈಷ್ಣವ ನದಿ ಸೇತುವೆ ನಿರ್ಮಾಣಕ್ಕೆ ಭೂಸ್ವಾಧೀನ
9	67/11	ಖಾಸಗಿ	ಖುಷ್ಕಿ	0.035	ಜಯಮ್ಮ ಕೋಂ ಹಾಲಪ್ಪಗೌಡ
10	67/5ಎ	ಖಾಸಗಿ	ಖುಷ್ಕಿ	0.015	ದೊಡ್ಡಮ್ಮ ಕೋಂ ಎನ್ ಜಿ ರಾಮಣ್ಣ, ಮಾಳಮ್ಮ ಕೋಂ ಶಿವಯ್ಯ, ಜಯಮ್ಮ ಕೋಂ ಗಂಗಪ್ಪ, ಬೆಟ್ಟಲಿಂಗೇಗೌಡ ಬಿನ್ ಲೇಟ್ ಗಂಗಣ್ಣ, ಜಯಮ್ಮ ಕೋಂ ಸೋಮಶೇಖರ್, ನಾಗರಾಜು ಬಿನ್ ಗಂಗಪ್ಪ, ರಾಮಕೃಷ್ಣ ಎನ್ ಜಿ ಬಿನ್ ಲೇಟ್ ಗಾಣಗಣ್ಣ, ರಾಮನೇಗೌಡ ಬಿನ್ ಲೇಟ್ ಗಾನಗಣ್ಣ, ಮಂಜುಳಾ ಕೋಂ ಲಕ್ಷ್ಮಣಗೌಡ, ಉಷಾ
11	67/6	ಖಾಸಗಿ	ಖುಷ್ಕಿ	0.005	ಜಯಮ್ಮ ಕೋಂ ಗಂಗಪ್ಪ
12	67/7	ಖಾಸಗಿ	ಖುಷ್ಕಿ	0.0225	ಎಸ್.ಕೆ ಪ್ರವೀಣಕುಮಾರ್ ಬಿನ್ ಲೇಟ್ ಕಾಳೇಗೌಡ ಉರ್ಫ್ ಕಾಳಯ್ಯ, ಕುಮಾರ್. ಕೆ ಬಿನ್ ಲೇಟ್ ಕಾಳೇಗೌಡ ಉರ್ಫ್ ಕಾಳಯ್ಯ
ಗ್ರಾಮದ ಹೆಸರು : ನೆಲ್ಲಿಗೆರೆ					
13	18/1	ಖಾಸಗಿ	ಖುಷ್ಕಿ	0.185	ಕೆಂಪಮ್ಮ ಕೋಂ ನಿಂಗೇಗೌಡ
14	19/1	ಖಾಸಗಿ	ಖುಷ್ಕಿ	0.0175	ಧರ್ಮಲಿಂಗೇಗೌಡ ಬಿನ್ ನಿಂಗೇಗೌಡ
15	19/2	ಖಾಸಗಿ	ಖುಷ್ಕಿ	0.05	ಪಾರ್ವತಮ್ಮ 19/2
16	20	ಖಾಸಗಿ	ಖುಷ್ಕಿ	0.1214	ಪುಟ್ಟಮ್ಮ ಕೋಂ ಎನ್.ಗಂಗಪ್ಪ
17	23/1	ಖಾಸಗಿ	ಖುಷ್ಕಿ	0.105	ಜಯಲಕ್ಷ್ಮಿ ಕೋಂ ಲೇಟ್ ಎನ್ ಜಿ ಸುರೇಶ
18	25/3	ಖಾಸಗಿ	ಖುಷ್ಕಿ	0.15	ಬಿ.ಎಸ್ ಗಿರೀಶ ಬಿನ್ ಶ್ರೀನಿವಾಸ
19	26/1	ಖಾಸಗಿ	ಖುಷ್ಕಿ	0.08	ಕುಮಾರ ಬಿನ್ ಶಿವಯ್ಯ
20	28/14	ಖಾಸಗಿ	ಖುಷ್ಕಿ	0.03	ಲಕ್ಷ್ಮೀದೇವಿ ಕೋಂ ಲೇಟ್ ನರಸಿಂಹೇಗೌಡ
21	28/15	ಖಾಸಗಿ	ಖುಷ್ಕಿ	0.0125	ಮರಿಯಮ್ಮ ಕೋಂ ರಾಮು
22	28/2	ಖಾಸಗಿ	ಖುಷ್ಕಿ	0.0475	ಆನಂದ ಬಿನ್ ಲೇಟ್ ಸಿಂಗ್ರಿಗೌಡ
23	30/1	ಖಾಸಗಿ	ಖುಷ್ಕಿ	0.1025	ಬಸವಲಿಂಗೇಗೌಡ ಉರ್ಫ್ ಕೃಷ್ಣೇಗೌಡ ಬಿನ್ ಮರಿಲಿಂಗೇಗೌಡ
24	31/1	ಖಾಸಗಿ	ಖುಷ್ಕಿ	0.005	ಗಂಗಪ್ಪಗೌಡ
25	31/10	ಖಾಸಗಿ	ಖುಷ್ಕಿ	0.02	ಉಷಾ ಕೋಂ ಲೇಟ್ ಎನ್.ಶ್ರೀನಿವಾಸ
26	31/19	ಖಾಸಗಿ	ಖುಷ್ಕಿ	0.0425	ಮೂಡ್ಲಿಗಿರಿಗೌಡ ಬಿನ್ ನರಸೇಗೌಡ
27	31/4	ಖಾಸಗಿ	ಖುಷ್ಕಿ	0.115	ಎನ್.ಬಿ ಕೃಷ್ಣೇಗೌಡ ಬಿನ್ ಲೇಟ್ ಬ್ಯಾತೇಗೌಡ
28	31/5	ಖಾಸಗಿ	ಖುಷ್ಕಿ	0.03	ಪುಟ್ಟತಿಮ್ಮಮ್ಮ ಕೊಂ ತಾಯೆ ತಿಮ್ಮಮ್ಮ
29	31/8	ಖಾಸಗಿ	ಖುಷ್ಕಿ	0.03	ವಿ.ವಿ ರಾಮು ಬಿನ್ ಲೇಟ್ ವೆಂಕಟೇಶ, ಶ್ರೀನಿವಾಸ. ಹೆಚ್ ಬಿನ್ ಲೇಟ್ ಹನುಮಂತಪ್ಪ, ಎನ್.ಗಂಗಮ್ಮ ಕೋಂ ಲೇಟ್ ಟಿ.ನರಸಿಂಹಯ್ಯ
30	31/9	ಖಾಸಗಿ	ಖುಷ್ಕಿ	0.015	ಎನ್.ಕೆ ಪ್ರದೀಪ್ ಬಿನ್ ಲೇಟ್ ಎನ್ ಬಿ ಕೃಷ್ಣೇಗೌಡ
31	4/16	ಖಾಸಗಿ	ಖುಷ್ಕಿ	0.06	ಲಕ್ಷ್ಮೀದೇವಿ ಕೋಂ ಲೇಟ್ ನರಸಿಂಹೇಗೌಡ
32	4/2	ಖಾಸಗಿ	ಖುಷ್ಕಿ	0.005	ದೊರೆಸ್ವಾಮಿ ಬಿನ್ ಮುದ್ದೇಗೌಡ
33	40/4	ಖಾಸಗಿ	ಖುಷ್ಕಿ	0.05	ಮೀನಾಕ್ಷಿ ಕೋಂ ವಿ.ಕೆ ನಾಗೇಶ್, ವಸಂತಮ್ಮ ಕೋಂ ಹೊಂಬೇಗೌಡ
34	5/2	ಖಾಸಗಿ	ಖುಷ್ಕಿ	0.06	ಜಯಲಕ್ಷ್ಮಿ ಕೋಂ ಸೋಮಶೇಖರ
35	5/3	ಖಾಸಗಿ	ಖುಷ್ಕಿ	0.0025	ದೊರೆಸ್ವಾಮಿ ಬಿನ್ ಮುದ್ದೇಗೌಡ
36	5/4	ಖಾಸಗಿ	ಖುಷ್ಕಿ	0.0625	ಎನ್.ಜಯರಾಮೇಗೌಡ, ನಿಂಗಮ್ಮ, ಲಕ್ಷ್ಮೀಪ್ರಸನ್ನ ಬಿನ್ ಲೇಟ್ ಲಕ್ಕಣ್ಣಗೌಡ
37	67	ಖಾಸಗಿ	ಖುಷ್ಕಿ	0.0375	ಎನ್.ನಂಜಪ್ಪ ಬಿನ್ ನಿಂಗೇಗೌಡ
38	69	ಖಾಸಗಿ	ಖುಷ್ಕಿ	0.045	ಚಲಮ್ಮ ಕೋಂ ಕರ್ಪಯ್ಯ
39	7/3	ಖಾಸಗಿ	ಖುಷ್ಕಿ	0.03	ಉಷಾ ಕೋಂ ಲೇಟ್ ಎನ್.ಶ್ರೀನಿವಾಸ, ಟಿ ರಾಮು ಬಿನ್ ತಿಮ್ಮೇಗೌಡ
40	7/4	ಖಾಸಗಿ	ಖುಷ್ಕಿ	0.0325	ಕೆಂಪಮ್ಮ ಕೋಂ ಎಂ ನಿಂಗೇಗೌಡ
41	8/10	ಖಾಸಗಿ	ಖುಷ್ಕಿ	0.01	ಎನ್.ಜಿ ತಮ್ಮಣ್ಣಗೌಡ, ಬಿನ್ ಎನ್.ಗಂಗಾಧರಗೌಡ
42	8/13	ಖಾಸಗಿ	ಖುಷ್ಕಿ	0.055	ಶಿವಪ್ಪ ಬಿನ್ ಲೇಟ್ ಎಲ್ ಬೋರೇಗೌಡ, ಎಸ್.ಲಕ್ಷ್ಮಿ ಕೋಂ ಶಿವಪ್ಪ
43	8/14	ಖಾಸಗಿ	ಖುಷ್ಕಿ	0.06	ಮಂಜಮ್ಮ ಕೋಂ ಎನ್.ರಾಮಲಿಂಗೇಗೌಡ
44	8/3	ಖಾಸಗಿ	ಖುಷ್ಕಿ	0.0075	ಎನ್.ರತ್ನಮ್ಮ ಕೋಂ ಜಿ.ಚಿಕ್ಕಣ್ಣ, ಮಂಜಪ್ಪ. ಎಂ ಬಿನ್ ಮುದ್ದೀರಯ್ಯ
45	8/6 ಬಿ	ಖಾಸಗಿ	ಖುಷ್ಕಿ	0.0575	ಸಣ್ಣಪ್ಪ ಬಿನ್ ಕರಿಯಪ್ಪ, ಜಯಮ್ಮ ಕೋಂ ದಾಸಪ್ಪ
46	8/9	ಖಾಸಗಿ	ಖುಷ್ಕಿ	0.025	ಮಾಯಮ್ಮ ಕೋಂ ತಿರುಮಲೇಗೌಡ
47	9/4ಎ1	ಖಾಸಗಿ	ಖುಷ್ಕಿ	0.0101	ಮಾಯಮ್ಮ ಕೋಂ ತಿರುಮಲೇಗೌಡ
48	9/7	ಖಾಸಗಿ	ಖುಷ್ಕಿ	0.0606	ಮಂಜುಳಾ ಕೋಂ ಲಕ್ಷ್ಮಣಗೌಡ
			ಒಟ್ಟು	2.7996	

[F. No. CNH/TA-3/AE-5/NH-150A/3(a)/2024-25/3D1]
ಶೇಖ್ ಅಮೀನ್‌ಖಾನ್, ನಿರ್ದೇಶಕರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ ಕೊಪ್ಪಳ

ಸಂ:ಜಿಪಂಕೊ/ಸಿಬ್ಬಂದಿ–2/ಸಿ.ಆರ್ /2025–26/29 ದಿನಾಂಕ: 02–04–2026

:: ಇ–ಟೆಂಡರ್ ಪ್ರಕಟಣೆ ::

ವಿಷಯ: 2026–27ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಕೊಪ್ಪಳ ಕಾರ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.

2026–27ನೇ ಸಾಲಿಗಾಗಿ ಜಿಲ್ಲಾ ಪಂಚಾಯತಿ ಕೊಪ್ಪಳ ಕಛೇರಿಗೆ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಲು ಇ-ಟೆಂಡರ್ ಕರೆಯಲಾಗಿದೆ. ಟೆಂಡರ್‌ದಾರರು ವಿವರಗಳನ್ನು https://kppp.karnataka.gov.in ನಲ್ಲಿ ಪಡೆದು ಅಪ್‌ಲೋಡ್ ಮಾಡಬಹುದಾಗಿದೆ.

ಟೆಂಡರ್ ಪ್ರಾಧಿಕಾರ ಹಾಗೂ ಪ್ರಕಟಣಾ ವಿವರ

1 ಟೆಂಡರ್ ಕರೆದ ಪ್ರಾಧಿಕಾರದ ಹೆಸರು ಮತ್ತು ವಿಳಾಸ: **ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಕೊಪ್ಪಳ** 2 ಟೆಂಡರ್ ಉದ್ದೇಶ: **ಹೊರಮೂಲ ಸಂಸ್ಥೆಯ ಮೂಲಕ ಮಾನವ ಸಂಪನ್ಮೂಲ ಸೇವೆ ಪಡೆಯಲು** 3 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **70.00 ಲಕ್ಷಗಳು** 4 ಇಎಂಡಿ ಮೊತ್ತ (ರೂ.ಗಳಲ್ಲಿ): **140000/–** 5 ಟೆಂಡರ್ ಸಲ್ಲಿಸಲು ಆರಂಭ ದಿನಾಂಕ : **02–04–2026** 6 ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: **18–04–2026** 7 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **20–04–2026** 8 ಟೆಂಡರ್ ತೆರೆಯುವ ಸ್ಥಳ: **ಜಿಲ್ಲಾ ಪಂಚಾಯತ್, ಕಾರ್ಯಾಲಯ ಕೊಪ್ಪಳ** 9 ಆರ್ಥಿಕ ಬಿಡ್ ತರೆಯುವ ದಿನಾಂಕ ಮತ್ತು ಸಮಯ: **ನಂತರ ತಿಳಿಸಲಾಗುವುದು**

ಸಹಿ/–ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.

ಡಿಐಪಿಆರ್/ಕೊಪ್ಪಳ/04/ಕೆಎಸ್‌ಎಂಸಿಎ/2026–27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮುಇಂವಿ/ಟಿಮತ್ತುಪಿ/ ಅಇಂ(ವಿ)–2/2026–27/19–31 ದಿನಾಂಕ:01.04.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:


ಕ್ರ. ಸಂ.	ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ
1	**ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3558** ಈ ಕೆಳಗಿನ ವಿದ್ಯುತ್ ಉಪಕೇಂದ್ರಗಳನ್ನು ಸಂಬಂಧಿತ ಪ್ರಸರಣ ಮಾರ್ಗಗಳ ನಿರ್ಮಾಣದೊಂದಿಗೆ (ಹಂತ–1), ಮಾರ್ಗದ ಗೋಪುರಗಳು ಮತ್ತು ಸ್ಟೇಷನ್ ಸ್ಟ್ರಕ್ಚರ್‌ಗಳ ವಿನ್ಯಾಸವನ್ನೊಳಗೊಂಡಂತೆ ಸ್ಥಾಪಿಸುವುದು: **ಅ) ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಕಲಬುರಗಿಯಲ್ಲಿ** 2x200ಎಂ.ವಿ.ಎ, 220/132ಕೆ.ವಿ ಮತ್ತು 1x20ಎಂ.ವಿ.ಎ, 132/11ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.985 ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು ಮತ್ತು ಫಿರೋಜಾಬಾದ್ (ಕಲಬುರಗಿ) ಉಪ ಕೇಂದ್ರದಲ್ಲಿ 2 ಸಂಖ್ಯೆ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು. **ಆ) ಕಲಬುರಗಿ ತಾಲ್ಲೂಕು ಮತ್ತು ಜಿಲ್ಲೆ, ನಡಿಸಿನ್ನೂರು ಗ್ರಾಮ (ಉಪಕೇಂದ್ರ–1) ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ** 2x20ಎಂ.ವಿ.ಎ, 132/33ಕೆ.ವಿ. ಮತ್ತು 2x20ಎಂ.ವಿ.ಎ, 132/11ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.811 ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು. **ಇ) ಕಲಬುರಗಿ ತಾಲ್ಲೂಕು ಮತ್ತು ಜಿಲ್ಲೆ, ಕೀರಣಗಿ ಗ್ರಾಮ (ಉಪಕೇಂದ್ರ–2) ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್‌ನಲ್ಲಿ** 2x20ಎಂ.ವಿ.ಎ, 132/33ಕೆ.ವಿ. ಮತ್ತು 2x20ಎಂ.ವಿ.ಎ, 132/11ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.114ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **07.04.2026 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿಗೆ **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್)
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 9ನೇ ಮಹಡಿ,
ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಆಸೆ ಮನುಷ್ಯ ಜೀವನದ ಲಂಗರು ಇದ್ದಂತೆ. ಅದರ ಸಹಾಯವಿಲ್ಲದೆ ಮನುಷ್ಯ ಭವಸಾಗರವನ್ನು ದಾಟಲಾರ.

–ಲಿಯೊ ಟಾಲ್‌ಸ್ಟಾಯ್

ಸಂಪಾದಕೀಯ

ಸಾಮಾಜಿಕ ಮಾಧ್ಯಮ ವ್ಯಸನ ಸಮತೋಲಿತ ನೀತಿಯ ಅಗತ್ಯ

ಮುಂಚೂಣಿಯಲ್ಲಿರುವ ಸಾಮಾಜಿಕ ಮಾಧ್ಯಮ ವೇದಿಕೆಗಳ ವಿರುದ್ಧ ಇತ್ತೀಚೆಗೆ ಬಂದ ಅಮೆರಿಕದ ನ್ಯಾಯಾಲಯಗಳ ಎರಡು ತೀರ್ಪುಗಳಿಂದಾಗಿ ಗ್ರಾಹಕರೊಂದಿಗಿನ ತಂತ್ರಜ್ಞಾನ ಕಂಪನಿಗಳ ಸಂಬಂಧದ ಸ್ವರೂಪವೇ ಬದಲಾಗುವ ಸಾಧ್ಯತೆ ಇದೆ. ಬಳಕೆದಾರರು ವ್ಯಸನಿಗಳಾಗುವ ರೀತಿಯಲ್ಲಿ ಮೆಟಾ ಮತ್ತು ಯೂಟ್ಯೂಬ್ ಕಂಪನಿಗಳು ತಮ್ಮ ಸಾಮಾಜಿಕ ಮಾಧ್ಯಮ ಸೇವೆಗಳನ್ನು ವಿನ್ಯಾಸಗೊಳಿಸಿವೆ ಎನ್ನುವ ಯುವತಿಯೊಬ್ಬರ ವಾದವನ್ನು ಲಾಸ್ ಏಂಜಲೀಸ್ ನ್ಯಾಯಾಲಯ ಒಪ್ಪಿಕೊಂಡಿದೆ. ಆ ಯುವತಿಯು ಅನುಭವಿಸಿದ ಹಾನಿಗಾಗಿ ಆರು ದಶಲಕ್ಷ ಡಾಲರ್ ಪರಿಹಾರ ನೀಡುವಂತೆಯೂ ಆದೇಶಿಸಿದೆ. ಸಾಮಾಜಿಕ ಮಾಧ್ಯಮ ವೇದಿಕೆಗಳ ವೈಶಿಷ್ಟ್ಯಗಳು, ಅವುಗಳನ್ನು ಕಡ್ಡಾಯವಾಗಿ ಬಳಸುವ ರೀತಿಯಲ್ಲಿ ಪ್ರೇರೇಪಿಸಿದ್ದರಿಂದ ತಾನು ಖಿನ್ನತೆ ಅನುಭವಿಸುವಂತಾಯಿತು ಮತ್ತು ಅತಿಯಾದ ಒತ್ತಡದಿಂದಲೂ ಬಳಲುವಂತಾಯಿತು ಎಂದು ಆ ಯುವತಿ ದೂರಿದ್ದರು. ಇನ್ನೊಂದು ಪ್ರಕರಣದಲ್ಲಿ, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಬಳಕೆದಾರರ ದಿಕ್ಕು ತಪ್ಪಿಸಿದ್ದಕ್ಕಾಗಿ ನ್ಯೂ ಮೆಕ್ಸಿಕೊ ನ್ಯಾಯಾಲಯವು ಮೆಟಾ ಕಂಪನಿಗೆ 375 ದಶಲಕ್ಷ ಡಾಲರ್ ದಂಡ ವಿಧಿಸಿದೆ. ದಂಡದ ಪ್ರಮಾಣ ಈ ಕಂಪನಿಗಳ ಪಾಲಿಗೆ ದೊಡ್ಡ ಬಾಬತ್ತು ಅಲ್ಲದಿದ್ದರೂ ತಮ್ಮ ಉತ್ಪನ್ನಗಳ ವಿನ್ಯಾಸಕ್ಕೆ ಆ ಕಂಪನಿಗಳನ್ನೇ ಹೊಣೆಗಾರರನ್ನಾಗಿ ಮಾಡುವಲ್ಲಿ ಈ ತೀರ್ಪುಗಳು ಪೂರ್ವನಿದರ್ಶನಗಳನ್ನು ಸ್ಥಾಪಿಸಿದಂತಾಗಿದೆ. ವ್ಯಸನಕಾರಿ ಉತ್ಪನ್ನಗಳನ್ನು ತಯಾರಿಸುತ್ತಿರುವುದಕ್ಕೆ ಮತ್ತು ಆರೋಗ್ಯದ ಅಪಾಯಗಳನ್ನು ಮರೆ ಮಾಚುತ್ತಿರುವುದಕ್ಕೆ ತಂಬಾಕು ಕಂಪನಿಗಳೇ ಹೊಣೆ ಎಂಬುದಾಗಿ 1990ರ ದಶಕದಲ್ಲಿ ಬಂದಿದ್ದ ನ್ಯಾಯಾಲಯದ ತೀರ್ಪಿನೊಂದಿಗೆ ಪ್ರಸಕ್ತ ಬೆಳವಣಿಗೆಗಳನ್ನು ಸಮೀಕರಿಸಿ ನೋಡಲಾಗುತ್ತಿದೆ.



ಬಳಕೆದಾರರ ಮನಸ್ಸನ್ನು ಸೆರೆಹಿಡಿಯುವ, ಅವರಲ್ಲಿ ಆಸಕ್ತಿ ಕೆರಳಿಸುವ ರೀತಿಯಲ್ಲಿ ಸಾಮಾಜಿಕ ಮಾಧ್ಯಮ ವೇದಿಕೆಗಳು ರೂಪುಗೊಂಡಿವೆ. ಈ ಕುರಿತು ಅಮೆರಿಕದ ನ್ಯಾಯಾಲಯಗಳು ನೀಡಿರುವ ತೀರ್ಪುಗಳು ಗಮನಾರ್ಹ.

ಸಾಮಾಜಿಕ ಮಾಧ್ಯಮಗಳು ಎಷ್ಟರ ಮಟ್ಟಿಗೆ ವ್ಯಸನಕಾರಿಯಾಗಿವೆ ಎಂಬ ವಿಷಯವಾಗಿ ವಿಸ್ತೃತ ಚರ್ಚೆಗಳು ನಡೆದಿವೆ ಮತ್ತು ಅಧ್ಯಯನಗಳನ್ನೂ ನಡೆಸಲಾಗಿದೆ. ಅವುಗಳ ವಿನ್ಯಾಸ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಸಹ ಈ ಕುರಿತು ಮಾತನಾಡಿದ್ದಾರೆ. ಸಾಮಾಜಿಕ ಮಾಧ್ಯಮ ವೇದಿಕೆಗಳು ಬಳಕೆದಾರರ ಮನಸ್ಸನ್ನು ಸೆರೆಹಿಡಿಯುವ, ಅವರಲ್ಲಿ ಆಸಕ್ತಿಯನ್ನು ಕೆರಳಿಸುವ ಮತ್ತು ಅವರನ್ನು ಮರಳಿ ವೇದಿಕೆಗೆ ಬರುವಂತೆ ಮಾಡುವ ರೀತಿಯಲ್ಲಿ ರಚನೆಯಾಗಿವೆ. ವ್ಯೂಸ್‌ಗಳು, ಲೈಕ್‌ಗಳು, ಶೇರ್‌ಗಳು ಮತ್ತು ಕಾಮೆಂಟ್‌ಗಳ ಮೂಲಕ ಬಳಕೆದಾರರು ನಿರಂತರವಾಗಿ ಆ ವೇದಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅವುಗಳನ್ನು ವಿನ್ಯಾಸಗೊಳಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ, ಈ ವೇದಿಕೆಗಳು ಸೃಷ್ಟಿಸುವ ಕಾಲ್ಪನಿಕ ಪ್ರಪಂಚದೊಂದಿಗೆ ಗುರ್ತಿಸಿಕೊಳ್ಳುವುದು ಆತಂಕ, ಖಿನ್ನತೆ ಮತ್ತು ಮನೋವಿಕಾರದ ಸ್ಥಿತಿಗಳಿಗೆ ಕಾರಣವಾಗುವ ಸಾಧ್ಯತೆಯೂ ಇದೆ. ಲಾಸ್ ಏಂಜಲೀಸ್ ಪ್ರಕರಣದಲ್ಲಿ ದೂರುದಾರಳಾದ ಯುವತಿಯು ತಾನು ಆರು ವರ್ಷದವಳಾಗಿದ್ದ ದಿನಗಳಿಂದಲೂ ಸಾಮಾಜಿಕ ಮಾಧ್ಯಮವನ್ನು ಬಳಸುತ್ತಿರುವುದಾಗಿ ಮಾಹಿತಿ ನೀಡಿದ್ದಾಳೆ. ಇನ್‌ಸ್ಟಾಗ್ರಾಂನಲ್ಲಿ ಸೌಂದರ್ಯದ ಕುರಿತು ಬರುತ್ತಿದ್ದ ಕಂಟೆಂಟ್‌ಗಳ ಪರಿಣಾಮವಾಗಿ ತಾನು 'ಬಾಡಿ ಡಿಸ್ಮಾರ್ಫಿಯಾ'ದಿಂದ (ದೇಹದ ಸಣ್ಣ ದೋಷಗಳ ಕುರಿತು ಮಾನಸಿಕ ಕಾಯಿಲೆಯಿಂದ ಬಳಲುವಂತಹ ಆರೋಗ್ಯ ಸಮಸ್ಯೆ) ಬಳಲಿದ್ದಾಗಿಯೂ ಆಕೆ ವಿವರಿಸಿದ್ದಾಳೆ. ವಿಚಾರಣೆಯ ಸಮಯದಲ್ಲಿ ಪ್ರಸ್ತುತಪಡಿಸಲಾದ ಆಂತರಿಕ ದಾಖಲೆಗಳು ಕಂಪನಿಗಳ ಕಾರ್ಯನಿರ್ವಾಹಕರಿಗೆ ಇಂತಹ ಅಪಾಯಗಳ ಬಗ್ಗೆ ಮೊದಲೇ ತಿಳಿದಿತ್ತು ಎಂಬುದನ್ನು ನಿರೂಪಿಸಿವೆ. ಸಣ್ಣ ವಯಸ್ಸಿನವರು ಇಂತಹ ವೇದಿಕೆಗಳನ್ನು ಬಳಸದಂತೆ ನಿರ್ಬಂಧಿಸಲಾಗಿದ್ದರೂ ಈ ವೇದಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಕಿರಿಯ ವಯಸ್ಸಿನವರನ್ನು ಗಮನದಲ್ಲಿ ಇಟ್ಟುಕೊಂಡೇ ವಿಷಯ ವಿನ್ಯಾಸಗೊಳಿಸಲಾಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಅವರನ್ನು ಸೆಳೆಯುವುದು ವ್ಯವಹಾರದ ಉದ್ದೇಶವಾಗಿದೆ ಎಂಬುದೂ ನ್ಯಾಯಾಲಯಕ್ಕೆ ಮನವರಿಕೆಯಾಗಿದೆ.

ದೂರುಗಳ ಕುರಿತ ತನಿಖೆಯಿಂದ ಆರೋಪಗಳಲ್ಲಿ ಹುರುಳಿರುವುದು ಎದ್ದುಕಂಡಿದೆ. ಎರಡೂ ಕಂಪನಿಗಳು ಉದ್ದೇಶಪೂರ್ವಕವಾಗಿಯೇ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸಲು ಕಾನೂನು ಮತ್ತು ನೈತಿಕ ಮಾನದಂಡಗಳನ್ನು ಉಲ್ಲಂಘಿಸಿವೆ. ಸಾರ್ವಜನಿಕ ಆರೋಗ್ಯ ಮತ್ತು ಕಲ್ಯಾಣಕ್ಕಿಂತಲೂ ತಮ್ಮ ಲಾಭಕ್ಕೆ ಅವುಗಳು ಆದ್ಯತೆ ನೀಡಿವೆ ಎಂಬುದನ್ನು ನ್ಯಾಯಾಲಯವು ಸ್ಪಷ್ಟವಾಗಿ ಗುರ್ತಿಸಿದೆ. ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳ ಸರ್ಕಾರಗಳು ಸಾಮಾಜಿಕ ಮಾಧ್ಯಮದ ಬಳಕೆಯ ಮೇಲೆ ನಿಯಂತ್ರಣ ವಿಧಿಸಲು ಪ್ರಯತ್ನಿಸುತ್ತಿವೆ. ಆದರೆ, ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತವೆ ಎಂಬ ಭೀತಿಯಿಂದ ಈ ಪ್ರಯತ್ನಗಳು ಯಾವಾಗಲೂ ಪ್ರತಿರೋಧವನ್ನು ಎದುರಿಸಿವೆ. ವಯಸ್ಸಿನ ಆಧಾರದ ಮೇಲೆ ನಿರ್ಬಂಧಗಳನ್ನು ವಿಧಿಸುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಅತಿಯಾದ ಸಾಮಾಜಿಕ ಮಾಧ್ಯಮ ಬಳಕೆಯ ಅಪಾಯಗಳಿಗೆ ಕಾನೂನಿನ ಮಾರ್ಗದಲ್ಲಿ ಪರಿಹಾರ ಹುಡುಕುತ್ತಿರುವ ದೇಶಗಳಿಗೆ ಅಮೆರಿಕದ ತೀರ್ಪುಗಳು ಕೆಲವು ಹೊಳಹುಗಳನ್ನು ನೀಡಿವೆ. ಈ ತೀರ್ಪುಗಳ ಬೆಳಕಿನಲ್ಲಿ, ಸಾಮಾಜಿಕ ಮಾಧ್ಯಮ ವೇದಿಕೆಗಳ ಸ್ವಾತಂತ್ರ್ಯಕ್ಕೆ ಅವಕಾಶ ಮಾಡಿಕೊಡುವ ಜೊತೆ ಜೊತೆಗೆ ಅವುಗಳ ಮೇಲಿನ ಹೊಣೆಯನ್ನೂ ನಿಗದಿ ಮಾಡುವಂತಹ ಸಮತೋಲಿತ ನೀತಿ ನಿರೂಪಣೆಯು ಇಂದಿನ ಅಗತ್ಯವಾಗಿದೆ.

ಜಾಲತಾಣ

ದೇಶದ್ರೋಹಿಗಳು ಯಾರು?



ಹಿಂದಿ ಮತ್ತು ಸಂಸ್ಕೃತ ನುಡಿಗಳು ಮಾತ್ರ ರಾಷ್ಟ್ರೀಯತೆಗೆ ಪೂರಕ ಎಂಬ ಮಾತುಗಳನ್ನು ಆಡುವವರು ದೇಶದ್ರೋಹಿಗಳು; ಅವರು ಈ ದೇಶದ ಏಕತೆಯನ್ನು ಒಡೆಯುತ್ತಿದ್ದಾರೆ.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ 'ಎಕ್ಸ್'ನಿಂದ

ಕಿಡಿನುಡಿ



ಉಪಚುನಾವಣೆಗೆ ಮತದಾನ ಹತ್ತಿರವಾಗುತ್ತಿದ್ದಂತೆ ಮತ್ತೊಮ್ಮೆ ಅದೇ 'ತೆರಿಗೆ ಅನ್ಯಾಯ'ವೆಂಬ ಸುಳ್ಳು ಕಥೆಯನ್ನು ರಾಜ್ಯದ ಕಾಂಗ್ರೆಸ್ ನಾಯಕರು ಮುನ್ನೆಲೆಗೆ ತರುತ್ತಿದ್ದಾರೆ. ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ನಯಾಪೈಸೆ ಅಭಿವೃದ್ಧಿ ಮಾಡಲು ಕೈಲಾಗದ ಸರ್ಕಾರ, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದೆ.

ಡಾ. ಕೆ. ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಮಂಗಳವಾರ, 3-4-2001

• ಬ್ಯಾಂಕ್ ನೌಕರ ಸಂಘದ ಅಧ್ಯಕ್ಷ ಕೊಲೆ

ಮಂಗಳೂರು, ಏ. 2– ನಗರದ ಕೊಡಿಯಾಲಬೈಲಿನ ಕರ್ನಾಟಕ ಬ್ಯಾಂಕ್ ಶಾಖೆಯ ಸಿಬ್ಬಂದಿಗೆ ಅದೇ ಶಾಖೆಯ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿ, ಕೊಲೆ ಮಾಡಿರುವ ಘಟನೆ ಇಂದು ನಡೆದಿದೆ.

ಎದೆಯ ಭಾಗಕ್ಕೆ ಗುಂಡು ತಗಲಿದ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಯು. ರಾಮಕೃಷ್ಣ (51) ಅವರು ಸಂಜೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮೃತರಾದರು.

• ಅಬಕಾರಿ ಮಂಡಳಿ ಮಾಜಿ ಅಧ್ಯಕ್ಷ ಬಂಧನ

ನವದೆಹಲಿ, ಏ. 2 (ಪಿಟಿಐ)– ಎರಡು ದಿನಗಳ ದಾಳಿಯ ಬಳಿಕ ಕೇಂದ್ರೀಯ ತನಿಖಾ ದಳ (ಸಿಬಿಐ), ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್ ಮಂಡಳಿಯ ಮಾಜಿ ಅಧ್ಯಕ್ಷ ಬಿ.ಪಿ. ವರ್ಮ, ಅವರ ಮಗ ಮತ್ತು ಇಬ್ಬರನ್ನು ಇಂದು ಬಂಧಿಸಿದೆ.

75 ವರ್ಷಗಳ ಹಿಂದೆ

ಮಂಗಳವಾರ, 3-4-1951

• ಬಂದೂಕು ಸಮೇತ ಬಂದಿಗಳ ಪರಾರಿ

ತುಮಕೂರು, ಏ. 2– ಬಾಬಿಗ, ವೆಂಕಟ, ಸಂಚಿಗ, ಚಿಕ್ಕವೆಂಕಟ, ಈ ನಾಲ್ವರು ಕೇಡಿಗಳು ತುಮಕೂರು ಜಿಲ್ಲಾ ಜೈಲಿನಿಂದ ಒಂದನೇ ತಾರೀಖು ಬೆಳಗಿನ ಜಾವ 2.30 ಗಂಟೆ ಸಮಯದಲ್ಲಿ ಪರಾರಿಯಾಗಿದ್ದಾರೆ. ಪರಾರಿಯಾಗಿರುವ ಈ ಕೇಡಿಗಳು ಜೈಲು ಬಾಗಿಲು ಮುರಿದು, ಪೊಲೀಸರ ಬಂದೂಕು ತೆಗೆದುಕೊಂಡು ಪರಾರಿಯಾಗಿದ್ದಾರೆ. ಬಳಿಕ ಬಂದೂಕು ಜೈಲಿನ ಹತ್ತಿರ ಪತ್ತೆಯಾಗಿದೆ ಎಂದು ವರದಿಯಾಗಿದೆ.

ದಾವಣಗೆರೆಯ ದುರಂತ ನೋಡಾ



ಅನುರಣನ

ನಾರಾಯಣ ಎ.

> ದಾವಣಗೆರೆ ಉಪಚುನಾವಣೆ ದೇಶದ ರಾಜಕೀಯ ಕ್ಷೇತ್ರದಲ್ಲಿನ ಎರಡು ಅನೈತಿಕ ಸಂಗತಿಗಳನ್ನು ಸ್ಪಷ್ಟಪಡಿಸುವಂತಿದೆ. ಒಂದು, ನ್ಯಾಯವಾಗಿ ಸಲ್ಲಬೇಕಾದ ರಾಜಕೀಯ ಪ್ರಾತಿನಿಧ್ಯದಿಂದ ಮುಸ್ಲಿಮರು ವಂಚಿತ ಆಗುತ್ತಿರುವುದು. ಇನ್ನೊಂದು, ದೇಶದ ರಾಜಕಾರಣವನ್ನು ಆವರಿಸಿಕೊಂಡಿರುವ ಪ್ರಭಾವಿ ಕುಟುಂಬಗಳು ಜನತಂತ್ರದ ಆಶಯಗಳನ್ನೇ ಅಣಕಿಸುತ್ತಿರುವುದು!

ಉಪಚುನಾವಣೆಗಳೇ ಹಾಗೆ. ಅವು ಸಾರ್ವತ್ರಿಕ ಚುನಾವಣೆಗಳಿಗಿಂತ ಹೆಚ್ಚಿಗೆ ರಾಜಕೀಯದ ಹುಳುಕು ಕೊಳಕುಗಳತ್ತ ಬೆಳಕು ಚೆಲ್ಲುತ್ತವೆ. ದಾವಣಗೆರೆ (ದಕ್ಷಿಣ) ಕ್ಷೇತ್ರದ ಪ್ರಸ್ತುತ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ರಾಜಕೀಯದ ಮಾದರಿ ನೋಡಿ:

ಆ ಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮುಸ್ಲಿಂ ಸಮುದಾಯ ಈ ಬಾರಿಯಾದರೂ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಅವಕಾಶ ನಮಗೆ ಕೊಡಿ ಎಂದು ಆಗ್ರಹಿಸಿತ್ತು. ಸಂಖ್ಯೆ ಹೆಚ್ಚಿದೆ ಎನ್ನುವುದರ ಆಚೆಗೆ ಅವರ ಬೇಡಿಕೆ ಇನ್ನೂ ಹಲವು ರೀತಿಯಲ್ಲಿ ನೈತಿಕವಾಗಿ ಸರಿಯಾಗಿತ್ತು. ಮೊದಲನೆಯದಾಗಿ, ರಾಜ್ಯ ವಿಧಾನಸಭೆಯಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಅವರ ಜನಸಂಖ್ಯೆಗೆ ಹೋಲಿಸಿದರೆ ತೀರಾ ಕಡಿಮೆ ಇದೆ. ಎರಡನೆಯದಾಗಿ, ಬಹಳ ಕಾಲದಿಂದೀಚೆಗೆ ಮುಸ್ಲಿಂ ಸಮುದಾಯದವರು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಾ ಬಂದಿದ್ದಾರೆ. ಮೂರನೆಯದಾಗಿ, ನಿರ್ದಿಷ್ಟವಾಗಿ ದಾವಣಗೆರೆಯಲ್ಲಿ ಅವರ ಈ ಬೇಡಿಕೆ ಬಹಳ ಹಳೆಯದು. ಈ ಬಾರಿಯಾದರೂ, ಇಲ್ಲಿಯೂ ಅವಕಾಶ ನೀಡದೆ ಹೋದರೆ ಇನ್ನೆಲ್ಲಿ, ಇನ್ನು ಯಾವಾಗ ಎನ್ನುವ ಅವರ ಬೇಡಿಕೆ ಕಾಂಗ್ರೆಸ್ ಮೇಲೊಂದು ನೈತಿಕ ಒತ್ತಡವನ್ನು ಹೇರಬೇಕಿತ್ತು. ಹಾಗಾಗಲಿಲ್ಲ. ಬೇಡಿಕೆಯನ್ನು ಕಾಂಗ್ರೆಸ್ ತಿರಸ್ಕರಿಸಿತು. ವರದಿಗಳ ಪ್ರಕಾರ, ಹೀಗೆ ತಿರಸ್ಕರಿಸುವಲ್ಲಿ ನಯನಾಜೂಕುಗಳೇನೂ ಇರಲಿಲ್ಲವಂತೆ. ಕಾಂಗ್ರೆಸ್‌ನ ಓರ್ವ ನಾಯಕ ಆಗಾಗ ಬಳಸುವ ನುಡಿಗಟ್ಟುಗಳನ್ನೇ ಬಳಸಿ ಹೇಳಬೇಕೆಂದಾದರೆ, ದಾವಣಗೆರೆಯಲ್ಲಿ ಕಾಂಗ್ರೆಸ್ ಮುಸ್ಲಿಮರ ಮನವಿಯನ್ನು 'ಒದ್ದು ಹೊಸಕಿ' ಹಾಕಿತು. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಅವರ ಮೊಮ್ಮಗನನ್ನೇ ಅಭ್ಯರ್ಥಿಯನ್ನಾಗಿ ಮಾಡಿತು.

ಮೃತ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್‌ನ ಸಂಪ್ರದಾಯವಂತೆ. ಸಾಧಾರಣ ಸಂದರ್ಭದಲ್ಲಾದರೆ ಈ ವಾದವನ್ನು ಒಪ್ಪದೇ ಹೋದರೂ ಸ್ವೀಕರಿಸಬಹುದಿತ್ತೋ ಏನೋ. ಆದರೆ, ಈ ಅಭ್ಯರ್ಥಿಯ ತಂದೆ ರಾಜ್ಯದಲ್ಲಿ ಮಂತ್ರಿ. ತಾಯಿ ಲೋಕಸಭಾ ಸದಸ್ಯೆ. ಹೆಚ್ಚೂಕಡಿಮೆ ಇಡೀ ಜಿಲ್ಲೆಯ ರಾಜಕೀಯ ಅಧಿಕಾರಕ್ಕೆ ಅವರ ಕುಟುಂಬವೇ ಕೇಂದ್ರಬಿಂದು. ಇಷ್ಟೆಲ್ಲ ಇರುವಾಗಲೂ ಸಂಪ್ರದಾಯ ಪಾಲಿಸಬೇಕಿತ್ತೇ? ಮುಸ್ಲಿಂ ಸಮುದಾಯದಿಂದ ಅಷ್ಟೊಂದು ದೊಡ್ಡ ನೈತಿಕ ಒತ್ತಾಯ ಇರುವಾಗಲೂ ಮುರಿಯಬಾರದ, ಮುರಿಯಲಾಗದ ಸಂಪ್ರದಾಯವೇ ಅದು? ವಾಸ್ತವದಲ್ಲಿ ಕುಟುಂಬದ ಕುಡಿಗೇ ಕಾಂಗ್ರೆಸ್ ಟಿಕೆಟ್ ನೀಡಿದ್ದು ಸಂಪ್ರದಾಯಕ್ಕೆ ಶರಣು ಬಿದ್ದಲ್ಲ. ಆ ಕುಟುಂಬದ ಒತ್ತಾಯಕ್ಕೆ ಮಣಿದು. ಕಾಂಗ್ರೆಸ್ ದಾವಣಗೆರೆಯಲ್ಲಿ ಎದುರಿಸಿದ್ದು ಒಂದು ಇಡೀ ಸಮುದಾಯವು ಸಂವಿಧಾನಾತ್ಮಕ ರಾಜಕೀಯ ಪ್ರಾತಿನಿಧ್ಯ ಆಗ್ರಹಿಸಿ ಮುಂದಿಟ್ಟ ನೈತಿಕ ಒತ್ತಾಯ, ಬಲಾಢ್ಯ ಪಾಳೇಗಾರಿಕೆ ಮನೋವೃತ್ತಿಯ ಕುಟುಂಬದ ಅಧಿಕಾರದಾಹದ ನಡುವಣ ಸಂಘರ್ಷವನ್ನು. ಕಾಂಗ್ರೆಸ್ ಪಾಳೇಗಾರಿಕೆಗೆ ಮಣಿಯಿತು.

ಅಲ್ಲಿನ ಮುಸ್ಲಿಂ ಸಮುದಾಯ ಮುನಿಸಿಕೊಂಡಿದೆ. ಶಾಸಕರ ಕುಟುಂಬದ ಬೇಡಿಕೆಯನ್ನು ತಳ್ಳಿಹಾಕಿದ್ದರೆ ಆ ಕುಟುಂಬ ಮುನಿಸಿಕೊಳ್ಳುತ್ತಿತ್ತು. ಒಂದು ಇಡೀ ಸಮುದಾಯವೇ ಮುನಿಸಿಕೊಂಡರೂ ಪರವಾಗಿಲ್ಲ, ಒಂದು ಕುಟುಂಬದ ಅವಕೃಪೆಗೆ ಒಳಗಾಗಬಾರದು ಎನ್ನುವುದು ದಾವಣಗೆರೆಯಲ್ಲಿ ಕಾಂಗ್ರೆಸ್ ತೋರಿದ ಧೋರಣೆ. ಇನ್ನೊಂದು ರೀತಿಯಲ್ಲಿ ನೋಡುವುದಾದರೆ, ಒಂದು ಇಡೀ ಸಮುದಾಯದ ಮುನಿಸನ್ನು ನಿಭಾಯಿಸಬಹುದು; ಆದರೆ, ಹಣಬಲ ಮತ್ತು ಜಾತಿಬಲ ಇರುವ ಒಂದು ಕುಟುಂಬದ ಅಸಮಾಧಾನವನ್ನು ನಿಭಾಯಿಸುವುದು ಕಷ್ಟ ಎಂಬ ನಿರ್ಧಾರಕ್ಕೆ ಕಾಂಗ್ರೆಸ್ ಬಂದಿರಬೇಕು. ಇದು ದಾವಣಗೆರೆಯ ದುರಂತ ಮಾತ್ರವಲ್ಲ. ಇಡೀ ದೇಶದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಭಾರತದ ಪ್ರಜಾತಾಂತ್ರಿಕ ಗಣರಾಜ್ಯ ಬರಬರುತ್ತಾ ಬಲಾಢ್ಯ ಕುಟುಂಬಗಳ ಗಣರಾಜ್ಯವಾಗುತ್ತಿದೆ (ರಿಪಬ್ಲಿಕ್ ಆಫ್ ಪವರ್‌ಫುಲ್ ಫ್ಯಾಮಿಲೀಸ್). 'ಅತ್ತ ಆ ಕಡೆ ನೋಡಲಾ ಅಲ್ಲಿ ಆ ಕುಟುಂಬದ ನಾಡಲಾ, ಇತ್ತ ಈ ಕಡೆ ನೋಡಲಾ ಇಲ್ಲಿ ಈ ಕುಟುಂಬದ ಬೀಡಲಾ' ಎನ್ನುವ ಪರಿಸ್ಥಿತಿ.

ಕಾಂಗ್ರೆಸ್ ಆಗಲಿ, ಬಿಜೆಪಿಯಾಗಲಿ, ಇನ್ನಾವುದೇ ಪಕ್ಷವಾಗಲಿ, ಇವತ್ತು ಪಕ್ಷಗಳು ಎನ್ನುವುದು ಹೆಸರಿಗಷ್ಟೇ. ಅವು ಚುನಾವಣೆ ಗೆಲ್ಲಬಲ್ಲ ಸಾಮರ್ಥ್ಯ ಇರುವ ಕುಟುಂಬಗಳ ಮತ್ತು ವ್ಯಕ್ತಿಗಳ ಮೇಲೆ ಅವಲಂಬಿತವಾಗಿರುವ ಸಂಘಟನೆಗಳಷ್ಟೇ. ಹದಿನೈದು ವರ್ಷಗಳ ಹಿಂದೆ ಈ ಕುರಿತು ಪ್ಯಾಟ್ರಿಕ್ ಫ್ರೆಂಚ್ ಎಂಬ ರಾಜಕೀಯ ಶಾಸ್ತ್ರಜ್ಞ 'ಇಂಡಿಯಾ: ಎ ಪೋರ್ಟ್ರೈಟ್: ಆನ್ ಇಂಟಿಮೇಟ್ ಬಯಾಗ್ರಫಿ ಆಫ್ ಎ ಬಿಲಿಯನ್ ಪೀಪಲ್' ಎನ್ನುವ ಪುಸ್ತಕ ಬರೆದಿದ್ದರು. ಆಗ ಇದ್ದ ಲೋಕಸಭಾ ಸದಸ್ಯರ ಹಿನ್ನೆಲೆಯನ್ನು ಅಧ್ಯಯನ ಮಾಡಿ ಅವರು ಕಂಡುಕೊಂಡದ್ದೇನೆಂದರೆ, ಹೊಸದಾಗಿ ಸಂಸತ್ತು ಪ್ರವೇಶಿಸುವ ಮೂರನೇ ಎರಡರಷ್ಟು ಸದಸ್ಯರು ರಾಜಕೀಯ ಕುಟುಂಬಗಳಿಂದ ಬಂದವರು. ಎಲ್ಲಾ ಪಕ್ಷಗಳಿಗೂ ಅನ್ವಯ ಆಗುವ ಸತ್ಯವಿದು. ಇಲ್ಲ, ನಾವು ಸಾಮಾನ್ಯ ಕಾರ್ಯಕರ್ತರನ್ನು ನಿಲ್ಲಿಸಿ ಗೆಲ್ಲಿಸಬಲ್ಲೆವು ಎಂದು ಕೆಲವೆಡೆ ಹೇಳಿಕೊಳ್ಳಬಹುದು. ಆದರೆ, ಬಿಜೆಪಿಗೆ ಅದು ಸಾಧ್ಯವಾಗುವುದು ಇಡೀ ದೊಡ್ಡ ಸಂಖ್ಯೆಯ ಮತದಾರರ ತಲೆಗೆ ಧರ್ಮದ ಅಮಲೇರಿಸುವ ಮೂಲಕ. ಈ ಧರ್ಮದ ಅಮಲು ಮತ್ತು ಪ್ರಬಲ ಕುಟುಂಬಗಳ ಮೇಲಿನ ದುಂಬಾಲು – ಇವೆರಡರ ಮಧ್ಯೆ ಒಂದನ್ನು ಆರಿಸಿಕೊಳ್ಳಬೇಕಾದ ದಯನೀಯ ಸ್ಥಿತಿಯನ್ನಿಂದು ಬಹುತೇಕ ರಾಜ್ಯಗಳ ರಾಜಕೀಯ ಪ್ರವೇಶಿಸಿ ಆಗಿದೆ.


ಮತ್ತೆ ದಾವಣಗೆರೆಯ ಕತೆಗೆ ಮರಳುವುದಾದರೆ, ಅಲ್ಲಿ ಬಲಾಢ್ಯ ಕುಟುಂಬದ ಒತ್ತಡವನ್ನು ಲೆಕ್ಕಿಸದೆ ಕಾಂಗ್ರೆಸ್ ಒಂದು ವೇಳೆ ಮುಸ್ಲಿಂ ಅಭ್ಯರ್ಥಿಯೊಬ್ಬರಿಗೆ ಟಿಕೆಟ್ ನೀಡಿದ್ದರೆ ಏನಾಗುತ್ತಿತ್ತು? ಬಿಜೆಪಿಯು ಕಾಂಗ್ರೆಸ್ ಅನ್ನು ಮುಸ್ಲಿಂ ಪರವಾಗಿರುವ ಹಿಂದೂ ವಿರೋಧಿ ಪಕ್ಷ ಎಂದು ಡಂಗುರ ಹೊಡೆದು ಹಿಂದೂ ಮತಗಳನ್ನು ತನ್ನತ್ತ ಧ್ರುವೀಕರಿಸಿಕೊಂಡು ಬಿಡುತ್ತಿತ್ತು. ಟಿಕೆಟ್ ಪಡೆದುಕೊಂಡ ಕುಟುಂಬದ ಸಮರ್ಥನೆ ಇದಾಗಿತ್ತಂತೆ. ನಿಜಕ್ಕೂ ಹೀಗಾಗಿ ಬಿಡುತ್ತಿತ್ತೇ? ಹಿಂದೆ ಶಿಗ್ಗಾವಿಯಲ್ಲಿ ಉಪಚುನಾವಣೆ ನಡೆದಾಗ, ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸಿ ಗೆಲ್ಲಿಸಿತ್ತು. ಶಿಗ್ಗಾವಿಯ ಬಿಜೆಪಿ ಅಭ್ಯರ್ಥಿ ಹಿಂದುತ್ವದ ನವೋಗ್ರ ಪ್ರತಿಪಾದಕ ಮಾಜಿ ಮುಖ್ಯಮಂತ್ರಿಯ ಮಗನೇ ಆಗಿದ್ದರೂ ಅಲ್ಲಿನ ಹಿಂದೂ ಮತದಾರರೆಲ್ಲಾ ಒಂದಾಗಿ ಮುಸ್ಲಿಂ ಅಭ್ಯರ್ಥಿಯನ್ನೇನೂ ಸೋಲಿಸಲಿಲ್ಲ. ದಾವಣಗೆರೆಯ ಪರಿಸರ– ಪರಿಸ್ಥಿತಿ ಬೇರೆಯೇ ಇರಬಹುದು. ಹಾಗೆಂದುಕೊಂಡರೂ, ಕಾಂಗ್ರೆಸ್ ಅಭ್ಯರ್ಥಿ ಮುಸ್ಲಿಂ ಎಂದಾಕ್ಷಣ ಮುನಿಸಿಕೊಂಡು ಕಾಂಗ್ರೆಸ್ ಅನ್ನು ಕೈಬಿಡುವಷ್ಟರ ಮಟ್ಟಿಗೆ ಈ ರಾಜ್ಯದ ಹಿಂದೂ ಮತದಾರರು ಬಹುತೇಕ ಕ್ಷೇತ್ರಗಳಲ್ಲಿ ಇನ್ನೂ ಕೋಮುವಾದಿಗಳಾಗಿಲ್ಲ.

ಒಂದು ವೇಳೆ ತರ್ಕಕ್ಕಾಗಿ ದಾವಣಗೆರೆಯಲ್ಲಿ ಮುಸ್ಲಿಂ ಅಭ್ಯರ್ಥಿಯ ವಿರುದ್ಧ ಹಿಂದೂ ಮತಗಳ ಧ್ರುವೀಕರಣ ಆಗಿಯೇ ತೀರುತ್ತಿತ್ತು ಎಂದುಕೊಂಡರೂ, ಧ್ರುವೀಕರಣಗೊಳ್ಳುವ ಈ ಹಿಂದೂ ಮತದಾರರಾದರೂ ಯಾರು? ಅವರಲ್ಲಿ ಬಹುತೇಕರು ಅಹಿಂದ ಸಮೂಹಕ್ಕೆ ಸೇರಿದ ಹಿಂದುಳಿದ ಮತ್ತು ದಲಿತ ಮತದಾರರು ತಾನೆ? ಈ ವರ್ಗದ ಮತದಾರರಾದರೂ ಮುಸ್ಲಿಮರ ವಿರುದ್ಧ ಧ್ರುವೀಕರಣಗೊಳ್ಳದಂತೆ ತಡೆಯುವ ಸಾಮರ್ಥ್ಯ ಕಾಂಗ್ರೆಸ್‌ಗೆ ಇಲ್ಲದೆ ಹೋದರೆ, ಆ ಪಕ್ಷವು ದೇಶದಾದ್ಯಂತ ಸಂಚಯನಗೊಳ್ಳುತ್ತಿರುವ ದೈತ್ಯ ಶಕ್ತಿಗಳನ್ನು ಮಣಿಸಿ ಸಂವಿಧಾನವನ್ನು ಉಳಿಸೀತು ಎಂದು ಭರವಸೆ ಇರಿಸಿಕೊಳ್ಳುವುದಾದರೂ ಹೇಗೆ?

ಮುಸ್ಲಿಮರನ್ನು ಹೊರಗಿಟ್ಟೇ ತನ್ನ ರಾಜಕೀಯ ಎನ್ನುವುದು ಬಿಜೆಪಿಯ ಅಧಿಕೃತ ನಿಲುವು. ಹಿಂದೂಗಳ ಧ್ರುವೀಕರಣದ ಭಯದಿಂದ ಕಾಂಗ್ರೆಸ್ ಮತ್ತು ಬಹುತೇಕ ಇತರ ಪಕ್ಷಗಳು ಕೂಡಾ ಮುಸ್ಲಿಮರನ್ನು ಎಷ್ಟು ಸಾಧ್ಯವೋ ಅಷ್ಟು ಅಧಿಕಾರ ರಾಜಕೀಯದ ಹೊರಗಿಡುವುದಕ್ಕೆ ಪ್ರಯತ್ನಿಸುತ್ತಿವೆ. ಈ ಧರ್ಮ ಸೋಂಕಿತ ರಾಜಕೀಯ ಹೀಗೆ ಮುಂದುವರಿದಷ್ಟು ಕಾಲ ಮುಸ್ಲಿಮರಿಗೆ ಈ ದೇಶದಲ್ಲಿ ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಎನ್ನುವುದು ಶಾಶ್ವತ ಮರೀಚಿಕೆ.

ಇನ್ನು ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯ ರೂಢಿಸಿಕೊಂಡಿರುವ ಕುಟುಂಬಗಳಿಗೆ ಮಣೆಹಾಕುವ ಸರ್ವಪಕ್ಷಗಳ ಸಾರ್ವತ್ರಿಕ ಪ್ರವೃತ್ತಿಯಿಂದಾಗಿ ಮುಸ್ಲಿಮರ ಜತೆಗೆ ಹಿಂದುಳಿದ ಜಾತಿಗಳೂ ರಾಜಕೀಯವಾಗಿ ಬಡವಾಗಿವೆ. ಮುಸ್ಲಿಮರಿಗೆ ಇರುವಷ್ಟು ಪ್ರಾತಿನಿಧ್ಯವೂ ಹಿಂದುಳಿದ ಜಾತಿಗಳಿಗೆ ಲಭಿಸುವುದಿಲ್ಲ. ಹೆಚ್ಚುಕಡಿಮೆ ಶೇ 40ರಷ್ಟಿರುವ ಹಿಂದುಳಿದ ಜಾತಿಗಳಿಗೆ ರಾಜ್ಯ ವಿಧಾನಸಭೆಯಲ್ಲಿ ಶೇ 20ರಷ್ಟು ಪ್ರಾತಿನಿಧ್ಯ ಸಿಕ್ಕರೆ ದೊಡ್ಡದು. ಲೋಕಸಭಾ ಚುನಾವಣೆಯಲ್ಲಿ ಹಿಂದುಳಿದ ಜಾತಿಗಳಿಗೆ 28 ಸ್ಥಾನಗಳ ಪೈಕಿ ಕೆಲವೊಮ್ಮೆ (ಉದಾಹರಣೆಗೆ 2019ರಲ್ಲಿ) ಒಂದೇ ಒಂದು ಸ್ಥಾನ ದೊರೆತದ್ದೂ ಉಂಟು. ಈ ವಂಚನೆಯ ಸುಳಿಯಿಂದ ತಪ್ಪಿಸಿಕೊಂಡದ್ದು ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳು ಮಾತ್ರ. ಅದಕ್ಕೆ ಕಾರಣ, ಅವರಿಗೆ ಸಾಂವಿಧಾನಿಕವಾಗಿ ದೊರೆತ ರಾಜಕೀಯ ಮೀಸಲಾತಿ.

ಈಗ ಮುಸ್ಲಿಮರಿಗೂ, ಹಿಂದುಳಿದವರಿಗೂ ರಾಜಕೀಯ ಪ್ರಾತಿನಿಧ್ಯ ಪಡೆಯಲು ಇರುವ ಏಕೈಕ ಮಾರ್ಗ ಅದೊಂದೇ. ಹೇಗೂ ಕ್ಷೇತ್ರ ಪುನರ್ ವಿಂಗಡಣೆಯ ಹೆಸರಲ್ಲಿ ರಾಜ್ಯ ವಿಧಾನಮಂಡಲಗಳ ಮತ್ತು ಸಂಸತ್ತಿನ ಸ್ಥಾನಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುವ ತಯಾರಿ ನಡೆಸುತ್ತಿದೆ. ಸಂಖ್ಯೆ ಹೆಚ್ಚಿಸುವಾಗ ನಮಗೆ ಪ್ರಾತಿನಿಧ್ಯವೂ ಸಾಂವಿಧಾನಿಕವಾಗಿ ಖಾತರಿಯಾಗಬೇಕು ಎಂಬ ಹಕ್ಕೊತ್ತಾಯದೊಂದಿಗೆ ಬೀದಿಗಿಳಿಯುವುದೊಂದೇ ಉಳಿದಿರುವ ದಾರಿ. ಇದು ದಾವಣಗೆರೆಯ ಉಪಚುನಾವಣೆಯ ಅಘೋಷಿತ ಸಂದೇಶ.



ವಾಚಕರ ವಾಣಿ

ಹಿಂದಿ ಹೇರಿಕೆ: ಕ್ಷುಲ್ಲಕ ರಾಜಕೀಯ ಬಿಡಿ

ಹಿಂದಿ ಭಾಷೆ ಬೇಕು, ಬೇಡ ಎನ್ನುವ ವಾದದಲ್ಲಿ ರಾಜಕಾರಣಿಗಳು ಗ್ರಾಮೀಣ ಬಡಮಕ್ಕಳ ಭವಿಷ್ಯದ ಬಗ್ಗೆ ಯೋಚಿಸುತ್ತಿಲ್ಲ. ಐಎಎಸ್, ಐಪಿಎಸ್‌ನಂತಹ ಹುದ್ದೆಗಳಿಗೆ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರೇ ಹೆಚ್ಚಾಗಿ ಆಯ್ಕೆಯಾಗುತ್ತಾರೆ. ತ್ರಿಭಾಷಾ ನೀತಿಯಿಂದಾಗಿ ಉನ್ನತ ಕಲಿಕೆಗೆ ಬೇಕಿರುವ ವಿಷಯಗಳಲ್ಲಿ ಗ್ರಾಮೀಣ ಮಕ್ಕಳು ಹಿಂದುಳಿಯುತ್ತಿದ್ದಾರೆ. ಅಷ್ಟಕ್ಕೂ ಹಿಂದಿ ಬೇಕು ಎನ್ನುವ ರಾಜಕಾರಣಿಗಳ ಮಕ್ಕಳು ಪ್ರತಿಷ್ಠಿತ ಶಾಲಾ–ಕಾಲೇಜುಗಳಲ್ಲಿ ಕಲಿಯುತ್ತಾರೆ. ಹಿಂದಿ ಹೊರೆಯನ್ನು ಬಡಮಕ್ಕಳಷ್ಟೆ ಹೊರಬೇಕೆ? ದೇಶದ ಸಂಸ್ಕೃತಿ ಉಳಿಸುವ ಹೊಣೆ ಬಡವರಿಗಷ್ಟೇ ಏಕೆ? ಸರ್ಕಾರವು ಹಿಂದಿಯನ್ನು ಗ್ರೇಡ್ ಪದ್ಧತಿಯಿಂದಲೂ ತೆಗೆದು ಹಾಕಬೇಕು; ದ್ವಿಭಾಷಾ ನೀತಿಗೆ ಒತ್ತು ನೀಡಬೇಕಿದೆ.

ಮಹೇಶ ಅಶೋಕ ಶಿಂಗೆ, ಚಿಕ್ಕೋಡಿ

ಸೇವಾ ತೆರಿಗೆ ಬಾಕಿ ವಸೂಲಿಗೆ ಉಪೇಕ್ಷೆ

'ಸರ್ಕಾರಿ ಕಟ್ಟಡ: ₹457 ಕೋಟಿ ಬಾಕಿ' ವರದಿ (ಪ್ರ.ವಾ., ಏ. 1) ಓದಿದಾಗ ಇಂಗ್ಲಿಷ್ ಕಾದಂಬರಿಕಾರ ಜಾರ್ಜ್ ಆರ್ವೆಲ್ ಹೇಳಿರುವ, 'ಎಲ್ಲರೂ ಸಮಾನರು; ಕೆಲವರು ಇತರರಿಗಿಂತ ಹೆಚ್ಚು ಸಮಾನರು' ಎಂಬ ಮಾತು ನೆನಪಾಯಿತು. ವಿಧಾನಸೌಧ, ಬಹುಮಹಡಿ ಕಟ್ಟಡ, ಕುಮಾರ ಕೃಪಾದಂತಹ ಪ್ರತಿಷ್ಠಿತ ಜಾಗಗಳದ್ದೇ ಹೆಚ್ಚಿನ ಸೇವಾ ತೆರಿಗೆ ಬಾಕಿ ಇರುವುದು ಗಮನಾರ್ಹ. ಇಷ್ಟೊಂದು ದೊಡ್ಡ ಮೊತ್ತದ ತೆರಿಗೆ ಯಾವುದಾದರೂ ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಯದು ಇರಲು ಸಾಧ್ಯವಿಲ್ಲ. ಏಕೆಂದರೆ ಇಲಿ ಬೇಟೆಗೆ ಹೊರಟಾಗ ಹುಲಿ ಕಾಣಿಸುವುದಿಲ್ಲ. 'ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆಯೂ ತಿಳಿಸುವರೆ?

ಹೇಮಂತ್ ಸಂಪಗಾಂವಕರ, ಬೆಂಗಳೂರು

ಕ್ಯಾಂಪಸ್‌ನಲ್ಲೇ ಘಟಿಕೋತ್ಸವ ನಡೆಸಿ

ಮೂರು ವರ್ಷದ ಹಿಂದೆ ಹಾವೇರಿ ತಾಲ್ಲೂಕಿನ ಕೆರೆಮತ್ತಿಹಳ್ಳಿಯಲ್ಲಿ ಹಾವೇರಿ ವಿಶ್ವವಿದ್ಯಾಲಯವು ಕಾರ್ಯಾರಂಭ ಮಾಡಿತ್ತು. ಪ್ರಸ್ತುತ ಖಾಸಗಿ ಕಾಲೇಜಿನಲ್ಲಿ ಮೊದಲ ಘಟಿಕೋತ್ಸವ ನಡೆಸಲು ಆಡಳಿತ ಮಂಡಳಿಯು ತಯಾರಿ ನಡೆಸಿದೆ. ಇದಕ್ಕಾಗಿ ಕ್ಯಾಂಪಸ್‌ನಲ್ಲಿ ಮೂಲಸೌಕರ್ಯದ ಕೊರತೆಯ ನೆಪವೊಡ್ಡಿರುವುದು ಸರಿಯಲ್ಲ. ಹಾವೇರಿ ಹಿಂದುಳಿದ ಜಿಲ್ಲೆಯಾಗಿದೆ. ವಿ.ವಿಯಲ್ಲಿ ಬಡವರು, ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಕ್ಯಾಂಪಸ್‌ನಲ್ಲಿಯೇ ಘಟಿಕೋತ್ಸವ ಆಯೋಜಿಸಿದರೆ ರಾಜ್ಯಪಾಲರು, ಸಚಿವರಿಗೆ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಡಲು ಸಾಧ್ಯವಾಗಲಿದೆ.

ಎಂ. ಆಂಜನೇಯ, ಹಾವೇರಿ

ದೇಣಿಗೆ ನೀತಿ ಅನುಷ್ಠಾನದಲ್ಲಿ ತಾರತಮ್ಯ

ಸಾಮಾಜಿಕ ಕ್ಷೇತ್ರದ ಹಲವಾರು ಸೇವೆಗಳಿಗೆ ದಾನಿಗಳು ನೀಡುವ ಹಣದ ನೆರವು ಅತಿಮುಖ್ಯ. ಅದು ಸ್ವದೇಶಿ ಹಾಗೂ ವಿದೇಶಿ ಎರಡೂ ಆಗಬಹುದು. ಹಣ ಸರಿಯಾಗಿ ವಿನಿಯೋಗ ಆಗಿರುವ ಖಾತರಿ ಬಗ್ಗೆ ಆ ಸಂಸ್ಥೆಗಳು ವಾರ್ಷಿಕ ಆದಾಯ ವೆಚ್ಚದ ವಿವರ ಕೊಡಬೇಕು ಎನ್ನುವ ನೀತಿ ಸರಿ. ಆದರೆ, ಇದು ಎಲ್ಲರಿಗೂ ಅನ್ವಯ ಆಗಬೇಕು. ರಾಜಕೀಯ ಪಕ್ಷಗಳು ವಿದೇಶಿ ದೇಣಿಗೆ ಪಡೆಯಕೂಡದು. ಲೆಕ್ಕಪತ್ರ ಪರಿಶೋಧನೆ ನಡೆಸುವಾಗ ಅದು ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕು. ಇದರಲ್ಲಿ ಎದ್ದುಕಾಣುವ ಒಂದು ತಾರತಮ್ಯ ಹಾಗೂ ಪಕ್ಷಪಾತವೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಕುರಿತದ್ದು. ಸಂಘಕ್ಕೆ ಎಲ್ಲೆಲ್ಲಿಂದಲೋ ಸ್ವದೇಶಿ, ವಿದೇಶಿ ಹೀಗೆ ಅಪಾರ ಹಣ ಬರುತ್ತಿದೆ. ಆ ಸಂಸ್ಥೆಯು ಇಂದಿಗೂ ಲೆಕ್ಕಪತ್ರ ಬಹಿರಂಗಪಡಿಸಿಲ್ಲ; ಎನ್‌ಜಿಒಗಳಂತೆ ನೋಂದಣಿ ಮಾಡಿಕೊಂಡಿಲ್ಲ. ಈಗಲಾದರೂ ಸಂಘವೂ ಸೇರಿ ಎಲ್ಲರನ್ನೂ ಒತ್ತಾಯಿಸಿ ನೋಂದಣಿ ಮಾಡಿಸಬೇಕು. ಇದು ರಹಸ್ಯವಾಗಿ ಯಾರೂ ದೇಶವಿರೋಧಿ ಕೆಲಸಗಳಲ್ಲಿ ತೊಡಗದಂತೆ ನಿಗಾ ಇಡಲೂ ನೆರವಾಗಲಿದೆ.

ಕೆ.ಎಸ್. ಪಾರ್ಥಸಾರಥಿ, ಬೆಂಗಳೂರು

ಸರ್ಕಾರಿ ಶಾಲೆ ಉಳಿವಿಗೆ ಕಾಳಜಿ ಇರಲಿ

ಹಿಂದಿ ವಿಷಯಕ್ಕೆ ಅಂಕದ ಬದಲಾಗಿ ಗ್ರೇಡ್ ಪದ್ಧತಿ ಜಾರಿಗೊಳಿಸಿರುವುದು ಪ್ರಶಂಸಾರ್ಹ. ಈ ಕುರಿತಂತೆ ಕನ್ನಡಪರ ಸಂಘಟನೆಗಳು, ಕನ್ನಡಾಸಕ್ತರು ಸರ್ಕಾರದ ನಿರ್ಧಾರಕ್ಕೆ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಆದರೆ, ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳು ಮುಚ್ಚುವ ಹಂತಕ್ಕೆ ತಲಪುತ್ತಿರುವ ಬಗ್ಗೆಯೂ ಹೋರಾಟ, ಕಾಳಜಿ ತೋರಬೇಕಲ್ಲವೆ? ಸರ್ಕಾರಿ ನೌಕರರು ಮತ್ತು ಜನಪ್ರತಿನಿಧಿಗಳ ಮಕ್ಕಳು ಈ ಶಾಲೆಗಳಲ್ಲಿ ಓದುವುದಿಲ್ಲ. ಸರ್ಕಾರದ ಭಾಗವಾದ ನೌಕರರು, ಶಾಸಕರು, ಸಚಿವರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಲ್ಲಿಯೇ ಓದಿಸುವ ನಿಯಮ ರೂಪಿಸಬೇಕಿದೆ.


ವೀರಪ್ಪ ಹ. ತಾಳದವರ, ರೋಣ

ಕೆಪಿಎಸ್‌ಸಿ ಭ್ರಷ್ಟಾಚಾರಕ್ಕೆ ಲಗಾಮು ಹಾಕಿ

'ಕೆಪಿಎಸ್‌ಸಿ: ಅಡಿಗಡಿಗೂ ದೋಷ' ಹಾಗೂ 'ಸಹನೆಗೂ ಮಿತಿ ಇದೆ!' ಲೇಖನಗಳು (ಅನುಭವ ಮಂಟಪ, ಪ್ರ.ವಾ., ಏ. 2) ಸರ್ಕಾರಿ ವ್ಯವಸ್ಥೆಯ ಕೊಳಕನ್ನು ತೆರೆದಿಟ್ಟಿವೆ. ಭ್ರಷ್ಟಾಚಾರದ ಕೂಟವಾಗಿರುವ ಕರ್ನಾಟಕ ಲೋಕಸೇವಾ ಆಯೋಗದ ಸ್ವಚ್ಛತೆಗೆ ಸರ್ಕಾರ ಇಂದಿಗೂ ಸೂಕ್ತ ಕ್ರಮ ಜರುಗಿಸದಿರುವುದು ದುರದೃಷ್ಟಕರ. ಸಿದ್ದರಾಮಯ್ಯ ಅವರು 'ನಾನು ಬಡವರ ಪಾಲಿನ ಅನ್ನರಾಮಯ್ಯ' ಎಂದಿದ್ದಾರೆ. ಲಕ್ಷಾಂತರ ಉದ್ಯೋಗಿಗಳ ಪಾಲಿಗೆ ಉದ್ಯೋಗದಾತ ಆಗುವುದು ಬೇಡವೆ? ಕಳೆದ ಮೂರು ದಶಕದಿಂದ ಕೆಪಿಎಸ್‌ಸಿ ನಡೆಸಿದ ಪ್ರತಿ ನೇಮಕಾತಿಯೂ ಒಂದಿಲ್ಲೊಂದು ಕಾರಣಕ್ಕೆ ವಿವಾದಕ್ಕೆ ಸಿಲುಕಿದೆ. ಯುಪಿಎಸ್‌ಸಿ ಮಾದರಿಯಲ್ಲಿ ಇದನ್ನು ರೂಪಿಸಬೇಕಿದೆ. ತಜ್ಞರ ಸಲಹೆಗಳಿಗೂ ಮಾನ್ಯತೆ ನೀಡಬೇಕು. ಇದಕ್ಕಾಗಿ ಆಯೋಗಕ್ಕೆ ತುರ್ತಾಗಿ ಚಿಕಿತ್ಸೆ ನೀಡಬೇಕಿದೆ.

ಎ.ವಿ. ಶಾಮರಾವ್, ಬೆಂಗಳೂರು

ಚುರುಮುರಿ



ಟ್ರಂಪ್ ಸಂದರ್ಶನ!

• ಬಿ.ಎನ್. ಮಲ್ಲೇಶ್

ಟಿವಿ ಪತ್ರಕರ್ತ ತೆಪರೇಸಿ ಆನ್‌ಲೈನಲ್ಲಿ ಟ್ರಂಪ್ ಅವರ ಇಂಟರ್ ವ್ಯೂ ಮಾಡ್ತಿದ್ದ.

'ಹಲೋ ಟ್ರಂಪ್ ಜೀ... ಹೌ ಆರ್ ಯೂ?'

'ಆ್ಯಮ್ ಫೈನ್, ಟ್ರಂಪ್ ಓಕೆ, ವಾಟ್ ಈಸ್ ದಟ್ ಜೀ?'

'ಜೀ ಕತೆ ಈಗ ಹೇಳಾಕಾಗಲ್ಲ, ನಮ್ಮಲ್ಲಿ ಜಿರಾಮ್ ಜಿ, ಎಸ್ ರಾಮ್ ಜಿ ಅಂತೆಲ್ಲ ಅದಾವೆ, ಅದಿರ್ಲಿ, ಯುದ್ಧ ನಿಲ್ಲಿಸಲ್ವಾ?'

'ನಿಲ್ಲಿಸಿದ್ನಲ್ಲ? ನ್ಯಾಟೊದೋರು ನಂಗೆ ಕೈ ಕೊಟ್ರು...'

'ಕೈ ಕೊಟ್ರು ಅನ್ಬೇಡಿ, ಅದು ಕಾಂಗ್ರೆಸ್ ಸಿಂಬಲ್ಲು...'

'ಓ ಐಸೀ... ನನ್ ಫ್ರೆಂಡ್ ಮೋದಿ ಸಿಂಬಲ್ ಏನು?'

'ಕಮಲ... ಐ ಮೀನ್ ಲೋಟಸ್'

'ಓ... ಕಮಲ ಗೊತ್ತು, ಕಮಲ ಹ್ಯಾರಿಸ್...'

'ಕರೆಕ್ಟ್, ಈಗ ಇರಾನ್ ಯುದ್ಧದಲ್ಲಿ ನೀವು ಸೋತ್ರೋ ಗೆದ್ರೋ?'

'ಅದೇ ನಂಗೂ ಗೊತ್ತಾಗ್ತಿಲ್ಲ...'

'ಸರಿಹೋತು... ಹೋಗ್ಲಿ ನಂಗೊಂದು ಸಿಲಿಂಡರ್ ಕೊಡಿಸ್ತೀರಾ?'

'ವಾಟ್ ನಾನ್ ಸೆನ್ಸ್, ನಿಮ್ಗೆ ಹೊರ್ಮುಜ್ ಗೊತ್ತಾ?'

'ಸಂಧಿಗಳು ನಮ್ ಸಿದ್ರಾಮಣ್ಣಂಗೆ ಚೆನ್ನಾಗಿ ಗೊತ್ತು, ನಮ್ದೇನಿದ್ರೂ ಸಂದಿ ಗೊಂದಿ...'

'ಅದನ್ನೇ ನಿಮ್ ಹೆಸರಿಗೆ ಬರೆದು ಕೊಡ್ತೀನಿ, ವಾಟ್ಸ್ ಯುವರ್ ನೇಮ್?'

'ನನ್ ಹೆಸರಾ? ತೆಪರೇಸಿ...'

'ಟೇಪ್ರೇಶಿ! ವಾವ್ ಬ್ಯೂಟಿಫುಲ್ ನೇಮ್, ನೀವು ಬೋಫೋರ್ಸ್ ಕ್ವಟ್ರೋಚಿ ಬ್ರದರಾ?'

'ನೋ... ನಾನು ಡಿಕೆಶಿ ಫ್ರೆಂಡು. ಅದಿರ್ಲಿ ನೀವು ಚಂದ್ರಯಾನಕ್ಕೆ ನಿಮ್ ದೇಶದ ಕೆಲವರನ್ನ ಕಳಿಸಿದೀರಿ, ನೀವ್ಯಾಕೆ ಹೋಗ್ಲಿಲ್ಲ?'

'ಸ್ಟುಪಿಡ್, ಆ ಚಂದ್ರನೇ ನಂದು, ಅದನ್ನೇ ಇಲ್ಲಿಗೆ ಕರೆಸಬಲ್ಲೆ'

'ಅಲ್ಲ, ನೀವು ಅಲ್ಲಿಗೆ ಹೋಗಿದ್ರೆ ಭೂಮಿ ಮೇಲೆ ಶಾಂತಿ ನೆಲೆಸ್ತಿತ್ತು ಅಂತ...'

'ಶಾಂತಿ? ಯು ಮೀನ್ ಪೀಸ್?'

'ಎಸ್... ನಿಮ್ಗೆ ನೊಬೆಲ್ ಅಶಾಂತಿ ಪ್ರಶಸ್ತಿ ಕೊಡಿಸ್ಬೇಕು ಅಂದೆ...'

ಅಷ್ಟರಲ್ಲಿ ಏನೋ ಸದ್ದಾಯಿತು. 'ಶಾಂತಿ? ಯಾರ್ರೀ ಅವಳು ಶಾಂತಿ?' ಮಡದಿ ಘರ್ಜನೆ ಕೇಳಿ ಕಣ್ಣು ಬಿಟ್ಟ ತೆಪರೇಸಿ. ಇಂಟರ್ ವ್ಯೂ ನಡೆದದ್ದು ಕನಸಲ್ಲಾ!

ಸಂಗತ

ಅಲ್ಲಿ, ನಲಿಯಾದಲ್ಲಿ ದೊರವಾಯನ ಹಕ್ಕಿಗಿಲಕಿ!

ಹೆಬ್ಬಕ ಹಕ್ಕಿ ಅಳಿವಿನ ಅಂಚಿನಲ್ಲಿದೆ. ಈ ಪಕ್ಷಿಯ ಮರಿಯೊಂದರ ಜನನ 'ಸುಧಾರಿತ ಸಂರಕ್ಷಣಾ ವಿಧಾನ'ದಡಿ ನಡೆದಿರುವುದು ಪಕ್ಷಿಲೋಕದಲ್ಲಿ ಸಂಚಲನ ಹುಟ್ಟಿಸಿದೆ.

• ಕೆ.ಎಚ್. ಓಬಳೇಶ್

ಪಡುವಣದಲ್ಲಿ ಆಗಷ್ಟೇ ಸೂರ್ಯ ಮುಳುಗಿ ಕತ್ತಲು ಆವರಿಸುತ್ತಿತ್ತು. ರಾಣೆಬೆನ್ನೂರು ವನ್ಯಜೀವಿಧಾಮದ ಅರಣ್ಯ ವೀಕ್ಷಕನ ಅಂದಿನ ಕೆಲಸದ ದಿನಚರಿ ಕೂಡ ಮುಗಿದಿತ್ತು. ಕಾಡಿನ ಸೀಳುದಾರಿಯಲ್ಲಿ ಮನೆಯತ್ತ ಹೆಜ್ಜೆ ಹಾಕತೊಡಗಿದ್ದ. ಎತ್ತರಕ್ಕೆ ಬೆಳೆದಿದ್ದ ಹುಲ್ಲಿನ ನಡುವೆ ದೊರವಾಯನ ಹಕ್ಕಿಯ (ಗ್ರೇಟ್ ಇಂಡಿಯನ್ ಬಸ್ಟರ್ಡ್) ತಲೆಯೊಂದು ಗೋಚರಿಸಿತು. ಆತನ ಹೆಜ್ಜೆಯ ಸಪ್ಪಳಕ್ಕೆ ಕನಲಿದ ಆ ತಾಯಿಹಕ್ಕಿ ಕತ್ತನ್ನು ಇನ್ನಷ್ಟು ಮೇಲಕ್ಕೆ ಚಾಚಿತು. ಆತ ಸಮೀಪಕ್ಕೆ ಬಂದಾಗ ಬೆದರಿ ಗಂಡುಹಕ್ಕಿಯೊಂದಿಗೆ ಹಾರಿಹೋಯಿತು.

ಅವನ ಎದೆಯೊಳಗೆ ಕುತೂಹಲದ ಹಕ್ಕಿ ರೆಕ್ಕೆಬಿಚ್ಚಿತು. ಮಂದ ಬೆಳಕಿನಲ್ಲಿ ಹುಡುಕಾಟ ನಡೆಸಿದ ಆತನಿಗೆ ಹೆಣ್ಣುಹಕ್ಕಿಯು ಮೊಟ್ಟೆ ಇಟ್ಟಿರುವುದು ಕಂಡಿತು. ಹಿರಿಯ ಅಧಿಕಾರಿಗಳಿಗೆ ಈ ವಿಷಯ ತಿಳಿಸಿ ಅವರ ವಿಶ್ವಾಸಗಳಿಸುವ ಆಸೆ ಹೆಮ್ಮರವಾಯಿತು. ವನ್ಯಜೀವಿ ಛಾಯಾಗ್ರಹಣದಲ್ಲಿ ಆಸಕ್ತಿಯಿದ್ದ ಅಧಿಕಾರಿಗಳ ಕಿವಿಗೂ ಈ ಸುದ್ದಿ ಮುಟ್ಟಿತು. ಬಗಲಲ್ಲಿ ಕ್ಯಾಮೆರಾಗಳನ್ನು ಹೊತ್ತ ಅಧಿಕಾರಿಗಳ ತಂಡವು ಕಾಡು ಪ್ರವೇಶಿಸಿತು. ಜೋಡಿಹಕ್ಕಿಯ ಛಾಯಾಚಿತ್ರ ಸೆರೆ ಹಿಡಿಯಲು ಹಗಲು-ರಾತ್ರಿ ಜಾಗರಣೆ ಮಾಡಿದರು. ತಾಯ್ತನದ ಕನವರಿಕೆಯಲ್ಲಿದ್ದ ಹಕ್ಕಿಗಳಿಗೆ ಅಧಿಕಾರಿಗಳ ಬೂಟಿನ ಸದ್ದು ದಿಗಿಲು ಹುಟ್ಟಿಸಿತು; ಮೊಟ್ಟೆಗೆ ನೀವೇ ಕಾವು ಕೊಟ್ಟುಕೊಳ್ಳಿ ಎಂಬರ್ಥದಲ್ಲಿ ಅವು ಗೂಡಿನತ್ತ ಬರಲೇ ಇಲ್ಲ. ಆ ಘಟನೆ ಜರುಗಿ ಮೂರೂವರೆ ದಶಕ ಉರುಳಿದೆ. ಇಂದಿಗೂ ಆ ಕಾಡಿನತ್ತ ದೊರವಾಯನ ಹಕ್ಕಿಯ ಜೋಡಿ ಮತ್ತೆ ಸುಳಿದಿಲ್ಲ.



ಬಳ್ಳಾರಿ ಜಿಲ್ಲೆಯಲ್ಲಿ ಈ ಪಕ್ಷಿಗೆ 'ಎರೆಭೂತ' ಎಂದರೆ, ಹಾವೇರಿ ಭಾಗದಲ್ಲಿ 'ಎರಲಾಡ', 'ಹೆಬ್ಬಕ' ಎಂದು ಕರೆಯುತ್ತಾರೆ. ದಶಕಗಳ ಹಿಂದೆ ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ, ಆಂಧ್ರಪ್ರದೇಶದಲ್ಲಿ ಇವುಗಳ ಸಂಖ್ಯೆ ಹೆಚ್ಚಿತ್ತು. 2018ರಲ್ಲಿ ದೇಶದಾದ್ಯಂತ ನಡೆಸಿದ ಸಮೀಕ್ಷೆಯಲ್ಲಿ ಸುಮಾರು 150 ಇರಬಹುದೆಂದು ಅಂದಾಜಿಸಲಾಗಿದೆ. ಈಗಿನ ಸಂರಕ್ಷಣಾ ವೈಫಲ್ಯಗಳಿಂದಾಗಿ ಈ ಸಂಖ್ಯೆ ಮತ್ತಷ್ಟು ಕುಸಿದಿರುವ ಸಾಧ್ಯತೆ ಇಲ್ಲದಿಲ್ಲ.

ದಶಕದ ಬಳಿಕ ಗುಜರಾತ್‌ನ ಕಛ್ ಜಿಲ್ಲೆಯ ನಲಿಯಾ ಅರಣ್ಯದಲ್ಲಿ ಹೆಬ್ಬಕ ಹಕ್ಕಿಯೊಂದು ಸುಧಾರಿತ ಸಂರಕ್ಷಣಾ ವಿಧಾನದಡಿ ಮರಿಗೆ ಜನ್ಮ ನೀಡಿರುವುದು ವಿಶ್ವದ ಗಮನ ಸೆಳೆದಿದೆ. ಅಳಿವಿನಂಚಿಗೆ ತಲಪಿರುವ ಇವುಗಳ ಸಂರಕ್ಷಣೆಯಲ್ಲಿ ಈ ವಿಧಾನವು ಮಹತ್ವವಾದುದೆಂದು ವಿಶ್ಲೇಷಿಸಲಾಗುತ್ತಿದೆ. ನಲಿಯಾದಲ್ಲಿ ಗಂಡುಹಕ್ಕಿಗಳು ಕಣ್ಮರೆಯಾಗಿದ್ದು, ಉಳಿದಿರುವುದು ಮೂರು ಹೆಣ್ಣುಹಕ್ಕಿಗಳಷ್ಟೆ. ಆ ಪೈಕಿ ಹಕ್ಕಿಯೊಂದು ಮೊಟ್ಟೆ ಇಟ್ಟಿತ್ತಾದರೂ, ಅದು ಫಲವತ್ತತೆ ಕಳೆದುಕೊಂಡಿತ್ತು.

ಭಾರತೀಯ ವನ್ಯಜೀವಿ ಸಂಸ್ಥೆಯ ವಿಜ್ಞಾನಿಗಳು ರಾಜಸ್ಥಾನದ ಡೆಸರ್ಟ್ ರಾಷ್ಟ್ರೀಯ ಉದ್ಯಾನದಲ್ಲಿ ಹೆಬ್ಬಕಗಳ ಗೂಡಿನಲ್ಲಿ ಫಲವತ್ತಾದ ಮೊಟ್ಟೆಗಳನ್ನಿಟ್ಟು ಹಕ್ಕಿಗಳಿಂದಲೇ ಕಾವು ಕೊಡಿಸಿ ಮರಿ ಮಾಡಿಸುವ ಪ್ರಯೋಗದಲ್ಲಿ (ಜಂಪ್‌ಸ್ಟಾರ್ಟ್) ಯಶಸ್ವಿಯಾಗಿದ್ದರು. ನಲಿಯಾದಲ್ಲೂ ಇದೇ ಪ್ರಯೋಗಕ್ಕೆ ನಿರ್ಧರಿಸಿದರು. ರಾಜಸ್ಥಾನದಲ್ಲಿ ಸ್ಥಾಪಿಸಿರುವ ಹೆಬ್ಬಕಗಳ ಸಂತಾನೋತ್ಪತ್ತಿ ಕೇಂದ್ರದಿಂದ 15ರಿಂದ 16 ದಿನಗಳ ಫಲವತ್ತಾದ ಮೊಟ್ಟೆಯನ್ನು ವಿಶೇಷ ಇನ್ಕ್ಯುಬೇಟರ್‌ನಲ್ಲಿ ನಲಿಯಾಕ್ಕೆ ತಂದು ಹಕ್ಕಿಯ ಗೂಡಿನಲ್ಲಿ ಇಡಲಾಯಿತು. ಈ ಮೊಟ್ಟೆಯು ಗುಜರಾತ್‌ವರೆಗಿನ 770 ಕಿ.ಮೀ. ದೂರ ಕ್ರಮಿಸಲು 19 ತಾಸು ಹಿಡಿದಿದೆ. ಹೆಬ್ಬಕದ ಮರಿಯು ಮೊಟ್ಟೆಯಿಂದ ಹೊರಬರಲು 22 ದಿನಗಳು ಬೇಕು. ತಾಯಿಹಕ್ಕಿಯ ಸ್ಪರ್ಶ ತಾಗಿಸಿಕೊಂಡ ಹಕ್ಕಿಮರಿಯು ಮೊಟ್ಟೆಯೊಡೆದು ಹೊರಬಂದಿದೆ. ಅಮ್ಮನೊಟ್ಟಿಗೆ ಹೆಜ್ಜೆ ಹಾಕುತ್ತಿರುವ ಇದನ್ನು ನರಿಗಳ ಕಾಟದಿಂದ ರಕ್ಷಿಸಲು ಅರಣ್ಯ ಸಿಬ್ಬಂದಿ ಟೊಂಕಕಟ್ಟಿ ನಿಂತಿದ್ದಾರೆ.

ತೆರೆದ ಹುಲ್ಲುಗಾವಲು, ಸಣ್ಣ ಕುರುಚಲು ಪ್ರದೇಶ ಹಾಗೂ ಪಾಳುಬಿದ್ದ ಕೃಷಿ ಭೂಮಿಯೇ ದೊರವಾಯನ ಹಕ್ಕಿಗಳ ಆವಾಸ. ಇವು ಬಹುಪಾಲು ನೆಲವಾಸಿ. ವರ್ಷಕ್ಕೆ ಒಂದು ಮೊಟ್ಟೆಯನ್ನಷ್ಟೇ ಇಡುತ್ತವೆ. ಅಪಾಯ ಎದುರಾದಾಗ ಹಾರಿ ತಪ್ಪಿಸಿಕೊಳ್ಳುವ ಕಲೆ ಅವುಗಳಿಗೆ ಕರಗತವಾಗಿದೆ. ಈ ಹಕ್ಕಿಯು ರಾಜಸ್ಥಾನದ ರಾಜ್ಯಪಕ್ಷಿಯೂ ಹೌದು. ಪಕ್ಷಿತಜ್ಞ ಸಲೀಂ ಅಲಿ ಅವರು ಇದನ್ನು ರಾಷ್ಟ್ರ ಪಕ್ಷಿಯಾಗಿ ಘೋಷಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ, 1963ರಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅಧ್ಯಕ್ಷರಾಗಿದ್ದ ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ನೇತೃತ್ವದ ಸಭೆಯು ನವಿಲನ್ನು ರಾಷ್ಟ್ರ ಪಕ್ಷಿಯಾಗಿ ಆಯ್ಕೆ ಮಾಡಿತು.

ಸದ್ಯ ರಾಜಸ್ಥಾನ ಮತ್ತು ಗುಜರಾತ್‌ನಲ್ಲಷ್ಟೇ ಹೆಬ್ಬಕಗಳು ಉಳಿದಿವೆ. ಇವುಗಳ ಸಂಕುಲಕ್ಕೆ ಮೊದಲು ಸಂಚಕಾರವಾಗಿದ್ದು ಕಳ್ಳಬೇಟೆ. ಅವುಗಳ ಆವಾಸವಾಗಿರುವ ಹುಲ್ಲುಗಾವಲು, ಕುರುಚಲು ಕಾಡು ನೇಗಿಲ ಮೊನೆಗೆ ಸಿಲುಕಿ ಛಿದ್ರವಾಗುತ್ತಿದೆ. ಮತ್ತೊಂದೆಡೆ ರಾಜಸ್ಥಾನ, ಗುಜರಾತ್‌ನಲ್ಲಿ ಸೌರ ಮತ್ತು ಪವನ ವಿದ್ಯುತ್ ಪ್ರಸರಣಕ್ಕೆ ಅಳವಡಿಸಿರುವ ವಿದ್ಯುತ್ ಮಾರ್ಗಗಳು ಅವುಗಳ ಜೀವಕ್ಕೆ ಎರವಾಗಿವೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಕಳವಳ ವ್ಯಕ್ತಪಡಿಸಿದೆ. ಹಕ್ಕಿಗಳ ಆವಾಸಕ್ಕೆ ವಿದ್ಯುತ್ ಜಾಲವು ಮಾರಕವಾಗದಂತೆ ಕ್ರಮಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಜೊತೆಗೆ, ಹಕ್ಕಿಗಳ ಸಂರಕ್ಷಣೆಯ ಮೇಲ್ವಿಚಾರಣೆಗಾಗಿ ತಜ್ಞರ ಸಮಿತಿಯೊಂದನ್ನೂ ರಚಿಸಿದೆ. ಅಪರೂಪದ ಹೆಬ್ಬಕಗಳ ಸಂರಕ್ಷಣೆಗೆ ಮತ್ತಷ್ಟು ಬಿಗಿಯಾದ ಕ್ರಮಗಳನ್ನು ರೂಪಿಸಬೇಕಿದೆ. ಇಲ್ಲವಾದರೆ ಇವು ಕೂಡ ಭಾರತದಿಂದ ಈಗಾಗಲೇ ನಿರ್ವಂಶವಾಗಿರುವ ಹಿಮಾಲಯನ್ ಲಾವಕ್ಕಿ, ನಸುಗೆಂಪು ತಲೆಯ ಬಾತು ಸಾಲಿಗೆ ಸೇರಲಿವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಯುಪಿಎಸ್‌ಸಿಗೆ ಸಾಧ್ಯ ಕೆಪಿಎಸ್‌ಸಿಗೆ ಏಕೆ ಅಸಾಧ್ಯ?

ಯುಪಿಎಸ್‌ಸಿ ಕೇಂದ್ರ ನಾಗರಿಕ ಸೇವಾ ಅಧಿಕಾರಿಗಳ ನೇಮಕಾತಿ ಮಾಡುತ್ತದೆ. ಶತಮಾನದಷ್ಟು ಇತಿಹಾಸವಿರುವ ಆಯೋಗವು ನಿಷ್ಪಕ್ಷಪಾತ, ಪಾರದರ್ಶಕ ಪರೀಕ್ಷಾ ಪದ್ಧತಿಗೆ ಹೆಸರಾಗಿದೆ. ಈ ಸ್ವಾಯತ್ತ ಸಂಸ್ಥೆಯು ರಾಜಕೀಯದ ನಂಟಿನಿಂದ ದೂರ ಉಳಿದಿದೆ. ಆದರೆ, 75 ವರ್ಷಗಳ ಹಿಂದೆ ಸ್ಥಾಪನೆಯಾದ ಕೆಪಿಎಸ್‌ಸಿ ಇತಿಹಾಸವು ಹಗರಣ, ವಿವಾದಗಳಿಂದ ತುಂಬಿಹೋಗಿದೆ. ಯುಪಿಎಸ್‌ಸಿಗೆ ಸಾಧ್ಯವಾಗಿದ್ದು ಕೆಪಿಎಸ್‌ಸಿಗೆ ಸಾಧ್ಯವಾಗದೇ ಹೋದದ್ದು ಏಕೆ, ಯುಪಿಎಸ್‌ಸಿ ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿದೆ

ಸ್ವಚ್ಛವಾಗಲಿ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಸ್ಥಾಪನೆಗೊಂಡು (1926) ನೂರು ವರ್ಷಗಳಾಗಿವೆ. ಈ ಅವಧಿಯಲ್ಲಿ ಅದು ಪ್ರಾಮಾಣಿಕತೆ, ಪಾರದರ್ಶಕತೆ, ವಿಶ್ವಾಸಾರ್ಹತೆಯ ಪ್ರತೀಕವಾಗಿಯೇ ಉಳಿದಿದೆ. ಸಾರ್ವಜನಿಕ ಸೇವೆಗಾಗಿ ಅಧಿಕಾರಿಗಳನ್ನು ಪ್ರತಿಭೆ ಆಧಾರದಲ್ಲಿ ನೇಮಿಸಲು ರಾಜಕೀಯೇತರವಾದ, ನಿಷ್ಪಕ್ಷಪಾತವಾದ ವ್ಯವಸ್ಥೆ ಬೇಕು ಎನ್ನುವುದು ಸಂವಿಧಾನ ರಚನಾ ಸಭೆಯ ನಿಲುವಾಗಿತ್ತು. ಸಂವಿಧಾನದ 315ನೇ ವಿಧಿ ಅನ್ವಯ ಯುಪಿಎಸ್‌ಸಿಗೆ ಸ್ವಾಯತ್ತೆ ನೀಡಲಾಗಿದೆ. ನಾಗರಿಕ ಸೇವಾ ನಿಯಮಗಳನ್ನು ಭಾರತದ ಉಕ್ಕಿನ ಚೌಕಟ್ಟು ಎಂದು ವಲ್ಲಭಭಾಯ್ ಪಟೇಲ್ ಬಣ್ಣಿಸಿದ್ದರು. ಯುಪಿಎಸ್‌ಸಿ ಆ ಚೌಕಟ್ಟಿನ ರಕ್ಷಾ ಕವಚವಾಗಿದೆ ಎನ್ನುವ ವಿಶ್ಲೇಷಣೆ ಇದೆ.

ಕೇಂದ್ರ ಸೇವೆಗಳಿಗೆ ಹೆಚ್ಚು ಅಧಿಕಾರಿಗಳ ಅಗತ್ಯ ಇರುತ್ತದೆ. ನೇಮಕಾತಿಗಾಗಿಯೇ 1985ರಲ್ಲಿ ಪ್ರತ್ಯೇಕವಾಗಿ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ ಆರಂಭಿಸಲಾಯಿತು. ನಾಗರಿಕ ಸೇವಾ ಪರೀಕ್ಷೆಗಳನ್ನು (ಐಎಫ್‌ಎಸ್, ಐಎಎಸ್, ಐಪಿಎಸ್, ಐಆರ್‌ಎಸ್...) ನಡೆಸುವುದು ಯುಪಿಎಸ್‌ಸಿಯ ಪ್ರಾಥಮಿಕ ಜವಾಬ್ದಾರಿ. ನಾಗರಿಕ ಸೇವಾ ಪರೀಕ್ಷೆಗಳು (ಸಿಎಸ್‌ಇ) ಇಂದಿಗೂ ದೇಶದ ಪ್ರತಿಭಾವಂತ ಹಾಗೂ ಮಹತ್ವಾಕಾಂಕ್ಷಿ ಯುವಕ/ಯುವತಿಯರ ನೆಚ್ಚಿನ ಪರೀಕ್ಷೆಗಳಾಗಿವೆ. ಇದರಲ್ಲಿ ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್), ಮುಖ್ಯ ಪರೀಕ್ಷೆ (ಮೇನ್ಸ್) ಮತ್ತು ಸಂದರ್ಶನ– ಮೂರು ಹಂತಗಳಿರುತ್ತವೆ. ಪ್ರತಿಯೊಂದು ಹಂತವೂ ಅತ್ಯಂತ ಸವಾಲಿನಿಂದ ಕೂಡಿದ್ದು, ಅಭ್ಯರ್ಥಿಗಳ ಸಾಮಾನ್ಯ ಜ್ಞಾನ, ವಿಶ್ಲೇಷಣಾ ಶಕ್ತಿ ಮತ್ತು ಕೌಶಲವನ್ನು ಒರೆಗೆ ಹಚ್ಚಲಾಗುತ್ತದೆ. ಪ್ರತಿಯೊಂದು ಧರ್ಮ, ಜಾತಿ, ಪ್ರದೇಶ, ಭಾಷೆಯ ಯುವಜನರೂ ಸಂಪೂರ್ಣ ನಂಬಿಕೆಯಿಂದ ಯುಪಿಎಸ್‌ಸಿ ಪರೀಕ್ಷೆ ಬರೆಯುತ್ತಾರೆ. ಇಂದಿಗೂ ಇದು ಭಾರತದ ಪ್ರಜಾಪ್ರಭುತ್ವ ಮತ್ತು ಆಡಳಿತದ ಪ್ರಮುಖ ಸಂಸ್ಥೆಯಾಗಿದ್ದು, ಪಾರದರ್ಶಕ, ನಿಷ್ಪಕ್ಷಪಾತ, ಗೋಪ್ಯ ಮತ್ತು ಉತ್ತರದಾಯಿಯಾದ ವ್ಯವಸ್ಥೆಯಾಗಿದೆ.

ಸರ್ಕಾರದ ಅಗತ್ಯಕ್ಕೆ ತಕ್ಕಂತೆ ಯುಪಿಎಸ್‌ಸಿ ನಿಯಮಿತವಾಗಿ ಮತ್ತು ಕಾಲಮಿತಿಯೊಳಗೆ ನೇಮಕಾತಿಗಳಿಗೆ ಸಂಬಂಧಿಸಿದ ಅಧಿಸೂಚನೆ ಹೊರಡಿಸುವುದು, ಪರೀಕ್ಷೆ ನಡೆಸುವುದು ಮತ್ತು ಫಲಿತಾಂಶ



ಪ್ರಕಟಿಸುವುದು ಮಾಡುತ್ತದೆ. ಪರೀಕ್ಷಾ ಪದ್ಧತಿ, ಬಡ್ತಿ ಪದ್ಧತಿಯಲ್ಲಿ ಬದಲಾವಣೆ, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆ ಹೀಗೆ ಕಾಲಕ್ಕೆ ತಕ್ಕಂತೆ ಸುಧಾರಣೆ, ಬದಲಾವಣೆಗಳನ್ನು ಮಾಡಿಕೊಳ್ಳುತ್ತಲೇ ಬರುತ್ತಿದೆ.

ಆಗಿಂದಾಗ್ಗೆ ಪರೀಕ್ಷೆಗಳ ಪಠ್ಯಕ್ರಮವನ್ನು ಬದಲಾಯಿಸಲಾಗುತ್ತದೆ. ಅದಕ್ಕಾಗಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗುತ್ತದೆ. ಅವುಗಳಲ್ಲಿ ಶಿಕ್ಷಣ ತಜ್ಞರು, ನಾಗರಿಕ ಸೇವಾ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಇರುತ್ತಾರೆ. ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳ ಜತೆಗೆ ಪ್ರಸ್ತುತ ವಿದ್ಯಮಾನಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಲಾಗುತ್ತದೆ. ದೇಶದಲ್ಲಿ 'ಅತ್ಯುತ್ತಮ ಪ್ರತಿಭೆ'ಗಳನ್ನು ಹೆಕ್ಕಿ ತೆಗೆಯಲು ಅನುವಾಗುವಂತಹ ಪ್ರಶ್ನೆಪತ್ರಿಕೆಗಳನ್ನು ರೂಪಿಸುವ ಮತ್ತು ಉತ್ತರ ಪತ್ರಿಕೆಗಳನ್ನು ಅತ್ಯಂತ ಕರಾರುವಾಕ್ಕಾಗಿ ಮೌಲ್ಯಮಾಪನ ಮಾಡುವ ದಿಸೆಯಲ್ಲಿ ಅತಿ ಹೆಚ್ಚು ಜಾಗ್ರತೆ ವಹಿಸಲಾಗುತ್ತದೆ. ಪಾರದರ್ಶಕತೆ ಮತ್ತು ಗೋಪ್ಯತೆಗೆ ಸಂಬಂಧಿಸಿದ ತಕರಾರು/ಆರೋಪಗಳು ಬಂದಾಗ ಯುಪಿಎಸ್‌ಸಿ ತಕ್ಷಣವೇ ಪ್ರತಿಕ್ರಿಯಿಸುತ್ತದೆ ಮತ್ತು ಬದಲಾವಣೆಗಳನ್ನೂ ಮಾಡಿಕೊಳ್ಳುತ್ತದೆ. ಈ ಕಾರಣಕ್ಕೇ ದೇಶದಲ್ಲಿ ಮತ್ತು ದೇಶದ ಹೊರಗೂ ಯುಪಿಎಸ್‌ಸಿ ಪರೀಕ್ಷಾ ಪದ್ಧತಿಯು ಜನಪ್ರಿಯವಾಗಿದೆ.

ಆರೋಪಗಳಿಂದ ಮುಕ್ತವೇನಲ್ಲ

ಯುಪಿಎಸ್‌ಸಿ ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆ ಎಂದು ಹೆಸರಾಗಿದ್ದರೂ, ಆರೋಪಗಳಿಂದ ಮುಕ್ತವಾಗಿಯೇನೂ ಇಲ್ಲ. ಹಲವು ಆರೋಪಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದೂ ಇದೆ. ಅಭ್ಯರ್ಥಿಗಳು ನಕಲಿ ಜಾತಿ, ಆದಾಯ, ಇಡಬ್ಲ್ಯುಎಸ್ ಪ್ರಮಾಣಪತ್ರಗಳನ್ನು ಸಲ್ಲಿಸಿರುವ ಬಗ್ಗೆ ಹಲವು ಬಾರಿ ಆಪಾದನೆಗಳು ವ್ಯಕ್ತವಾಗಿವೆ.

ಯುಪಿಎಸ್‌ಸಿಗೆ ತೀವ್ರ ಮುಜುಗರ ಉಂಟುಮಾಡಿದ್ದು ಪ್ರೊಬೇಷನರಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರ ಪ್ರಕರಣ. ಐಎಎಸ್ ಹುದ್ದೆ ಗಿಟ್ಟಿಸಲು ಅಂಗವೈಕಲ್ಯಕ್ಕೆ ಮತ್ತು ಜಾತಿ–ಆದಾಯಕ್ಕೆ ಸಂಬಂಧಿಸಿ ಸುಳ್ಳು, ತಿರುಚಿದ ದಾಖಲೆಗಳನ್ನು ಸಲ್ಲಿಸಿದ ಆರೋಪ ಅವರ ಮೇಲಿತ್ತು. ಒಬಿಸಿ, ಅಂಗವಿಕಲ ಅಭ್ಯರ್ಥಿಗಳಿಗೆ ಗರಿಷ್ಠ 9 ಬಾರಿ ಪರೀಕ್ಷೆ ಬರೆಯಲು ಅವಕಾಶವಿದ್ದರೆ, ಖೇಡ್ಕರ್ 12 ಬಾರಿ ಪರೀಕ್ಷೆ ಬರೆದಿದ್ದರು. ದೇಶದಾದ್ಯಂತ ಇದು ಭಾರಿ ಸದ್ದು ಮಾಡಿದ ನಂತರ ಖೇಡ್ಕರ್ ಅವರನ್ನು ಹುದ್ದೆಯಿಂದ ವಜಾ ಮಾಡಲಾಯಿತು ಮತ್ತು ಅವರ ವಿರುದ್ಧ ವಂಚನೆ ಪ್ರಕರಣ ದಾಖಲಿಸಲಾಯಿತು.

ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ ಗುರುತು ಪತ್ತೆಗೆ ಆಧಾರ್ ಆಧಾರಿತ ಬೆರಳಚ್ಚು ದೃಢೀಕರಣ, ಮುಖ ಚಹರೆ ದೃಢೀಕರಣ ವ್ಯವಸ್ಥೆ ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾ, ಎಐ ಸಾಧನಗಳನ್ನು ಅಳವಡಿಸಿಕೊಳ್ಳಲು ಯುಪಿಎಸ್‌ಸಿ ತೀರ್ಮಾನಿಸಿತು. ಯುಪಿಎಸ್‌ಸಿ ಸುಧಾರಣೆಗೆ ಬಿ.ಎಸ್. ಬಸ್ವಾನ್ ಸಮಿತಿ ಸೇರಿದಂತೆ ಕನಿಷ್ಠ 9 ಸಮಿತಿಗಳನ್ನು ನೇಮಿಸಲಾಗಿದೆ. ಅವುಗಳ ಕೆಲವು ಶಿಫಾರಸುಗಳನ್ನು ಜಾರಿ ಮಾಡಲಾಗಿದೆ.

ಖೇಡ್ಕರ್ ಪ್ರಕರಣ ಹೊರಬಂದು, ಯುಪಿಎಸ್‌ಸಿ ಸುಧಾರಣೆಯ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ ಅಧ್ಯಕ್ಷರಾಗಿದ್ದ ಮನೋಜ್ ಸೋನಿ ಅವರು 'ವೈಯಕ್ತಿಕ ಕಾರಣ'ದ ನೆಪ ಹೇಳಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಆಪ್ತರಾಗಿದ್ದ ಸೋನಿ ಅವರ ಅಧ್ಯಕ್ಷ ಅವಧಿ 2029ರವರೆಗೂ ಇತ್ತು. ಖೇಡ್ಕರ್ ಪ್ರಕರಣವೇ ಅವರ ರಾಜೀನಾಮೆಗೆ ಕಾರಣ ಎನ್ನುವ ಮಾತುಗಳು ಕೇಳಿಬಂದಿದ್ದವು. ಭಾರತದ ಕೋಟ್ಯಂತರ ಯುವಕರ ಬದುಕಿನ ಭರವಸೆಯಾಗಿರುವ ಯುಪಿಎಸ್‌ಸಿಯ ವಿಶ್ವಾಸಾರ್ಹತೆಗೆ ಭಂಗ ಉಂಟಾಗಿದೆ ಎಂದು ವಿರೋಧ ಪಕ್ಷಗಳು ಗದ್ದಲ ಮಾಡಿದ್ದವು.

ಅಧ್ಯಕ್ಷ, ಸದಸ್ಯರ ನೇಮಕ: ರಾಜಕೀಯದಿಂದ ದೂರ

ಯುಪಿಎಸ್‌ಸಿಯು ರಾಷ್ಟ್ರಪತಿಯವರಿಗೆ ಉತ್ತರದಾಯಿಯಾಗಿರುತ್ತದೆ. ಸಾಮಾನ್ಯವಾಗಿ ಅಧ್ಯಕ್ಷ ಮತ್ತು 9 ಅಥವಾ 10 ಸದಸ್ಯರು ಇರುತ್ತಾರೆ. ಪ್ರಸ್ತುತ ಆಯೋಗವು ಅಧ್ಯಕ್ಷ ಮತ್ತು ಎಂಟು ಸದಸ್ಯರನ್ನು ಹೊಂದಿದೆ. ಕೇಂದ್ರ ಸರ್ಕಾರದ ಶಿಫಾರಸಿನ ಮೇರೆಗೆ ಇವರನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ನಿವೃತ್ತ ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್‌ನಂತಹ ಹುದ್ದೆಗಳಲ್ಲಿದ್ದವರು, ಸೇನೆಯ ನಿವೃತ್ತರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವವರೇ ಅಧ್ಯಕ್ಷ ಮತ್ತು ಸದಸ್ಯರಾಗಿ ನೇಮಕಗೊಳ್ಳುತ್ತಾ ಬಂದಿದ್ದಾರೆ.

ನಿಯಮದ ಪ್ರಕಾರ, ಒಟ್ಟು ಸದಸ್ಯರಲ್ಲಿ ಅರ್ಧದಷ್ಟು ಮಂದಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಕನಿಷ್ಠ 10 ವರ್ಷಗಳವರೆಗೆ ಕೆಲಸ ಮಾಡಿರಬೇಕು. ಈಗಿನ ಅಧ್ಯಕ್ಷರು ಮತ್ತು ಸದಸ್ಯರಲ್ಲಿ ಒಬ್ಬರನ್ನು (ದಿನೇಶ್ ದಾಸ) ಬಿಟ್ಟು ಉಳಿದ ಎಂಟು ಜನರೂ ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್, ಸೇನೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದವರು. ಈಗ ಅಧ್ಯಕ್ಷರಾಗಿರುವ ಅಜಯ್ ಕುಮಾರ್ ಅವರು ನಿವೃತ್ತ ಐಎಎಸ್ ಅಧಿಕಾರಿ.

ಇಲ್ಲಿ ಅಧ್ಯಕ್ಷ ಮತ್ತು ಸದಸ್ಯರ ನೇಮಕ ರಾಜಕೀಯದಿಂದ ಹೊರತಾಗಿರುತ್ತದೆ. ಸಾರ್ವಜನಿಕ ವ್ಯವಹಾರಗಳಲ್ಲಿ ಉತ್ತಮ ಅನುಭವ ಹೊಂದಿರುವವರನ್ನೇ ಪರಿಗಣಿಸಲಾಗುತ್ತದೆ. ನೇಮಕಾತಿ ಮಾಡುವಾಗ ದೇಶದ ಎಲ್ಲ ವಲಯಗಳನ್ನು ಪ್ರತಿನಿಧಿಸುವಂತೆ ನೋಡಿಕೊಳ್ಳಲಾಗುತ್ತದೆ. ಸದಸ್ಯರ ಅಧಿಕಾರಾವಧಿ 6 ವರ್ಷ. ನಿವೃತ್ತಿ ವಯಸ್ಸು 65 ವರ್ಷ. ಒಮ್ಮೆ ಅಧ್ಯಕ್ಷರಾದರೆ ಮತ್ತೆ ಅವರ ಮರುನೇಮಕ ಸಾಧ್ಯವಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಮತ್ತೆ ಅವರನ್ನು ಯಾವುದೇ ಹುದ್ದೆಗೆ ನೇಮಕ ಮಾಡುವ ಹಾಗಿಲ್ಲ. ಒಮ್ಮೆ ಸದಸ್ಯರಾದವರು ಮತ್ತೆ ಯುಪಿಎಸ್‌ಸಿ ಅಧ್ಯಕ್ಷ ಅಥವಾ ರಾಜ್ಯಗಳ ಲೋಕಸೇವಾ ಆಯೋಗದ ಅಧ್ಯಕ್ಷರಾಗುವುದಕ್ಕೆ ಅವಕಾಶ ಇದೆ.

ವಜಾ ಹೇಗೆ?: ಸೂಕ್ತ ಕಾರಣಗಳಿದ್ದರೆ ಅಧ್ಯಕ್ಷರು ಮತ್ತು ಸದಸ್ಯರನ್ನು ಹುದ್ದೆಯಿಂದ ವಜಾಗೊಳಿಸುವ ಅಧಿಕಾರವೂ ರಾಷ್ಟ್ರಪತಿ ಅವರಿಗಿದೆ.

ಯಾವುದೇ ನ್ಯಾಯಾಲಯವು ಅಧ್ಯಕ್ಷ ಅಥವಾ ಸದಸ್ಯ ಹುದ್ದೆಗಳಲ್ಲಿರುವ ವ್ಯಕ್ತಿ ದಿವಾಳಿ ಎಂದು ತೀರ್ಮಾನಿಸಿ ಆದೇಶ ಹೊರಡಿಸಿದರೆ, ಅಧಿಕಾರದಲ್ಲಿದ್ದಾಗ ಹೊರಗಡೆ ಬೇರೆ ಉದ್ಯೋಗಕ್ಕೆ ಸೇರಿದರೆ ಅಥವಾ ಮಾನಸಿಕ ಮತ್ತು ದೈಹಿಕ ದೌರ್ಬಲ್ಯದ ಕಾರಣಕ್ಕೆ ಅಧ್ಯಕ್ಷ ಅಥವಾ ಸದಸ್ಯರಾಗಿದ್ದವರಿಗೆ ಕರ್ತವ್ಯ ನಿರ್ವಹಿಸಲು ಸಾಧ್ಯವಿಲ್ಲ ಎಂದು ಮನವರಿಕೆಯಾದರೆ, ಅಂಥ ಅಧ್ಯಕ್ಷ/ಸದಸ್ಯರನ್ನು ರಾಷ್ಟ್ರಪತಿ ಅವರು ಹುದ್ದೆಯಿಂದ ವಜಾಗೊಳಿಸಬಹುದು. ಇದಲ್ಲದೆ, ಅವರು ದುರ್ವರ್ತನೆ ಅಥವಾ ಅಸಮರ್ಥತೆ ತೋರಿದರೆ, ಸುಪ್ರೀಂ ಕೋರ್ಟ್‌ನ ಸಲಹೆಯ ಮೇರೆಗೆ ರಾಷ್ಟ್ರಪತಿ ಅವರು ವಜಾ ಮಾಡಬಹುದು.

ಗೋಪ್ಯತೆ, ಪ್ರಾಮಾಣಿಕತೆ ಇದ್ದರೆ ಯಶಸ್ಸು

• ಪುರುಷೋತ್ತಮ ಬಿಳಿಮಲೆ



ಕೇಂದ್ರ ಲೋಕಸೇವಾ ಆಯೋಗವು ಪ್ರತಿ ವರ್ಷ ಸುಮಾರು 15 ವಿವಿಧ ವಿಷಯಗಳಿಗೆ ಸಂಬಂಧಿಸಿದ ಪರೀಕ್ಷೆಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸುತ್ತದೆ. ಪ್ರತಿ ವರ್ಷ ನಡೆಯುವ ನಾಗರಿಕ ಸೇವಾ ಪರೀಕ್ಷೆಗೆ 30 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಸಿದ್ಧತೆ ಮಾಡಿಕೊಳ್ಳುತ್ತಾರೆ. ಅದರಲ್ಲಿ ಸುಮಾರು 10 ಲಕ್ಷ ಅಭ್ಯರ್ಥಿಗಳು ಪ್ರಿಲಿಮ್ಸ್ ಪರೀಕ್ಷೆ ಬರೆಯುತ್ತಾರೆ. ಇದರಲ್ಲಿ ಮತ್ತೆ 14 ಸಾವಿರದಿಂದ 15 ಸಾವಿರ ಜನ ಮೈನ್ಸ್‌ಗೆ ಉತ್ತರ ಬರೆಯಲು ಅರ್ಹರಾಗಿ ಅಂತಿಮವಾಗಿ ಸರಿಸುಮಾರು 1,200 ಅಭ್ಯರ್ಥಿಗಳು ಉದ್ಯೋಗ ಪಡೆದುಕೊಳ್ಳುತ್ತಾರೆ.

ಪರೀಕ್ಷೆ ನಡೆಸುವವರಿಗೆ ದೇಶದ ಅತ್ಯುತ್ತಮ ಪ್ರತಿಭೆಗಳನ್ನು ಆಡಳಿತದೊಳಕ್ಕೆ ತರಬೇಕೆಂಬ ಇಚ್ಛೆ ಇರುವುದರಿಂದ ಅವರು ಅಭ್ಯರ್ಥಿಗಳ ಕಠಿಣ ಪರಿಶ್ರಮವನ್ನು ಗೌರವಿಸುವುದರ ಜೊತೆಗೆ ಅತ್ಯಂತ ನಿಷ್ಠುರವಾದ ರೀತಿಯಲ್ಲಿ ಗೋಪ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳುತ್ತಾರೆ. ಇದು ಯುಪಿಎಸ್‌ಸಿ ಯಶಸ್ಸಿನ ಮೂಲ.

ಗೋಪ್ಯತೆ ಕಾಪಾಡಿಕೊಳ್ಳುವುದೇ ಹೆಚ್ಚಿನ ಪರೀಕ್ಷೆಗಳಲ್ಲಿನ ಪ್ರಮುಖ ಸಮಸ್ಯೆ. ಇದಕ್ಕಾಗಿ ಯುಪಿಎಸ್‌ಸಿ ದೇಶದ ಎಲ್ಲ ಭಾಗಗಳಿಂದ ಅತ್ಯಂತ ಜತನದಿಂದ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ವಿದ್ವಾಂಸರನ್ನು ಆರಿಸಿಕೊಳ್ಳುತ್ತದೆ. ಅರ್ಹರನ್ನು ಸರಿಯಾದ ರೀತಿಯಲ್ಲಿ ಆಯ್ಕೆ ಮಾಡಿಕೊಂಡರೆ ಅರ್ಧ ಸಮಸ್ಯೆ ಮುಗಿದಂತೆ. ಈ ವಿದ್ವಾಂಸರು ಸಾಮಾನ್ಯವಾಗಿ ತಾವು ಯಾವ ಕೆಲಸಕ್ಕೆ ಹೋಗುತ್ತಿದ್ದೇವೆ ಎಂದು ಯಾರಿಗೂ ಹೇಳುವುದಿಲ್ಲ. ಇವರು ಅನೇಕ ಪ್ರಶ್ನೆ ಪತ್ರಿಕೆಗಳ ದೊಡ್ಡ ಸಂಗ್ರಹವನ್ನೇ ಮಾಡುತ್ತಾರೆ. ಅವುಗಳಲ್ಲಿ ಯಾವುದನ್ನು ಆಯ್ದುಕೊಂಡು ಅಭ್ಯರ್ಥಿಗಳಿಗೆ ಕೊಡುತ್ತಾರೆ ಎಂಬುದು ಪ್ರಶ್ನೆ ಪತ್ರಿಕೆ ತಯಾರು ಮಾಡಿದವರಿಗೂ ಗೊತ್ತಿರುವುದಿಲ್ಲ. ಮೌಲ್ಯಮಾಪನದಲ್ಲಿಯೂ ಅನಾಮಧೇಯ ಪದ್ಧತಿಯನ್ನು ಕಾಪಾಡಿಕೊಳ್ಳಲಾಗುತ್ತದೆ.


ಯುಪಿಎಸ್‌ಸಿ ಸಂದರ್ಶನಗಳು ಕೂಡ ಸೃಜನಶೀಲವಾಗಿರುತ್ತವೆ. ಇವು ಅಭ್ಯರ್ಥಿಯ ಪ್ರತಿಭೆ ಹೊರಗೆಳೆಯುವ ಪ್ರಾಮಾಣಿಕ ಪ್ರಯತ್ನಗಳಾಗಿರುತ್ತವೆಯೇ ವಿನಾ ನಾಲ್ಕಾರು ವರ್ಷ ಅಭ್ಯಾಸ ಮಾಡಿ ಬಂದವರನ್ನು 'ನೀನೆಷ್ಟು ದಡ್ಡ ನೋಡು' ಎಂದು ನಿರೂಪಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. ಬುದ್ಧಿವಂತನನ್ನು ದಡ್ಡ ಎಂದು ನಿರೂಪಿಸಬಲ್ಲವರು ದಡ್ಡನನ್ನು ಬುದ್ಧಿವಂತನೆಂದೂ ನಿರೂಪಿಸಬಲ್ಲವರಾದಾಗ ವ್ಯವಸ್ಥೆ ಕೆಟ್ಟು ಹೋಗುತ್ತದೆ. ಉದಾಹರಣೆಗೆ, 'ಕನ್ನಡ ಸಾಹಿತ್ಯದಲ್ಲಿ ನಿಮಗೆ ಯಾವ ಕಾಲದ ಸಾಹಿತ್ಯ ಇಷ್ಟ' ಎಂದು ಕೇಳಿದಾಗ ಅಭ್ಯರ್ಥಿಯು 'ಹೊಸಗನ್ನಡ' ಎಂದರೆ, 'ಹೊಸಗನ್ನಡದಲ್ಲಿ ನಿಮಗೆ ಯಾರು ಇಷ್ಟ' ಎಂದು ಕೇಳುತ್ತಾರೆ. ಅಭ್ಯರ್ಥಿ, 'ಕುವೆಂಪು' ಅಂದರೆ, ಮತ್ತೆ ಕುವೆಂಪು ಮೇಲೆಯೇ ಹೆಚ್ಚಿನ ಪ್ರಶ್ನೆಗಳನ್ನು ಕೇಳುತ್ತಾರೆ. ಆ ಇಡೀ ಪ್ರಕ್ರಿಯೆಯೇ ರೋಚಕವಾಗಿರುತ್ತದೆ.

ಯುಪಿಎಸ್‌ಸಿ ಸರಿಯಾದ ಜಾಗದಲ್ಲಿ ಅರ್ಹತೆ ಹೊಂದಿರುವ ಜನರನ್ನಿಟ್ಟುಕೊಂಡೇ ಪರೀಕ್ಷೆಗಳನ್ನು ನಡೆಸುತ್ತದೆ. ಆಯೋಗದ ಇನ್ನೊಂದು ಹೆಚ್ಚುಗಾರಿಕೆ ಎಂದರೆ, ಅದರಲ್ಲಿ ಇನ್ನೂ ರಾಜಕೀಯ ಸುಳಿದಿಲ್ಲ. ಅಂತಹ ಪ್ರಯತ್ನಗಳು ಕೆಲವು ನಡೆದಿದ್ದವಾದರೂ ಅಲ್ಲಿನ ವ್ಯವಸ್ಥೆ ಅದನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದೆ. 100 ವರ್ಷಗಳಿಂದ ಅದು ಸಾಗಿ ಬಂದ ಹಾದಿ ವಿವಿಧ ರಾಜ್ಯಗಳಲ್ಲಿರುವ ಲೋಕಸೇವಾ ಆಯೋಗಗಳಿಗೆ ಅತ್ಯಂತ ದೊಡ್ಡ ಮಾದರಿ. ಕೆಪಿಎಸ್‌ಸಿಯೂ ಇದೇ ಮಾದರಿಯನ್ನು ಅನುಸರಿಸಿದರೆ ಅದು ದೇಶದ ಅತ್ಯುತ್ತಮ ನೇಮಕಾತಿ ಸಂಸ್ಥೆ ಆಗುವುದರಲ್ಲಿ ಸಂದೇಹವಿಲ್ಲ.

ಲೇಖಕ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಸಂಘಟನಾತ್ಮಕ ಹೋರಾಟ ಅಗತ್ಯವಿದೆ

• ಡಿ.ವಿ.ಗುರುಪ್ರಸಾದ್



ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗೆ ಸಂಘಟನಾತ್ಮಕ ಹೋರಾಟ ಮಾಡಬೇಕು. ಗೋಕಾಕ್ ಚಳವಳಿ, ಜೆ.ಪಿ. ಚಳವಳಿ ಮಾದರಿಯಲ್ಲಿ ದೊಡ್ಡ ಆಂದೋಲನದ ಅಗತ್ಯವಿದೆ. ಆ ರೀತಿಯ ಹೋರಾಟ ನಡೆಯದೇ ಇರುವುದರಿಂದ ಅನೇಕ ವರ್ಷಗಳಿಂದ ಸಮಸ್ಯೆ ಹಾಗೆಯೇ ಉಳಿದಿದೆ.

ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾದಲ್ಲಿ ನಡೆದ ಹಾಗೆ ಯುವಕರು ಬೀದಿಗಿಳಿಯಬೇಕು. ಧಾರವಾಡ ಮತ್ತು ಕಲಬುರಗಿಯಲ್ಲಿ ಈಚೆಗೆ ನೇಮಕಾತಿಗೆ ಆಗ್ರಹಿಸಿ ಯುವಕರು ಪ್ರತಿಭಟನೆ ಮಾಡಿರುವುದು ಒಳ್ಳೆಯ ಬೆಳವಣಿಗೆ. ಇದು ಇಷ್ಟಕ್ಕೆ ನಿಲ್ಲದೆ. ದೊಡ್ಡಮಟ್ಟದಲ್ಲಿ ನಡೆಯಬೇಕು.

ಆಯೋಗದ ಅಧ್ಯಕ್ಷರು, ಸದಸ್ಯರ ವಿರುದ್ಧವೇ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಾಗ ಯಾರನ್ನು ನಂಬುವುದು? ನೇಮಕಾತಿಗಳಲ್ಲಿ ಪಾರದರ್ಶಕತೆ ಇರಬೇಕು. ಆದರೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದು ಗೊತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಸರ್ಕಾರ ತನಗೆ ಬೇಕಾದವರನ್ನು ಸದಸ್ಯರನ್ನಾಗಿ ನೇಮಕ ಮಾಡಿದರೂ ಈ ಬಗ್ಗೆ ಯಾರೊಬ್ಬರೂ ಧ್ವನಿ ಎತ್ತಲಿಲ್ಲ.

300 ಜನ ಶಾಸಕರ ಪೈಕಿ ಒಬ್ಬರೊ, ಇಬ್ಬರೊ ಕಾಟಾಚಾರಕ್ಕೆ ಮಾತನಾಡಿರಬಹುದು. ಆದರೆ, ಸಂಘಟಿತವಾಗಿ ಪ್ರಶ್ನೆ ಮಾಡುವುದು, ಪ್ರತಿಭಟನೆ ಮಾಡುವುದು ಆಗಿಲ್ಲ. ಕಾನೂನಾತ್ಮಕ ಹೋರಾಟದ ಜತೆಗೆ, ಸರ್ಕಾರದ ವಿರುದ್ಧ ಗಟ್ಟಿ ಧ್ವನಿಯಲ್ಲಿ ಹೋರಾಟ ಮಾಡಬೇಕಿತ್ತು. ಆದರೆ, ಅದೂ ಆಗಲಿಲ್ಲ. ಈಗಲಾದರೂ ಆ ಕೆಲಸವನ್ನು ಮಾಡಬೇಕು.

ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಬದಲಾವಣೆ ತರಲು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಮುಂದಾಗಿದೆ. ರಾಜ್ಯದಲ್ಲಿ ಹೋಟಾ ಸಮಿತಿಯ ವರದಿ ಹಳೆಯದಾಯಿತು. ಈಗ ಮತ್ತೊಂದು ಆಯೋಗ ಮಾಡಿ, ಅದು ನೀಡುವ ವರದಿಯನ್ನು ಜಾರಿ ಮಾಡಬಹುದು.

ಯುಪಿಎಸ್‌ಸಿಯ ಸಂದರ್ಶನ ಮಂಡಳಿಯಲ್ಲಿ ಒಬ್ಬರು ಸದಸ್ಯರಿದ್ದರೆ, ಉಳಿದವರು ಸಮಾಜದ ಬೇರೆ ಬೇರೆ ಕ್ಷೇತ್ರಗಳ ತಜ್ಞರು ಇರುತ್ತಾರೆ. ಸರಾಸರಿಗಿಂತ ಜಾಸ್ತಿ ಅಂಕ ನೀಡಿದರೆ ಅಥವಾ ಕಡಿಮೆ ನೀಡಿದರೆ ಪ್ರಶ್ನೆ ಮಾಡುತ್ತಾರೆ. ಅದಕ್ಕೆ ಕಾರಣ ಕೊಡಬೇಕಾಗುತ್ತದೆ. ಪ್ರತಿಯೊಂದರಲ್ಲೂ ಪಾರದರ್ಶಕತೆ ಮತ್ತು ಗೋಪ್ಯತೆ ಇರುತ್ತದೆ. ಯುಪಿಎಸ್‌ಸಿ ನೇಮಕ ಪ್ರಕ್ರಿಯೆ ಆರಂಭಿಸಿದ ನಂತರ ನೇಮಕಾತಿ ರದ್ದುಪಡಿಸಿದ ಉದಾಹರಣೆಯೇ ಇಲ್ಲ. ಅಷ್ಟರಮಟ್ಟಿಗೆ ವಿಶ್ವಾಸ ಉಳಿಸಿಕೊಂಡಿದೆ.

ಅಭ್ಯರ್ಥಿಯ ಜಾತಿ ಯಾವುದು, ಲಿಖಿತ ಪರೀಕ್ಷೆಯಲ್ಲಿ ಎಷ್ಟು ಅಂಕ ಪಡೆದಿದ್ದಾರೆ ಎಂಬುದು ಸಂದರ್ಶಕರಿಗೆ ಗೊತ್ತಿರುವುದಿಲ್ಲ. ಯಾವ ಅಭ್ಯರ್ಥಿ, ಯಾವ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುತ್ತಾರೆ ಎಂಬುದು ಮೊದಲೇ ಗೊತ್ತಾಗುವುದಿಲ್ಲ. ಲಾಟರಿ ಮೂಲಕ ಇದನ್ನು ನಿರ್ಧರಿಸಲಾಗುತ್ತದೆ. ಅದೇ ಮಾದರಿಯನ್ನು ಕೆಪಿಎಸ್‌ಸಿ ಅನುಸರಿಸಬೇಕು.

ಅಧ್ಯಕ್ಷರು, ಸದಸ್ಯರನ್ನು ಪಾರದರ್ಶಕವಾಗಿ ನೇಮಕ ಮಾಡಬೇಕು. ಕಾರ್ಯದರ್ಶಿಗೆ ಕನಿಷ್ಠ ಮೂರು ವರ್ಷ ಅವಧಿ ನಿಗದಿಪಡಿಸಬೇಕು. ಅವರು ಯಾರಿಗೂ ತಲೆಬಾಗಬಾರದು. ಅಲ್ಲದೆ ಅವರ ಮೇಲೂ ನಿಗಾ ಇಡಬೇಕು. ನೇಮಕಾತಿಗಳಲ್ಲಿ ಯುವ ಜನರ ಭವಿಷ್ಯ ಅಡಗಿದೆ. ಇದನ್ನು ಅರ್ಥ ಮಾಡಿಕೊಂಡು, ಪಾರದರ್ಶಕವಾಗಿ ನೇಮಕ ಪ್ರಕ್ರಿಯೆ ನಡೆಸಬೇಕು. ಇನ್ನು ಮುಂದೆ ಪ್ರತಿ ವರ್ಷ ನೇಮಕಾತಿ ಮಾಡುವುದಾಗಿ ಸರ್ಕಾರ ಹೇಳುತ್ತಿದೆ. ಆ ರೀತಿ ಆದರೆ ಒಳ್ಳೆಯದು.

ಲೇಖಕ: ನಿವೃತ್ತ ಐಪಿಎಸ್ ಅಧಿಕಾರಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


9 ಸೆಕೆಂಡುಗಳ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ತೆರೆದ ವಾಹನದಲ್ಲಿ ರೋಡ್‌ಶೋ ನಡೆಸುತ್ತಿರುವಾಗ ಜನರ ನಡುವಿನಿಂದ ವ್ಯಕ್ತಿಯೊಬ್ಬರು 'ಅಡುಗೆ ಅನಿಲ ಇಲ್ಲ ಸರ್, ನಾವು ಏನು ಮಾಡುವುದು' ಎಂದು ಹಿಂದಿಯಲ್ಲಿ ಪ್ರಶ್ನಿಸುತ್ತಿರುವುದು ಕೇಳಿಸುತ್ತದೆ. ಇದು ಒಡಿಶಾದ ರೂರ್ಕೆಲಾದಲ್ಲಿ ನಡೆದ ಘಟನೆಯ ವಿಡಿಯೊ ಎಂದು ಕೆಲವು 'ಎಕ್ಸ್' ಬಳಕೆದಾರರು ಹಂಚಿಕೊಂಡಿದ್ದಾರೆ. ಈ ವಿಡಿಯೊವನ್ನು ಹಲವರು ಬೇರೆ ಬೇರೆ ಜಾಲತಾಣ ವೇದಿಕೆಗಳಲ್ಲಿ ಹಂಚಿಕೊಂಡು, ರೋಡ್ ಶೋ ಸಮಯದಲ್ಲಿ ಜನರು ಮೋದಿ ಅವರನ್ನು ಪ್ರಶ್ನಿಸಿದ್ದಾರೆ ಎಂದೂ ಹೇಳುತ್ತಿದ್ದಾರೆ. ಆದರೆ, ಇದು ನಿಜವಲ್ಲ.



ಪ್ರಧಾನಿ ಮೋದಿ ಎನ್ನಲಾದವರ ಜೊತೆ ಇದ್ದ ಭದ್ರತಾ ಸಿಬ್ಬಂದಿ ಹಾಗೂ ಭದ್ರತಾ ವ್ಯವಸ್ಥೆಯು ಪ್ರಧಾನಿಯವರು ಸಾರ್ವಜನಿಕ ಸ್ಥಳಗಳಲ್ಲಿರುವಾಗ ಅವರ ಅಧಿಕೃತ ಭದ್ರತಾ ವ್ಯವಸ್ಥೆಗಿಂತ ಭಿನ್ನವಾಗಿ ಕಂಡಿತು. ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಗೂಗಲ್‌ನಲ್ಲಿ ಹುಡುಕಿದಾಗ ಇನ್‌ಸ್ಟಾಗ್ರಾಂ ರೀಲ್ ಒಂದು ಸಿಕ್ಕಿತು. ಅದು ರೂರ್ಕೆಲಾದಲ್ಲಿ ಚಿತ್ರೀಕರಿಸಲಾಗಿದ್ದ ವಿಡಿಯೋ ಆಗಿದ್ದು, ಅದರಲ್ಲಿ ಪ್ರಧಾನಿ ಮೋದಿ ಅವರನ್ನೇ ಹೋಲುವ ವ್ಯಕ್ತಿ ಇದ್ದರು. ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿದ್ದರಲ್ಲದೇ, ಮೋದಿ ಅವರನ್ನೇ ಹೋಲುವ ವ್ಯಕ್ತಿ ಇರುವುದನ್ನು ಪ್ರಸ್ತಾಪಿಸಿದ್ದರು. ಇನ್ನಷ್ಟು ಪರಿಶೀಲನೆ ನಡೆಸಿದಾಗ, ಆ ವಿಡಿಯೊ ರೂರ್ಕೆಲಾದ್ದು ಎಂಬುದು ಖಚಿತವಾಯಿತು. ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ ಒಡಿಶಾದ ಕಳಿಂಗ ಟಿವಿಯ ಯೂಟ್ಯೂಬ್ ಚಾನೆಲ್‌ನಲ್ಲಿ 2025ರ ಸೆ.27ರಂದು ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. ಅದರಲ್ಲಿ ಮೋದಿ ಅವರನ್ನೇ ಹೋಲುವ ಸದಾನಂದ ನಾಯ್ಕ್ ಎಂಬವರನ್ನು ಸಂದರ್ಶಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು 2025ರ ಸೆಪ್ಟೆಂಬರ್ 27ರಂದು ಕೊನೆಯ ಬಾರಿ ಒಡಿಶಾಕ್ಕೆ ಭೇಟಿ ನೀಡಿದ್ದರು. ಝಾರ್ಸುಗುಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ ಭಾಗವಹಿಸಿದ್ದರು. ಆ ಬಳಿಕ ಅವರು ಒಡಿಶಾಕ್ಕೆ ಭೇಟಿ ನೀಡಿಲ್ಲ. ಈಗ ಹರಿದಾಡುತ್ತಿರುವ ವಿಡಿಯೊದಲ್ಲಿ ಇರುವುದು ಮೋದಿ ಅವರಲ್ಲ, ಅವರನ್ನೇ ಹೋಲುವ ಸದಾನಂದ ನಾಯ್ಕ್ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಆತ್ಮಮೋಹವೆಂಬ ರೋಗ

ನುಡಿ ಬೆಳಗು



ರೇಣುಕಾ ನಿಡಗುಂದಿ

ಗ್ರೀಕ್ ಪುರಾಣದಲ್ಲಿ ಒಂದು ಕತೆಯಿದೆ. ನಾರ್ಸಿಸಸ್ ಒಬ್ಬ ಸುಂದರ ಯುವಕನಾಗಿದ್ದ. ಅವನು ನದಿಯ ದೇವತೆ ಲಿರಿಯೋಪ್ ಮತ್ತು ದೇವತೆಯಾದ ಕೆಫಿಸಸ್‌ನ ಮಗನಾಗಿದ್ದ. ಅವನ ಸೌಂದರ್ಯವು ಎಲ್ಲರನ್ನೂ ಆಕರ್ಷಿಸುತ್ತಿತ್ತು. ಆದರೆ, ಅವನು ಯಾರ ಮೇಲೂ ಪ್ರೀತಿಯನ್ನು ತೋರಿಸುತ್ತಿದ್ದಿಲ್ಲ. ಜನರು ಅವನ ಸೌಂದರ್ಯಕ್ಕೆ ಮಾರುಹೋಗಿ ಅವನಲ್ಲಿ ಅನುರಕ್ತರಾಗುತ್ತಿದ್ದರು, ಪ್ರೀತಿಯಲ್ಲಿ ಬೀಳುತ್ತಿದ್ದರು. ಆದರೆ, ನಾರ್ಸಿಸಸ್ ಎಲ್ಲರನ್ನೂ ತಿರಸ್ಕರಿಸುತ್ತಿದ್ದ. ಇದರಿಂದ ಕುಪಿತಳಾದ ಪ್ರತೀಕಾರದ ದೇವತೆ ನೆಮೆಸಿಸ್ ಅವನಿಗೆ ಶಾಪ ಹಾಕುತ್ತಾಳೆ: 'ನೀನು ನಿನ್ನ ಸ್ವಂತ ಸೌಂದರ್ಯದಲ್ಲಿ ಸ್ವಮೋಹದಲ್ಲಿ ಪ್ರೀತಿಯನ್ನು ಕಂಡುಕೋ. ಆದರೆ ನೀನದನ್ನು ಎಂದಿಗೂ ಪಡೆಯಲಾಗದು'.

ಎಕೊ ಎಂಬ ನಿಮ್ಫ್ ನಾರ್ಸಿಸಸ್‌ನ ಮೇಲೆ ಗಾಢವಾದ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾಳೆ. ಆದರೆ, ಎಕೊಗೆ ತನ್ನದೇ ಆದ ಮಾತುಗಳನ್ನು ರೂಪಿಸಲಾಗದ ಶಾಪವಿತ್ತು; ಆಕೆ ಇತರರ ಮಾತುಗಳನ್ನು ಮಾತ್ರ ಪುನರಾವರ್ತಿಸಬಹುದಿತ್ತು. ನಾರ್ಸಿಸಸ್ ಎಕೊನ ಪ್ರೀತಿಯನ್ನು ತಿರಸ್ಕರಿಸಿದನು. ಇದರಿಂದ ಎಕೊ ದುಃಖಿತಳಾಗಿ ಅಲ್ಲಿಂದ ಕಣ್ಮರೆಯಾಗುತ್ತಾಳೆ. ಆಕೆಯ ಧ್ವನಿಯು ಪರ್ವತಗಳಲ್ಲಿ ಕೇವಲ ಪ್ರತಿಧ್ವನಿಯಾಗಿ ಮೊಳಗುವಂತಾಯಿತು.

ಒಂದು ದಿನ ನಾರ್ಸಿಸಸ್ ಒಂದು ತಿಳಿನೀರಿನ ಕೊಳದ ಬಳಿ ಬರುತ್ತಾನೆ. ಕೊಳದ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಂಡು, ಅದರ ಸೌಂದರ್ಯಕ್ಕೆ ಮಾರುಹೋಗಿ, ತಾನೇ ತನ್ನ ಪ್ರತಿಬಿಂಬದ ಪ್ರೀತಿಯಲ್ಲಿ ಬೀಳುತ್ತಾನೆ. ಹೀಗೆ ನಾರ್ಸಿಸಸ್ ತನ್ನ ಪ್ರತಿಬಿಂಬವನ್ನು ಸ್ಪರ್ಶಿಸಲಾಗದೆ, ತನ್ನ ಪ್ರೀತಿಯನ್ನು ಪಡೆಯಲಾಗದೆ ದುಃಖದಿಂದ ಬಳಲಿದನು. ಅಂತಿಮವಾಗಿ ತನ್ನ ಸ್ವಂತ ಪ್ರತಿಬಿಂಬದಿಂದ ಬೇರ್ಪಡಲಾಗದೆ, ಸ್ವಮೋಹದಿಂದ ಅಗಲಿರಲಾರದೇ ಅವನು ಕೊಳದ ಬಳಿಯೇ ಕುಸಿದು ಸತ್ತನು. ನಾರ್ಸಿಸಸ್ ಸತ್ತ ಸ್ಥಳದಲ್ಲಿ, ಒಂದು ಸುಂದರವಾದ ಹೂವು ಮೊಳೆಯಿತು, ಇದನ್ನು ಇಂದು 'ನಾರ್ಸಿಸಸ್' (Daffodil) ಹೂವು ಎಂದು ಕರೆಯಲಾಗುತ್ತದೆ. ಈ ಹೂವು ಅವನ ಸೌಂದರ್ಯ ಮತ್ತು ದುರಂತದ ಸಂಕೇತವಾಯಿತು ಎನ್ನುತ್ತಾರೆ.

ಅತಿಯಾದ ಆತ್ಮಮೋಹ ಅಥವಾ ಸ್ವ-ಕೇಂದ್ರಿತತೆಯ (ನಾರ್ಸಿಸಿಸಂ) ಒಂಟಿತನ, ದುಃಖ ಹಾಗೂ ಆತ್ಮವಿನಾಶಕ್ಕೆ ಕಾರಣವಾಗಬಹುದು. ನಮ್ಮ ಹೆತ್ತವರು, ಸ್ನೇಹಿತರು ನಮ್ಮ ಮೇಲೆ ತೋರುವ ಪ್ರೀತಿಯ ಮೌಲ್ಯ ಅರಿಯದೇ ಅವರನ್ನು ನೋಯಿಸಿ, ಅವಮಾನಿಸಿ ಯಾವ ಸುಖವನ್ನೂ ಪಡೆಯಲಾಗದು. ಇತರರ ಮೇಲಿನ ಪ್ರೀತಿ ಮತ್ತು ಕರುಣೆಯನ್ನು ತಿರಸ್ಕರಿಸುವುದು ದುರಂತಕ್ಕೆ ದಾರಿಮಾಡುತ್ತದೆ.

ನಮ್ಮ ಸುತ್ತಲೂ ಇಂತಹ ಸ್ವಕೇಂದ್ರಿತ ಆತ್ಮಮೋಹಿಗಳನ್ನು ನೋಡುತ್ತಿರುತ್ತೇವೆ. ಅವರಿಗೆ ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಯಾವ ಚಿಂತೆಯೂ ಇರುವುದಿಲ್ಲ. ತಾವಷ್ಟೇ ಚೆನ್ನಾಗಿರಬೇಕು, ಚೆನ್ನಾಗಿ ಪೋಷಾಕನ್ನು ಧರಿಸಬೇಕು, ಒಳ್ಳೆಯದೆಲ್ಲವೂ ತನ್ನ ಬಳಿಯಿರಬೇಕು, ಉತ್ಕೃಷ್ಟವಾದುದನ್ನೆಲ್ಲ ತಾನೇ ತಿನ್ನಬೇಕು, ಅನುಭವಿಸಬೇಕು ಎಂಬಂತಹ ಗುಣಗಳಿರುತ್ತವೆ. ಚಿಕ್ಕ ಮಗು ಇದೇ ಬೇಕು ಎಂದು ಹಟ ಮಾಡಿದ್ದನ್ನೆಲ್ಲ ಕೊಡಿಸುವ ಪೋಷಕರಿದ್ದಾರೆ. ಮಗುವಿಗೆ ತಾನೇ ಕೇಂದ್ರಬಿಂದು, ಎಲ್ಲರ ಗಮನ, ಎಲ್ಲರ ಪ್ರೀತಿ, ಉಪಚಾರ, ಮುದ್ದು ಎಲ್ಲವೂ ತನಗಷ್ಟೇ ಇರಬೇಕು ಎನ್ನುವ ಸ್ವಾರ್ಥಕೇಂದ್ರಿತ ಮನಸ್ಸಿರುವುದು ಸಹಜ ಮತ್ತು ಸ್ವಾಭಾವಿಕ ಗುಣ. ಆದರೆ ಅದೇ ಬೆಳೆದು ದೊಡ್ಡವರಾದ ಮೇಲೂ ಈ ಗುಣ ಉಳಿದುಕೊಂಡರೆ ಬದುಕು ಬಹಳ ದುಸ್ತರವಾಗುತ್ತದೆ. ಅದೇ ಒಂದು ರೋಗ. ಈ ಆತ್ಮಮೋಹದೊಂದಿಗೆ ಸ್ವಮರುಕವೂ ಸೇರಿಕೊಂಡರೆ ಮನುಷ್ಯ ಯಾವತ್ತೂ ನೆಮ್ಮದಿಯಿಂದಿರಲು ಸಾಧ್ಯವಿಲ್ಲ.

ಗುಂಡಣ್ಣ



ಪದಬಂಧ 6362

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ಪರಿ ಬಂದಿರುವ ಸುತ್ತಲಿನ ಜನ (4)
3.ಅದೃಷ್ಟವಿಲ್ಲದ ದುರ್ದೈವಿ (4)
5.ಪಟ್ಟಾಗಿ ಕುಳಿತು ವಾಚನ ಮಾಡು (3)
6.ಮೆಚ್ಚುಗೆಗೆ ಪಾತ್ರನಾದವನು (4)
8.ಸಂಪ್ರದಾಯವನ್ನು ಆಚರಿಸುವವನು ಇಲ್ಲಿದ್ದಾನೆ (4)
10.ಇದು ಬೇರೆಯವರ ಹಣ (4)
12.ಕವಲುದಾರಿಯಲ್ಲಿ ಕಾಣಿಸಿದ್ದು ಸವೆದು ಹೋದುದು! (4)
13.ಅನೇಕ ಮನೆಗಳುಳ್ಳ ಆವಾರ (3)
16.ಜೈನ ತೀರ್ಥಂಕರನಿವನು (4)
17.ತಿರುಪೆ ಬೇಡುವವ ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ

1.ಪರೋಕ್ಷದಲ್ಲೇ ಹದಿನೈದು ದಿನಗಳ ಅವಧಿ ಇದೆ! (2)
2.ಪುಸ್ತಕದ ಮೇಲುಹೊದಿಕೆ (4)
3.ಆಗ ತಾನೇ ಅರಳಿರುವ ಪುಷ್ಪ (4)
4.ತಿರುಗಿದಾಗಲೇ ಇದು ತೊಂದರೆ! (2)
7.ತೀರದಲ್ಲಿ ಅಂಧಕಾರ (3)
9.ಮೋಸಗಾರ ಇಲ್ಲಿದ್ದಾನೆ (3)
11.ಕೆನೆಕಡೆದು ಹೊಸದಾಗಿ ತೆಗೆದ ಬೆಣ್ಣೆ (4)
12.ಈಕೆ ವಿದ್ಯಾಧಿದೇವತೆ (4)
14.ತಿರುಗಿರುವ ಸಹೋದರ (2)
15.ಅಗ್ನಿ ಇಲ್ಲಿ ಕಾಣಿಸುತ್ತಿದೆಯಲ್ಲಾ? (2)

1			2	■	3			4
	■	■		■		■	■	
■	■	■	5			■	■	■
6	7			■	8		9	
■		■	■	■	■	■		■
10			11	■	12			
■	■	■	13			■	■	■
14	■	■		■		■	■	15
16				■	17			

6361ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭ್ರಮನಿರಸನ 4.ಗುಣಾಕಾರ 5.ಚಾಣಾಕ್ಷ 8.ಜನುಮ 11.ನದಮ 13.ಗಟಾರ 14.ಕನ್ನಡಕ 16.ವಿಗ್ರಹಾರಾಧನೆ

ಮೇಲಿಂದ ಕೆಳಕ್ಕೆ: 1.ಭ್ರಷ್ಟಾಚಾರ 2.ನಗು 3.ವರಸಾಮ್ಯ 6.ಕ್ಷಮಾದಾನ 7.ಗಜಗಮನ 9.ಮದುಮಗ 10.ಪರಿಕರ 12.ಅರಮನೆ 15.ಕವಿ

ಸುಡೊಕು 6745

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		7					5	4
			4	5	9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ತಪ್ಪಾಗಿ ಪ್ರಕಟಗೊಂಡಿದ್ದ ಸುಡೊಕು 6745 ಅನ್ನು ಸರಿಪಡಿಸಲಾಗಿದೆ.

6744 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಏಪ್ರಿಲ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪ್ರತಿಪದ್ ಗಂ. 8-43 ನಕ್ಷತ್ರ: ಚಿತ್ತಾ ಗಂ. 19-25 ಯೋಗ: ವ್ಯಾಘಾತ ಗಂ. 14-09 ಕರಣ: ಕೌಲವ ಗಂ 8-43 ಮೀನ ಮಾಸದ 19 ನೇ ದಿನ. ಮಳೆ ನಕ್ಷತ್ರ : ರೇವತಿ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-28 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 14 ಶವ್ವಾಲ್, ದಿನ ವಿಶೇಷ : ಗುಡ್ ಫ್ರೈಡೆ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 3, 7.

ಮೇಷ: ವಿಭಿನ್ನ ರೀತಿಯ ಕೆಲಸವೊಂದನ್ನು ವೃತ್ತಿ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ. ಎಣ್ಣೆ ಮತ್ತು ಬೇಳೆಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಚರ್ಮ ರೋಗಗಳು ಬರಬಹುದು.

ವೃಷಭ: ಅಗತ್ಯವಿಲ್ಲದ ವಿಚಾರಗಳ ಬಗ್ಗೆ ಮಾತನಾಡುವುದಾಗಲೀ ಅಥವಾ ಸಲಹೆ ನೀಡುವುದಾಗಲೀ ಸರಿಯಲ್ಲ. ರೈತರಿಗೆ ಹಾಗೂ ವಿದ್ಯಾರ್ಥಿ ವರ್ಗಕ್ಕೆ ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು.

ಮಿಥುನ: ಜೀವನ ನಡೆಸಲು ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಕುಟುಂಬದ ಗಣ್ಯರಿಂದ ಬದುಕಿನ ದಾರಿಯ ಬಗ್ಗೆ ಮಾರ್ಗದರ್ಶನ ಸಿಗಲಿದೆ. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿರುವುದು.

ಕರ್ಕಾಟಕ: ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವುದರಿಂದ ಗುರಿ ತಲುಪಲು ಸುಲಭವಾಗುವುದು. ಭಾವನೆಗಳಿಗೆ ಬೆಲೆಕೊಡುವ ಸಹಚರರನ್ನು ಹೊಂದುವಿರಿ. ಸಾಧನೆಯಲ್ಲಿ ಮೇಲುಗೈ ನಿಮ್ಮದಾಗಿರುವುದು.

ಸಿಂಹ: ವೃತ್ತಿಯ ಬದುಕಿನಲ್ಲಿ ಬೆಳಕಿಗೆ ಬರಲು ಅನುಕೂಲವಾಗಿರುವ ಮುಖ್ಯ ಸಲಹೆಯೊಂದನ್ನು ಪಡೆಯಲಿದ್ದೀರಿ. ಔದಾರ್ಯತನ ತೋರಬೇಕೆನಿಸಿದ್ದಲ್ಲಿ ಹಣಕಾಸಿನ ಸ್ಥಿತಿ ಗಮನಿಸಿಕೊಳ್ಳಿ.

ಕನ್ಯಾ: ತೈಲ ವ್ಯಾಪಾರ ವ್ಯವಹಾರಗಳಲ್ಲಿ ಪೈಪೋಟಿಗಳು ಹೆಚ್ಚಿದ್ದರೂ, ನಿಮ್ಮ ಯೋಚನೆಗೆ ಸರಿಯಾದ ತೃಪ್ತಿಕರ ಆದಾಯವಿರುವುದು. ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ.

ತುಲಾ: ವಾಹನಗಳ ಅಥವಾ ಯಂತ್ರೋಪಕರಣಗಳ ಬಿಡಿ ಭಾಗಗಳ ಮಾರಾಟಗಳಿಂದ ಲಾಭ. ಜೀವನದಲ್ಲಿ ಅತಿಯಾಗಿ ನಂಬುವ ವ್ಯಕ್ತಿ ಜತೆ ಸಮಯ ಕಳೆಯುವಿರಿ.

ವೃಶ್ಚಿಕ: ಕೈಗೊಂಡ ಸಂಸ್ಥೆಯ ಅಥವಾ ವೈಯಕ್ತಿಕ ಅಭಿವೃದ್ಧಿಯ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಶ್ರಮವು ಮುಂದಿನ ದಿನಗಳಿಗೆ ಅಡಿಪಾಯವಾಗಿ ಪರಿಣಮಿಸಲಿದೆ.

ಧನು: ಗುರು-ಹಿರಿಯರ ನಂಬಿಕೆ ಉಳಿಸಿಕೊಂಡು ಹೋಗುವ ಬಗ್ಗೆ ಗಮನವಿರಲಿ. ಯಾವುದೇ ಬದಲಾವಣೆಗೂ ಸೂಕ್ತ ಕಾಲ. ಹಂತ ಹಂತವಾಗಿ ಕುಟುಂಬದಲ್ಲಿ ನೆಮ್ಮದಿ ಕಾಣುವಿರಿ.

ಮಕರ: ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ಮನದಟ್ಟಾಗಿದೆ. ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ವರ್ತಮಾನವನ್ನು ವಿಶ್ಲೇಷಿಸಿ.

ಕುಂಭ: ಒಡಹುಟ್ಟಿದವರ ಮಾತುಗಳು ಮನಸ್ಸನ್ನು ಹಾಳುಮಾಡಬಹುದು. ಆತ್ಮೀಯರೊಂದಿಗೆ ಮನೆಯಲ್ಲಿ ನಡೆಯಬೇಕಾಗಿರುವ ಶುಭ ಕಾರ್ಯದ ಬಗ್ಗೆ ಮಾತುಕತೆ ನಡೆಸಿ. ಗಣೇಶನ ಧ್ಯಾನ ಶುಭತರಲಿದೆ.

ಮೀನ: ಕುಟುಂಬ ಸದಸ್ಯರಲ್ಲಿ ಮೂಡಿರುವ ಮನಸ್ತಾಪವನ್ನು ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ಅಕ್ಕ ಪಕ್ಕದಲ್ಲಿನ ಭಿನ್ನಾಭಿಪ್ರಾಯಗಳಿಗೆ ಪ್ರತಿಕ್ರಿಯಿಸುವುದು ಸಮಂಜಸವಲ್ಲ.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 16022026-270184
CG-DL-E- 16022026-270184
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. 760] नई दिल्ली, सोमवार, फरवरी 16, 2026 / माघ 27, 1947
No. 760] NEW DELHI, MONDAY, FEBRUARY 16, 2026 / MAGHA 27, 1947

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ
ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

ಕೆ.ಬಿ.ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ (ರಾಷ್ಟ್ರೀಯ ಹೆದ್ದಾರಿ 150ಎ)
ತುಮಕೂರು ಜಿಲ್ಲೆ, ತುಮಕೂರು.

ಸಾರ್ವಜನಿಕ ಪ್ರಕಟಣೆ

(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ. 798(ಇ), ದಿನಾಂಕ: 16.02.2026 – ಅಧಿಸೂಚನೆ ಸಂಖ್ಯೆ : **ಎಸ್.ಓ. ನಂ. 1437(ಇ) ದಿನಾಂಕ: 26.03.2025**ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎರಲ್ಲಿನ stretch of land from Km. Design Ch. 485+240 Km (Existing Km 494.000) to Design Ch. 523+393 Km (Existing km 533.152) & From Design Ch. 530+393 (Existing Km 540.175) to Design Ch.534+476 (Existing Km 544.200** (ಕೆ.ಬಿ.ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ) ರವರೆಗೆ **ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ** ಮಾಡುವ ಸಲುವಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ದಿ ಟೈಮ್ಸ್ ಆಫ್ ಇಂಡಿಯಾ" ಮತ್ತು "ಪ್ರಜಾವಾಣಿ" ದಿನಪತ್ರಿಕೆಗಳಲ್ಲಿ ದಿನಾಂಕ : 09.04.2025** ರ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ.

ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1. 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮಗಳ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರ ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ, ಕುಂದೂರು **ತುರುವೇಕೆರೆ ತಾಲ್ಲೂಕು** ಬಾಣಸಂದ್ರ (ಕುಣಸಂದ್ರ), ಮಂಚೇನಹಳ್ಳಿ, ಕುಣಿಕೇನಹಳ್ಳಿ, ಲೊಕ್ಕಮ್ಮನಹಳ್ಳಿ, ಚೌಡೇನಹಳ್ಳಿ, ತುರುವೇಕೆರೆ ಅಮಾನಿಕೆರೆ, ಬಿಡಿಸ್ವಾಸ್ತಿ, ತಾವರೇಕೆರೆ, ಅರಳೀಕೆರೆ, ಕಳ್ಳನಕೆರೆ, ಸಂಗಲಾಪುರ, ಚಿಕ್ಕೋನಹಳ್ಳಿ, ಬೊಮ್ಮೇನಹಳ್ಳಿ, ಕೋಡಿನಾಗಸಂದ್ರ, ಮಾಯಸಂದ್ರ, ಚಿಕ್ಕಶೆಟ್ಟಿಕೆರೆ, ದೊಡ್ಡಶೆಟ್ಟಿಕೆರೆ, ಧನಯನಕನಪುರ ಕಾವಲ್, ಹರಿದಾಸನಹಳ್ಳಿ.	**15-04-2026** ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆವರೆಗೆ	ಪಿಡಬ್ಲ್ಯೂಡಿ ಪ್ರವಾಸಿ ಮಂದಿರ ತುರುವೇಕೆರೆ

ಸಹಿ/-
ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
ರಾಷ್ಟ್ರೀಯ ಹೆದ್ದಾರಿ ಘಟಕ, ತುಮಕೂರು
ಇಂಪನಾ ಆರ್ಕೇಡ್, 8ನೇ ಕ್ರಾಸ್,
ಉಪ್ಪಾರಹಳ್ಳಿ ಮೈನ್ ರೋಡ್, ತುಮಕೂರು – 572102.

ಷೆಡ್ಯೂಲ್

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎ ರಲ್ಲಿನ stretch of land from Km. Design Ch. 485+240 Km (Existing Km 494.000) to Design Ch. 523+393 Km (Existing km 533.152) & From Design Ch. 530+393 (Existing Km 540.175) to Design Ch.534+476 (Existing Km 544.200 (ಕೆ.ಬಿ. ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ) ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯದ : ಕರ್ನಾಟಕ **ಜಿಲ್ಲೆಯ ಹೆಸರು : ತುಮಕೂರು**

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು : ತಿಪಟೂರು					
ಗ್ರಾಮದ ಹೆಸರು : ಕಿಬ್ಬನಹಳ್ಳಿ					
1	34/4	ಸಾಮಾನ್ಯ (ಖಾಸಗಿ/ ಸರ್ಕಾರಿ)	ಖುಷ್ಕಿ	0.1821	ರಮೇಶ್ ಬಾಬು ಬಿನ್ ಶ್ರೀನಿವಾಸ ನಾಯ್ಡು ಭೂ.ಪ ಕಾವೇರಿ ನೀರಾವರಿ ನಿಗಮಕ್ಕೆ ಭೂಸ್ವಾಧೀನ
ಗ್ರಾಮದ ಹೆಸರು : ಕುಂದೂರು					
2	67/3	ಖಾಸಗಿ	ಖುಷ್ಕಿ	0.0075	ಕೆ.ಜೆ.ಗೋವಿಂದರಾಜು ಬಿನ್ ಲೇಟ್ ಜವರಪ್ಪ ಉರ್ಫ್ ಜವರೇಗೌಡ
3	67/7	ಖಾಸಗಿ	ಖುಷ್ಕಿ	0.02	ಬಿ.ಆರ್. ಶಿವಶಂಕರಯ್ಯ ಬಿನ್ ರಂಗಪ್ಪ
4	69/3	ಖಾಸಗಿ	ಖುಷ್ಕಿ	0.2075	ರಘುಪತಿಗೌಡ ಬಿನ್ ಕಜ್ಜೀರಂಗೇಗೌಡ
5	69/4	ಖಾಸಗಿ	ಖುಷ್ಕಿ	0.07	ರಮೇಶ್ ಬಿನ್ ಶಿವಣ್ಣ
6	88/3ಎ1	ಖಾಸಗಿ	ಖುಷ್ಕಿ	0.025	ಬಿ.ಆರ್.ಶಿವಶಂಕರಯ್ಯ ಬಿನ್ ರಂಗಪ್ಪ, ಮಮತಾ ಕೋಂ ರಾಮಚಂದ್ರಯ್ಯ
7	88/3ಎ2	ಖಾಸಗಿ	ಖುಷ್ಕಿ	0.165	ಕೆ.ಜೆ. ರಾಮೇಗೌಡ ಬಿನ್ ಜವರಪ್ಪ
8	88/3ಎ3	ಖಾಸಗಿ	ಖುಷ್ಕಿ	0.025	ಕೆ.ಜೆ.ಗೋವಿಂದರಾಜು ಬಿನ್ ಜವರಪ್ಪ
ತಾಲ್ಲೂಕು : ತುರುವೇಕೆರೆ					
ಗ್ರಾಮದ ಹೆಸರು : ಬಾಣಸಂದ್ರ (ಕುಣಸಂದ್ರ)					
9	100/1	ಖಾಸಗಿ	ಖುಷ್ಕಿ	0.64	ರಂಗೇಗೌಡ ಬಿನ್ ಶೇಷೇಗೌಡ, ರಾಮೇಗೌಡ ಬಿನ್ ಬುಡ್ಡರಂಗೇಗೌಡ, ಕೃಷ್ಣೇಗೌಡ ಬಿನ್ ಸಣ್ಣಪುಲ್ಲೇಗೌಡ, ಲಕ್ಕಣ್ಣಗೌಡ ಬಿನ್ ಲೇಟ್ ಹುಚ್ಚೇಗೌಡ, ರಂಗೇಗೌಡ ಬಿನ್ ರಂಗೇಗೌಡ, ರಂಗೇಗೌಡ ಬಿನ್ ಚನ್ನೇಗೌಡ, ರತ್ನಾ ಕೋಂ ಬಿ.ಎಚ್. ಲಕ್ಷ್ಮಣಗೌಡ, ನಾಗರತ್ನಮ್ಮ ಲೇಟ್ ಬಿ.ಆರ್.ರಂಗೇಗೌಡ, ಬಿ.ಎಚ್.ರೇಖಾ ಬಿನ್ ಲೇಟ್ ಹನುಮೇಗೌಡ, ಮಂಜುಳಾ ಕೋಂ ಲೇಟ್ ರಂಗೇಗೌಡ, ಶೇಷೇಗೌಡ ಬಿನ್ ರಘುಪತಿಗೌಡ, ರಘುಪತಿಗೌಡ, ಜಗದೀಶಯ್ಯ, ರಂಗ ಬಿನ್ ಕೂಪ, ಚೆನ್ನ, ರಂಗ ಬಿನ್ ಚನ್ನೇಗೌಡ, ಸರ್ವೇಗಾರ ರಂಗೇಗೌಡ, ಶಿವಮ್ಮ ಕೋಂ ಲೇಟ್ ಬಿ.ಆರ್. ರಾಮೇಗೌಡ, ಅನಂತರಾಮೇಗೌಡ ಬಿನ್ ಲೇಟ್ ಜವರೇಗೌಡ, ಲಲಿತಾ ಕೋಂ ಲೇಟ್ ನಂಜೇಗೌಡ, ಹೊನ್ನೇಗೌಡ ಬಿನ್ ಲೇಟ್ ಜವರೇಗೌಡ, ಬಿ.ಆರ್. ಪುಟ್ಟೇಗೌಡ ಬಿನ್ ಲೇಟ್ ರಂಗೇಗೌಡ
10	100/5	ಖಾಸಗಿ	ಖುಷ್ಕಿ	0.135	ಜಯಮ್ಮ ಕೋಂ ಲೇಟ್ ಬಿ ಆರ್ ರಾಮಚಂದ್ರೇಗೌಡ
11	114/3	ಖಾಸಗಿ	ಖುಷ್ಕಿ	0.0325	ಬಿ.ಆರ್ ತಿಮ್ಮೇಗೌಡ ಬಿನ್ ರಾಯಪ್ಪಗೌಡ, ಶುಶೀಲಮ್ಮ ಕೋಂ ಗೋವಿಂದಯ್ಯ, ಬಿ.ಆರ್ ಕೃಷ್ಣ ಬಿನ್ ಲೇಟ್ ರಘುಪತಿಗೌಡ, ಹೊನ್ನೇಗೌಡ ಬಿನ್ ಲೇಟ್ ರಘುಪತಿಗೌಡ
12	115/1	ಖಾಸಗಿ	ಖುಷ್ಕಿ	0.02	ಹರಿಣಿ ಕೋಂ ಶೇಷೇಗೌಡ, ವೀಣಾ ಕೋಂ ಪಾಂಡುರಂಗೇಗೌಡ
13	115/2ಎ	ಖಾಸಗಿ	ಖುಷ್ಕಿ	0.2575	ರಂಗೇಗೌಡ ಬಿನ್ ಲೇಟ್ ಜವರೇಗೌಡ
14	115/2ಬಿ	ಖಾಸಗಿ	ಖುಷ್ಕಿ	0.11	ಕಾವೇರಿ ನೀರಾವರಿ ನಿಗಮ, ರಂಗಮ್ಮ, ನಂಜಯ್ಯ, ಹೊನ್ನೇಗೌಡ ಬಿನ್ ಲೇಟ್ ಸಿ.ಗೋವಿಂದಯ್ಯ, ಚಿಕ್ಕಣ್ಣ
15	117/1ಬಿ	ಖಾಸಗಿ	ಖುಷ್ಕಿ	0.12	ತಿಮ್ಮೇಗೌಡ ಬಿನ್ ಲೇಟ್ ಮೂಡ್ಲಿಗಿರಿಗೌಡ
16	117/2	ಖಾಸಗಿ	ಖುಷ್ಕಿ	0.005	ಶಿವಮ್ಮ ಕೋಂ ಬಿ ಟಿ ಲಕ್ಷ್ಮಣಗೌಡ
17	117/3	ಖಾಸಗಿ	ಖುಷ್ಕಿ	0.035	ಜಯಮ್ಮ ಕೋಂ ಬಿ ಟಿ ಪಾಂಡುರಂಗೇಗೌಡ
18	117/4	ಖಾಸಗಿ	ಖುಷ್ಕಿ	0.1125	ಶಿವಮ್ಮ ಕೋಂ ಬಿ ಟಿ ಲಕ್ಷ್ಮಣಗೌಡ, ಜಯಮ್ಮ ಕೋಂ ಬಿ ಟಿ ಪಾಂಡುರಂಗೇಗೌಡ
19	117/5	ಖಾಸಗಿ	ಖುಷ್ಕಿ	0.025	ಎಚ್.ಮೋಹನಕುಮಾರ್ ಬಿನ್ ಬಿ.ಜಿ.ಹೊನ್ನೇಗೌಡ
20	121/5ಬಿ	ಖಾಸಗಿ	ಖುಷ್ಕಿ	0.135	ಜಯಮ್ಮ ಕೋಂ ಶ್ರೀರಂಗಯ್ಯ
21	121/6	ಖಾಸಗಿ	ಖುಷ್ಕಿ	0.105	ಬಿ.ಆರ್ ವಿಜಯಕುಮಾರ್ ಬಿನ್ ರಂಗೇಗೌಡ ಉರ್ಫ್ ಮೋಟೇಗೌಡ
22	122	ಖಾಸಗಿ	ಖುಷ್ಕಿ	0.195	ಶ್ರೀ ಆಂಜನೇಯ ಸ್ವಾಮಿ ಏಣಂತಿ
23	123	ಖಾಸಗಿ	ಖುಷ್ಕಿ	0.035	ಶ್ರೀ ಆಂಜನೇಯ ಸ್ವಾಮಿ ಏಣಂತಿ
24	138	ಖಾಸಗಿ	ಖುಷ್ಕಿ	0.255	ಬಿ.ಕೆ ರವೀಂದ್ರ ಮತ್ತು ಬಿ.ಕೆ ದಿಲೀಪ್ ಬಿನ್ ಕರಿಯಪ್ಪ
25	139	ಖಾಸಗಿ	ಖುಷ್ಕಿ	0.27	ಪ್ರಕಾಶ್ ಬಿನ್ ರಂಗಯ್ಯ
26	6	ಖಾಸಗಿ	ಖುಷ್ಕಿ	0.4175	ರಮೇಶ್ ಬಿನ್ ಲೇಟ್ ಪುಟ್ಟಸ್ವಾಮಿ, ದಿನೇಶ್ ಬಿನ್ ಲೇಟ್ ಪುಟ್ಟಸ್ವಾಮಿ ಗೋಮಾಳ, ರಾಮಯ್ಯ ಬಿನ್ ಯಾಲಕ್ಕಯ್ಯ, ಮೂಡ್ಲಿಗಿರಾಯ ಬಿನ್ ಜವರಯ್ಯ, ಮೂಡ್ಗಿರಾಯ ಬಿನ್ ಯಾಲಕ್ಕಯ್ಯ, ತಿಮ್ಮಯ್ಯ ಬಿನ್ ಗೋವಿಂದಯ್ಯ, ರಂಗಯ್ಯ ಬಿನ್ ಮಾಳೇತಿಮ್ಮಯ್ಯ, ಚನ್ನಪ್ಪ ಬಿನ್ ಯಾಲಕ್ಕಯ್ಯ, ಚಂದ್ರಯ್ಯ ಬಿನ್ ಯಲ್ಲಾಪುರ, ಗಂಗಾರಾಯ ಬಿನ್ ಯಲ್ಲಾಪುರ, ಲೇಟ್ ಹನುಮಯ್ಯ, ಹನುಮಂತಯ್ಯ ಬಿನ್ ಲೇಟ್ ಹನುಮಯ್ಯ, ಕಮಲಮ್ಮ ಬಿನ್ ಲೇಟ್ ಹನುಮಯ್ಯ, ಸಣ್ಣ ಹನುಮಯ್ಯ ಬಿನ್ ಲೇಟ್ ಹನುಮಯ್ಯ, ರತ್ನಮ್ಮ ಬಿನ್ ಲೇಟ್ ಗೋಪಾಲಯ್ಯ, ನಿಂಗಮ್ಮ ಕೋಂ ಲೇಟ್ ಚಂದ್ರಯ್ಯ, ಸರೋಜಮ್ಮ ಬಿನ್ ಲೇಟ್ ಗೋಪಾಲಯ್ಯ, ಬಿ ಜಿ ಲಕ್ಷ್ಮಣ ಬಿನ್ ಲೇಟ್ ಗೋಪಾಲಯ್ಯ
27	70/1ಬಿ	ಖಾಸಗಿ	ಖುಷ್ಕಿ	0.06	ಚನ್ನಮ್ಮ ಕೋಂ ಲೇಟ್ ರಾಮೇಗೌಡ, ಮಂಜಮ್ಮ ಬಿನ್ ಲೇಟ್ ತಿಮ್ಮೇಗೌಡ, ಜಯಮ್ಮ ಬಿನ್ ಲೇಟ್ ತಿಮ್ಮೇಗೌಡ, ಜಯಣ್ಣ ಬಿನ್ ಲೇಟ್ ತಿಮ್ಮೇಗೌಡ, ಚಂದ್ರಮ್ಮ ಬಿನ್ ಲೇಟ್ ತಿಮ್ಮೇಗೌಡ, ಶೇಖರ್ ಬಿನ್ ಲೇಟ್ ತಿಮ್ಮೇಗೌಡ, ಲಕ್ಷ್ಮಮ್ಮ ಬಿನ್ ಮೂಡಲಗಿರಾಯ, ಬೋರಣ್ಣ, ರಾಧಮ್ಮ ಕೋಂ ರಂಗಸ್ವಾಮಿ, ಯಶೋದಮ್ಮ ಬಿ ಆರ್ ಬಿನ್ ಲೇಟ್ ಬಿ. ಲಲಿತಾ ಬಿ ಆರ್ ಲೇಟ್ ಬಿ ಎನ್ ರಂಗೇಗೌಡ, ಜವರಮ್ಮ ಕೋಂ ಲೇಟ್ ನಂಜೇಗೌಡ
28	71	ಖಾಸಗಿ	ಖುಷ್ಕಿ	0.03	ರಂಗಯ್ಯ ಬಿನ್ ಸಣ್ಣತಿಮ್ಮಯ್ಯ, ಎಂ.ರಾಮೇಗೌಡ ಬಿನ್ ಮೂಡ್ಲಿಗಿರಾಯ
29	80/1	ಖಾಸಗಿ	ಖುಷ್ಕಿ	0.03	ಶಿವಮ್ಮ ಕೋಂ ರಾಮೇಗೌಡ, ಲಕ್ಷ್ಮಮ್ಮ ಕೋಂ ಚನ್ನೇಗೌಡ, ತಿಮ್ಮೇಗೌಡ ಬಿನ್ ರಂಗೇಗೌಡ, ಕುಮಾರ್ ಬಿನ್ ರಂಗೇಗೌಡ, ಜವರೇಗೌಡ ಬಿನ್ ಲಕ್ಕಣ್ಣಗೌಡ, ಸಾವಿತ್ರಮ್ಮ ಕೋಂ ಲೇಟ್ ಕೃಷ್ಣೇಗೌಡ, ದ್ಯಾವಮ್ಮ ಕೋಂ ರಂಗೇಗೌಡ, ಶ್ರೀನಿವಾಸ ಬಿನ್ ಲೇಟ್ ಗಿರಿಯಪ್ಪ
30	96	ಖಾಸಗಿ	ಖುಷ್ಕಿ	0.13	ಪುರುಷೋತ್ತಮ ಬಿನ್ ಲೇಟ್ ಬಿ.ಎಚ್. ರಾಮಚಂದ್ರೇಗೌಡ, ರಾಜೇಶ್ವರಿ ಬಿನ್ ಲೇಟ್ ಬಿ.ಎಚ್. ರಾಮಚಂದ್ರೇಗೌಡ, ಯಶೋಧ ಲೇಟ್ ಬಿ.ಎಚ್.ರಾಮಚಂದ್ರೇಗೌಡ, ನಾಗರಾಜು ಬಿ.ಆರ್.ಬಿನ್ ಲೇಟ್ ಬಿ.ಎಚ್.ರಾಮಚಂದ್ರೇಗೌಡ
31	97/3	ಖಾಸಗಿ	ಖುಷ್ಕಿ	0.0225	ಬಿ.ಆರ್. ರಂಗಯ್ಯ ಬಿನ್ ಬಿ.ಸಿ. ರಂಗಯ್ಯ
32	97/4	ಖಾಸಗಿ	ಖುಷ್ಕಿ	0.0725	ಗಿರಿಯಪ್ಪ ಬಿನ್ ಕಜ್ಜೀರಂಗೇಗೌಡ
ಗ್ರಾಮದ ಹೆಸರು : ಮಂಚೇನಹಳ್ಳಿ					
33	34/7	ಖಾಸಗಿ	ಖುಷ್ಕಿ	0.2125	ಗಂಗಾಧರಯ್ಯ ಬಿನ್ ಲೇಟ್ ಲಕ್ಷ್ಮಮ್ಮ
ಗ್ರಾಮದ ಹೆಸರು : ಕುಣಿಕೇನಹಳ್ಳಿ					
34	194/2	ಖಾಸಗಿ	ಖುಷ್ಕಿ	0.1125	ಲಕ್ಷ್ಮೀನಾರಾಯಣ ಬಿನ್ ಲೇಟ್ ನಿಂಗಪ್ಪ, ಲಕ್ಷ್ಮೀನಾರಾಯಣ ಬಿನ್ ಲೇಟ್ ನಿಂಗಪ್ಪ ಭೂ.ಪಾ
35	194/3	ಖಾಸಗಿ	ಖುಷ್ಕಿ	0.065	ನಾಗರಾಜ ಜಿ.ಎಂ. ಬಿನ್ ಮರಿಯಪ್ಪ ಉರ್ಫ್ ಜಿ.ಮರಿಬಸವಯ್ಯ.
36	194/4	ಖಾಸಗಿ	ಖುಷ್ಕಿ	0.065	ಸುಜಾತಾ ಕೋಂ ಸಂತೋಷಕಾಂತ್ಲಿ ಭೂಪಾ
37	194/5	ಖಾಸಗಿ	ಖುಷ್ಕಿ	0.0625	ಸುಜಾತಾ ಕೋಂ ಸಂತೋಷಕಾಂತ್ಲಿ ಭೂಪಾ
38	194/6	ಖಾಸಗಿ	ಖುಷ್ಕಿ	0.07	ಪದ್ಮಜಾ ಕೋಂ ಜಿ ಸಿ ಶ್ರೀನಿವಾಸ್
39	194/7	ಖಾಸಗಿ	ಖುಷ್ಕಿ	0.0575	ಡಿ.ಪಿ ಸುಜಾತಾ ಕೋಂ ಸಂತೋಷಕಾಂತ್ಲಿ, ಡಿ.ಪಿ ಸುಜಾತಾ ಕೋಂ ಸಂತೋಷಕಾಂತ್ಲಿ ಭೂಪ
40	195/4	ಖಾಸಗಿ	ಖುಷ್ಕಿ	0.2025	ಧನರಾಜ್ ಎಚ್ ಎಸ್ ಬಿನ್ ಲೇಟ್ ಸದಾನಂದ, ಸಚಿನ್ ಎಚ್ ಎಸ್ ಬಿನ್ ಲೇಟ್ ಸದಾನಂದ
41	237	ಖಾಸಗಿ	ಖುಷ್ಕಿ	0.0375	ಬಿ.ಎಚ್.ಹುಚ್ಚೇಗೌಡ ಬಿನ್ ಹನುಮೇಗೌಡ, ಹುಚ್ಚೇಗೌಡ ಬಿನ್ ಲೇಟ್ ಹನುಮೇಗೌಡ, ರಂಗಮ್ಮ ಕೋಂ ಲೇಟ್ ಮೂಡ್ಲಯ್ಯ, ಹುಚ್ಚಮ್ಮ ಕೋಂ ಲೇಟ್ ವೆಂಕಟರಾಮಯ್ಯ, ಚಂದ್ರಯ್ಯ ಬಿನ್ ಲೇಟ್ ರಂಗಯ್ಯ
ಗ್ರಾಮದ ಹೆಸರು : ಲೊಕ್ಕಮ್ಮನಹಳ್ಳಿ					
42	65/1	ಖಾಸಗಿ	ಖುಷ್ಕಿ	0.125	ಸರ್ಕಾರಿ ಫ್ಯಾಡ್, ಎಲ್ ಆರ್ ನಾಗರಾಜು ಬಿನ್ ರಂಗಪ್ಪ, ಪುಟ್ಟಸ್ವಾಮಿ ಬಿನ್ ಚಿಕ್ಕಯ್ಯ, ಬೆಟ್ಟಯ್ಯ ಬಿನ್ ಅಲ್ಲಯ್ಯ, ಚನ್ನೇಗೌಡ ಬಿನ್ ಸಿದ್ದಪ್ಪ, ನಂಜುಂಡಪ್ಪ ಬಿನ್ ಸಿದ್ದಪ್ಪ
43	65/2	ಖಾಸಗಿ	ಖುಷ್ಕಿ	0.0525	ಗುರುಮಲ್ಲಿಕಾರ್ಜುನಯ್ಯ ಬಿನ್ ಎಲ್ ಬಿ ಬೆಟ್ಟಯ್ಯ
44	65/3	ಖಾಸಗಿ	ಖುಷ್ಕಿ	0.01	ಎಂ.ಟಿ ಹರ್ಷಿತಾ ಬಿನ್ ಎಂ.ಎಸ್ ತಿಮ್ಮಪ್ಪ ಭೂಪ
45	65/4	ಖಾಸಗಿ	ಖುಷ್ಕಿ	0.005	ಕುಸುಮಾ ಕೋಂ ಎಂ.ಎಸ್ ತಿಮ್ಮಪ್ಪ ಭೂಪ
46	67/1	ಖಾಸಗಿ	ಖುಷ್ಕಿ	0.5225	ಎಲ್ ಎ ಗಂಗಾಧರಯ್ಯ ಬಿನ್ ಅಲ್ಲೇಗೌಡ, ಎಲ್ ಎ ಮಹಾಲಿಂಗಪ್ಪ ಬಿನ್ ಅಲ್ಲೇಗೌಡ, ಎಲ್ ಬಿ ಬೆಟ್ಟಯ್ಯ ಬಿನ್ ಸಣ್ಣಬೆಟ್ಟಯ್ಯ, ರಾಮಯ್ಯ ಬಿನ್ ಸಣ್ಣಬೆಟ್ಟೇಗೌಡ, ಸಣ್ಣಬೆಟ್ಟೇಗೌಡ ಬಿನ್ ಅಲ್ಲೇಗೌಡ, ಪುಷ್ಪಾ ಕೋಂ ಲೇಟ್ ಎಲ್ ಎ ಚಂದ್ರಯ್ಯ, ಎಲ್ ಎಸ್ ರೇಖಾಮಣಿ ಕೋಂ ಲೇಟ್ ಆರ್ ಅಶೋಕ್ ಕುಮಾರ್, ರಂಗಸ್ವಾಮಿ ಎಚ್/ಓ ತಿಮ್ಮೇಗೌಡ, ರಂಗಸ್ವಾಮಿ, ಗುರುಮಲ್ಲಿಕಾರ್ಜುನ ಬಿನ್ ಲೇಟ್ ಎಲ್.ಬಿ. ಬೆಟ್ಟಯ್ಯ
47	67/2	ಖಾಸಗಿ	ಖುಷ್ಕಿ	0.0075	ಸಿದ್ದಗಂಗಾ ಹೆಚ್.ಎಸ್ ಕೋಂ ಲೇಟ್ ಎ.ಟಿ ಶಿವಶಂಕರ್
ಗ್ರಾಮದ ಹೆಸರು : ಚೌಡೇನಹಳ್ಳಿ					
48	99/1	ಖಾಸಗಿ	ಖುಷ್ಕಿ	0.06	ಎನ್.ನಾರಾಯಣಸ್ವಾಮಿ ಬಿನ್ ಸಿ.ಎನ್.ನಾರಾಯಣಪ್ಪ
49	99/2ಎ	ಖಾಸಗಿ	ಖುಷ್ಕಿ	0.015	ಎನ್.ನಾರಾಯಣಸ್ವಾಮಿ ಬಿನ್ ಸಿ.ಎನ್.ನಾರಾಯಣಪ್ಪ
50	99/2ಬಿ	ಖಾಸಗಿ	ಖುಷ್ಕಿ	0.0125	ಹೇಮಾವತಿ ಎನ್ ಬಿನ್ ಸಿ.ಎನ್ ನಾರಾಯಣಪ್ಪ
51	99/3	ಖಾಸಗಿ	ಖುಷ್ಕಿ	0.0175	ಹೇಮಾವತಿ ಎನ್ ಬಿನ್ ಸಿ.ಎನ್ ನಾರಾಯಣಪ್ಪ
52	ಖಾತಾ ನಂಬರ್ 58	ಖಾಸಗಿ	ಬಿಲ್ಟಪ್ ಏರಿಯಾ	0.003552	ಜಗದಂಬಾ ಕೋಂ ಮಹಾಲಿಂಗಪ್ಪ
53	ಖಾತಾ ನಂಬರ್ 59	ಖಾಸಗಿ	ಬಿಲ್ಟಪ್ ಏರಿಯಾ	0.005462	ಮಲ್ಲಿಕಾರ್ಜುನಯ್ಯ ಬಿನ್ ಗಂಗಪ್ಪ
54	ಖಾತಾ ನಂಬರ್ 60	ಖಾಸಗಿ	ಬಿಲ್ಟಪ್ ಏರಿಯಾ	0.004996	ಮಹಾಲಿಂಗಪ್ಪ ಬಿನ್ ಸಣ್ಣಲಿಂಗೇಗೌಡ, (ಪಾರ್ವತಮ್ಮ ಕೋಂ ಬಸವರಾಜು), ಲತಾಮಣಿ ಕೋಂ ಮಹಾಲಿಂಗಪ್ಪ
ಗ್ರಾಮದ ಹೆಸರು : ತುರುವೇಕೆರೆ ಅಮಾನಿಕೆರೆ					
55	372/1	ಖಾಸಗಿ	ಖುಷ್ಕಿ	0.026193	ಟಿ ಎಸ್ ಬಸವರಾಜು ಬಿನ್ ಲೇಟ್ ಟಿ ಕೆ ಸಿದ್ದಲಿಂಗಯ್ಯ
56	372/2	ಖಾಸಗಿ	ಖುಷ್ಕಿ	0.002076	ಟಿ ಎಸ್ ಬಸವರಾಜು ಬಿನ್ ಲೇಟ್ ಟಿ ಕೆ ಸಿದ್ದಲಿಂಗಯ್ಯ
57	373/1	ಖಾಸಗಿ	ಖುಷ್ಕಿ	0.10586	ಟಿ.ಎಸ್.ಬಸವರಾಜು ಬಿನ್ ಲೇಟ್ ಟಿ.ಕೆ.ಸಿದ್ದಲಿಂಗಯ್ಯ 373
58	373/2	ಖಾಸಗಿ	ಖುಷ್ಕಿ	0.116139	ಟಿ.ಎಸ್.ಬಸವರಾಜು ಬಿನ್ ಲೇಟ್ ಟಿ.ಕೆ.ಸಿದ್ದಲಿಂಗಯ್ಯ 373
59	374/1	ಖಾಸಗಿ	ಖುಷ್ಕಿ	0.053138	ಶಿವಲೀಲಾ ಕೋಂ ಲೇಟ್ ಜಯರಾಮ
60	374/2	ಖಾಸಗಿ	ಖುಷ್ಕಿ	0.153996	ಮಂಗಳಾ ಗೌರಮ್ಮ ಕೋಂ ಬಸವರಾಜು, ಚಂದ್ರಮ್ಮ ಕೋಂ ಲೇಟ್ ಎ.ಜಿ ಶಿವನಂಜಪ್ಪ
61	375	ಖಾಸಗಿ	ಖುಷ್ಕಿ	0.00771	ಟಿ.ಎಸ್.ಬಸವರಾಜು ಬಿನ್ ಲೇಟ್ ಟಿ.ಕೆ ಸಿದ್ದಲಿಂಗಯ್ಯ
62	384	ಖಾಸಗಿ	ಖುಷ್ಕಿ	0.354251	ಪಾರ್ವತಮ್ಮ ಕೋಂ ಲೇಟ್ ಟಿ.ಎನ್ ಚಿನ್ನ ನರಸಿಂಹ ಶೆಟ್ಟಿ, ಚಂದ್ರಮ್ಮ ಕೋಂ ಟಿ.ಎನ್ ಲಕ್ಷ್ಮೀ ನರಸಿಂಹ ಶೆಟ್ಟಿ(384/1) ಚಂದ್ರಮ್ಮ ಕೋಂ ಟಿ.ಎನ್ ಲಕ್ಷ್ಮೀ ನರಸಿಂಹ ಶೆಟ್ಟಿ(384/2)
63	385	ಖಾಸಗಿ	ಖುಷ್ಕಿ	0.000988	ಚಂದ್ರಮ್ಮ ಕೋಂ ಲೇಟ್ ಲಕ್ಷ್ಮೀ ನರಸಿಂಹ ಶೆಟ್ಟಿ
64	386	ಖಾಸಗಿ	ಖುಷ್ಕಿ	0.023821	ನಾಗರಾಜು ಬಿನ್ ಗಂಗಮ್ಮ
65	387	ಖಾಸಗಿ	ಖುಷ್ಕಿ	0.019966	ಅನ್ನಪೂರ್ಣ ಕೋಂ ನಾಗರಾಜು
66	388	ಖಾಸಗಿ	ಖುಷ್ಕಿ	0.024414	ಕೃಷ್ಣಮೂರ್ತಿ ಬಿನ್ ಲೇಟ್ ಹನುಮಯ್ಯ
67	389	ಖಾಸಗಿ	ಖುಷ್ಕಿ	0.131578	ಕೆಂಪಮ್ಮ ಕೋಂ ಬ್ಯಾಟಪ್ಪ, ಡಿ.ರಾಜೇಶ್ ಬಿನ್ ದಶರಥ ರಾಮ ಶೆಟ್ಟಿ, ಮುದ್ಲಪ್ಪ ಬಿನ್ ತಿಮ್ಮಯ್ಯ, ಜಿ.ರಾಜಣ್ಣ ಬಿನ್ ಗಂಗಪ್ಪ, ಟಿ.ಸಿ. ಗಂಗಣ್ಣ ಬಿನ್ ಚಿಕ್ಕೇಗೌಡ, ಹುಚ್ಚಣ್ಣ ಬಿನ್ ಲೇಟ್ ಹುಚ್ಚೇಗೌಡ, ತಿಮ್ಮಮ್ಮ ಕೋಂ ಲೇಟ್ ಬ್ಯಾಟಪ್ಪ, ಗಂಗಮ್ಮ ಕೋಂ ಲೇಟ್ ರಾಜಣ್ಣ, ಅಡವೀಶ ಬಿನ್ ಲೇಟ್ ರಾಜಣ್ಣ, ಗಂಗಮ್ಮ ಕೋಂ ಲೇಟ್ ರಾಜಣ್ಣ, ಅಡವೀಶ ಬಿನ್ ಲೇಟ್ ರಾಜಣ್ಣ, ಡಿ ರಾಜೇಶ್ ಬಿನ್ ಲೇಟ್ ಕೆ.ಎಲ್.ದಶರಥ ರಾಮ ಶೆಟ್ಟಿ, ಕೆ.ಎಲ್.ದಶರಥ ರಾಮ ಶೆಟ್ಟಿ, ಕೆ.ಎಲ್.ದಶರಥ ರಾಮ ಶೆಟ್ಟಿ, ಸುಮನ್ ಗಣೇಶ್ ಬಿನ್ ಲೇಟ್ ಕೆ.ಎಲ್ ದಶರಥ ರಾಮ ಶೆಟ್ಟಿ, ಡಿ.ಸಹನಾ ಬಿನ್ ಲೇಟ್ ಕೆ.ಎಲ್.ದಶರಥ ರಾಮ ಶೆಟ್ಟಿ, ಗಂಗಮ್ಮ ಕೋಂ ಲೇಟ್ ರಾಜಣ್ಣ, ಅಡವೀಶ ಬಿನ್ ಲೇಟ್ ರಾಜಣ್ಣ, ಟಿ.ಮುದ್ಲಪ್ಪ ಬಿನ್ ಲೇಟ್ ತಿಮ್ಮಯ್ಯ
68	390	ಖಾಸಗಿ	ಖುಷ್ಕಿ	0.057427	ಸಿದ್ದಲಿಂಗಯ್ಯ ಬಿನ್ ಟಿ ಜಿ ತಮ್ಮಯ್ಯಣ್ಣ
69	391	ಖಾಸಗಿ	ಖುಷ್ಕಿ	0.106552	ಸರೋಜಮ್ಮ ಕೋಂ ಲೇಟ್ ಶ್ರೀನಿವಾಸ ಶೆಟ್ಟಿ
70	392	ಖಾಸಗಿ	ಖುಷ್ಕಿ	0.161943	ಟಿ ಎಸ್ ಸೀತಾರಾಮು ದೀಕ್ಷಿತ್ ಬಿನ್ ಸುಬ್ರಹ್ಮಣ್ಯ ದೀಕ್ಷಿತ್
71	393/1	ಖಾಸಗಿ	ಖುಷ್ಕಿ	0.106275	ಮುರಳಿ ಟಿ ಎಸ್ ಬಿನ್ ಟಿ ಎನ್ ಶಂಕರ ರಾವ್
72	393/2	ಖಾಸಗಿ	ಖುಷ್ಕಿ	0.076899	ಟಿ.ಸಿ.ಹಿರೇಮಾವೂರಯ್ಯ ಬಿನ್ ಚಿಕ್ಕಮಾವೂರಯ್ಯ, ಟಿ. ಚಂದ್ರಶೇಖರ್ ಬಿನ್ ಲೇಟ್ ತಾತಯ್ಯ, ಎಚ್.ಆರ್.ರುಕ್ಮಿಣಿ ಕೋಂ ದಿವಂಗತ ಟಿ ಟಿ ಮೋಹನಕುಮಾರ್
73	394/1	ಖಾಸಗಿ	ಖುಷ್ಕಿ	0.007215	ತಿಮ್ಮಮ್ಮ ಕೋಂ ಲೇಟ್ ಬ್ಯಾಟಪ್ಪ (394)
74	394/2	ಖಾಸಗಿ	ಖುಷ್ಕಿ	0.000494	ತಿಮ್ಮಮ್ಮ ಕೋಂ ಲೇಟ್ ಬ್ಯಾಟಪ್ಪ (394)
75	395	ಖಾಸಗಿ	ಖುಷ್ಕಿ	0.048076	ಟಿ.ಆರ್ ನಾಗರಾಜು ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್, ಟಿ.ಆರ್ ನಂಜುಂಡ ಸ್ವಾಮಿ ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್.
76	396/2	ಖಾಸಗಿ	ಖುಷ್ಕಿ	0.078441	ಜಿ.ರಾಜಣ್ಣ ಬಿನ್ ಗಂಗಪ್ಪ, ಜಿ.ಶಿವಣ್ಣ ಬಿನ್ ಗಂಗಪ್ಪ (396/2), ಯಲ್ಲಮ್ಮ ಕೋಂ ಶಿವಣ್ಣ, ರಾಕೇಶ್ ಬಿನ್ ಶಿವಣ್ಣ(396/3)
77	409/1	ಖಾಸಗಿ	ಖುಷ್ಕಿ	0.024216	ನರಸಿಂಹಯ್ಯ ಬಿನ್ ಲೇಟ್ ನರಸಪ್ಪ
78	409/2	ಖಾಸಗಿ	ಖುಷ್ಕಿ	0.07338	ಕೆ. ಜಿ ಗೋವಿಂದಯ್ಯ ಬಿನ್ ಗಿರಿಯಪ್ಪ (409/2), ಗಾಯತ್ರಿ ಬಿನ್ ಲೇಟ್ ಜಯರಾಮಯ್ಯ, ಪವಿತ್ರ ಬಿನ್ ಲೇಟ್ ಜಯರಾಮಯ್ಯ, ಆಶಾರಾಣಿ ಬಿನ್ ಲೇಟ್ ಜಯರಾಮಯ್ಯ (409/3)
79	411/3	ಖಾಸಗಿ	ಖುಷ್ಕಿ	0.00253	ಟಿ.ಆರ್ ನಾಗರಾಜ ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್, ಟಿ.ಆರ್ ನಂಜುಂಡ ಸ್ವಾಮಿ ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್.
80	416/2	ಖಾಸಗಿ	ಖುಷ್ಕಿ	0.010121	ಟಿ.ಆರ್ ನಾಗರಾಜ ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್, ಟಿ.ಆರ್ ನಂಜುಂಡ ಸ್ವಾಮಿ ಬಿನ್ ಲೇಟ್ ರಾಮಚಂದ್ರ ಜೋಯಿಸ್ ಟಿ.ಎನ್.
81	417/1	ಖಾಸಗಿ	ಖುಷ್ಕಿ	0.057131	ಎಸ್.ಸಿದ್ದಯ್ಯ ಬಿನ್ ಸಣ್ಣ ಹುಚ್ಚಯ್ಯ @ ಹುಚ್ಚಯ್ಯ
82	417/2	ಖಾಸಗಿ	ಖುಷ್ಕಿ	0.127704	ಎಸ್.ಪ್ರದೀಪ್ ಬಿನ್ ಎನ್.ಶಿವನಂಜಯ್ಯ
83	417/3	ಖಾಸಗಿ	ಖುಷ್ಕಿ	0.211324	ಟಿ.ಎಲ್.ಮಹದೇವಯ್ಯ ಬಿನ್ ಲಿಂಗಣ್ಣಯ್ಯ, ಟಿ.ಎಲ್.ಶಿವಶಂಕರ ಬಿನ್ ಲಿಂಗಣ್ಣಯ್ಯ
84	418	ಖಾಸಗಿ	ಖುಷ್ಕಿ	0.001384	ಜೆ. ಉಮೇಶ ಬಿನ್ ಜಿ. ಜಯಣ್ಣ (418/2)
85	419/2	ಖಾಸಗಿ	ಖುಷ್ಕಿ	0.098348	ಟಿ ಎಚ್ ಮಹೇಶ್ ಬಿನ್ ಹೊನ್ನಯ್ಯ
86	424/1	ಖಾಸಗಿ	ಖುಷ್ಕಿ	0.318825	ಅನುಸೂಯಮ್ಮ ಕೋಂ ಲೇಟ್ ಎಸ್ ಶಿವಣ್ಣ, ಗೌರಮ್ಮ ಕೋಂ ಲೇಟ್ ಗುಂಡಪ್ಪ
87	424/2ಎ	ಖಾಸಗಿ	ಖುಷ್ಕಿ	0.025798	ರಾಜಮ್ಮ ಎಂ ಕೋಂ ಸಿ.ಎಂ. ನಾಗರಾಜು (424/2ಎ1), ಗಂಗಮ್ಮ ಕೋಂ ಲೇಟ್ ಮುದ್ದರಾಮಯ್ಯ (424/2ಎ2)
88	424/2ಬಿ	ಖಾಸಗಿ	ಖುಷ್ಕಿ	0.101214	ಟಿ.ಆರ್. ನಾಗರಾಜು ಬಿನ್ ಲೇಟ್ ರಾಜಣ್ಣ (424/2ಬಿ1)
89	424/2ಬಿ2	ಖಾಸಗಿ	ಖುಷ್ಕಿ	0.07085	ಕೆ.ಎಚ್.ಗೋವಿಂದಯ್ಯ ಬಿನ್ ಹುಚ್ಚತಿಮ್ಮಯ್ಯ
90	424/2ಬಿ3	ಖಾಸಗಿ	ಖುಷ್ಕಿ	0.045072	ಲಕ್ಕಮ್ಮ ಕೋಂ ಶಿವಯ್ಯ
91	424/3	ಖಾಸಗಿ	ಖುಷ್ಕಿ	0.003361	ಲಕ್ಕಮ್ಮ ಕೋಂ ಶಿವಯ್ಯ
92	424/4	ಖಾಸಗಿ	ಖುಷ್ಕಿ	0.046653	ನಂಜೇಗೌಡ ಬಿನ್ ರಂಗೇಗೌಡ
93	425/1	ಖಾಸಗಿ	ಖುಷ್ಕಿ	0.116396	ಟಿ ನಂಜುಡಯ್ಯ ಬಿನ್ ಕೆಂಪನಂಜಯ್ಯ
94	425/2	ಖಾಸಗಿ	ಖುಷ್ಕಿ	0.096032	ನಟರಾಜು ಎಸ್ ಬಿನ್ ಲೇಟ್ ಸಿದ್ದಪ್ಪ ಎಂ.ಬಿ (425/9)
95	425/3	ಖಾಸಗಿ	ಖುಷ್ಕಿ	0.078777	ಪಿ.ಬಿ. ಪುಷ್ಪಲತಾ ಕೋಂ ಕೆ ಎನ್ ಮಹೇಶ್
96	425/4	ಖಾಸಗಿ	ಖುಷ್ಕಿ	0.054758	ವೆಂಕಟೇಶ ಬಿನ್ ಲೇಟ್ ಸಿದ್ದಪ್ಪ ಎಂ.ಬಿ
97	425/6	ಖಾಸಗಿ	ಖುಷ್ಕಿ	0.061381	ಜಯಮ್ಮ ಕೋಂ ಸೋಮಶೇಖರಯ್ಯ
98	432	ಖಾಸಗಿ	ಖುಷ್ಕಿ	0.15874	ಕೃಷ್ಣಪ್ಪ ಬಿನ್ ನರಸಿಂಹಯ್ಯ, ಟಿ.ವಿ.ವಿಠ್ಠಲಮೂರ್ತಿ ಬಿನ್ ವೆಂಕಟನರಸಯ್ಯ, ರಾಮಮೂರ್ತಿ ಬಿನ್ ಲಕ್ಷ್ಮಪತಯ್ಯ
99	433	ಖಾಸಗಿ	ಖುಷ್ಕಿ	0.005832	ನಂಜಮ್ಮ ಕೋಂ ಲೇಟ್ ಕರುಣಯ್ಯ (433/2)
100	434/1	ಖಾಸಗಿ	ಖುಷ್ಕಿ	0.414148	ಸಿದ್ದಗಂಗಮ್ಮ ಕೋಂ ಟಿ ವಿ ರಾಜಶೇಖರಪ್ಪ ಶೆಟ್ಟಿ, ನಂಜಪ್ಪ ಬಿನ್ ಬೋರೇಗೌಡ, ರೇವಮ್ಮ ಕೋಂ ನಾಗಯ್ಯ, ಎಚ್ ಗೋವಿಂದಯ್ಯ ಬಿನ್ ಹುಚ್ಚಯ್ಯ
101	434/2	ಖಾಸಗಿ	ಖುಷ್ಕಿ	0.029949	ಹುಚ್ಚಮ್ಮ ಕೋಂ ಲೇಟ್ ಲಕ್ಕಯ್ಯ
102	435	ಖಾಸಗಿ	ಖುಷ್ಕಿ	0.27567	ಕೃಷ್ಣವೇಣಿ ಕೋಂ ಲೇಟ್ ಟಿ.ಎನ್ ನಾರಾಯಣಪ್ಪ (435/1) ಶಾಂತಮ್ಮ ಕೋಂ ಲೇಟ್ ಲಕ್ಷ್ಮೀನಾರಾಯಣಪ್ಪ (435/2)
103	439	ಖಾಸಗಿ	ಖುಷ್ಕಿ	0.080971	ಶಾಂತಮ್ಮ ಕೋಂ ಲೇಟ್ ಲಕ್ಷ್ಮೀನಾರಾಯಣಪ್ಪ
104	441/2	ಖಾಸಗಿ	ಖುಷ್ಕಿ	0.086289	ಶಾಂತಮ್ಮ ಕೋಂ ಲೇಟ್ ಲಕ್ಷ್ಮೀನಾರಾಯಣಪ್ಪ
105	443/1	ಖಾಸಗಿ	ಖುಷ್ಕಿ	0.060702	ಟಿ.ಎಚ್. ಮದನಗೋಪಾಲ ಶೆಟ್ಟಿ ಬಿನ್ ಲೇಟ್ ಟಿ ಎಚ್ ಹನುಮಣ್ಣ, ಟಿ.ಹೆಚ್ ಲಕ್ಷ್ಮೀಕಾಂತ ಶೆಟ್ಟಿ ಬಿನ್ ಲೇಟ್ ಟಿ.ಹೆಚ್ ಹನುಮಣ್ಣ
106	443/2	ಖಾಸಗಿ	ಖುಷ್ಕಿ	0.028269	ಪಿ ಶಿವರಾಮಯ್ಯ ಬಿನ್ ಲೇಟ್ ಪರಸಯ್ಯ, ಚಂದ್ರಯ್ಯ ಬಿನ್ ತಮ್ಮಯ್ಯ, ನಿಂಗಮ್ಮ ಕೋಂ ಲೇಟ್ ಗೊರವಜ್ಜಯ್ಯ
107	444	ಖಾಸಗಿ	ಖುಷ್ಕಿ	0.133931	ನರಸಮ್ಮ ಕೋಂ ನಂಜುಂಡಯ್ಯ, ಭವ್ಯ (ಎಂ.ಜಿ) ಅಜ್ಜಿ ನರಸಮ್ಮ, ಪಾರ್ವತಮ್ಮ ಕೋಂ ಲೇಟ್ ಟಿ.ಎನ್ ಚಿನ್ನ ನರಸಿಂಹ ಶೆಟ್ಟಿ, ಕೆ.ಎಸ್.ಶ್ರೀನಿವಾಸ ಬಿನ್ ಲೇಟ್ ಸಿದ್ದಪ್ಪ
108	ನಾಲೆ	ಖಾಸಗಿ	ಖುಷ್ಕಿ	0.007413	ಸರ್ಕಾರಿ
109	ಟ್ಯಾಂಕ್/ ನಾಲೆ	ಖಾಸಗಿ	ಖುಷ್ಕಿ	0.334284	ಸರ್ಕಾರಿ
ಗ್ರಾಮದ ಹೆಸರು : ಬಿಡಿಸ್ವಾಸ್ತಿ					
110	107	ಖಾಸಗಿ	ಖುಷ್ಕಿ	0.084213	ಟಿ.ಎಲ್ ಶೇಷಾದ್ರಿ ಬಿನ್ ಲೇಟ್ ಲಕ್ಷ್ಮೀಪತಯ್ಯ (107/1) ಖಿ.ಐ ಟಿ.ಎಲ್ ರಾಮಮೂರ್ತಿ ಬಿನ್ ಲೇಟ್ ಲಕ್ಷ್ಮೀಪತಯ್ಯ (107/2) 107
111	108	ಖಾಸಗಿ	ಖುಷ್ಕಿ	0.283279	ಟಿ.ಕೆ ಮಹೇಶ್ ಬಿನ್ ಟಿ.ಆರ್ ಕೃಷ್ಣಪ್ಪ 108
112	109/3	ಖಾಸಗಿ	ಖುಷ್ಕಿ	0.00506	ಟಿ.ಕೆ ಮಂಜು ಬಿನ್ ಟಿ.ಆರ್ ಕೃಷ್ಣಪ್ಪ 109/3
ತಯಾರಿಕಾ ವಲಯದ ಚಟುವಟಿಕೆಗಳು ಮಾರ್ಚ್‌ನಲ್ಲಿ ನಾಲ್ಕು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿವೆ. ಹೀಗಾಗುವುದಕ್ಕೆ ಯುದ್ಧವೂ ಒಂದು ಕಾರಣ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ



ವರದಿ ಗುರುವಾರ ತಿಳಿಸಿದೆ.

ತೀವ್ರವಾಗಿರುವ ಸ್ಪರ್ಧೆ, ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯ ಹೆಚ್ಚಳ ಕೂಡ ಚಟುವಟಿಕೆ ತಗ್ಗಲು ಕಾರಣವಾಗಿವೆ.

> **ಅಲ್ಯುಮಿನಿಯಂ, ರಾಸಾಯನಿಕಗಳು, ಇಂಧನ, ನಾರು, ಚರ್ಮ, ತೈಲ, ರಬ್ಬರ್, ಉಕ್ಕು ಸೇರಿ ಕೆಲ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ ವಸ್ತುಗಳ ತಯಾರಿಕಾ ವೆಚ್ಚ ಹೆಚ್ಚಳವಾಗಿದೆ**
> **ಪ್ರಾಂಜುಲ್ ಭಂಡಾರಿ,** ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ಫೆಬ್ರುವರಿಯಲ್ಲಿ 56.9ರಷ್ಟಿತ್ತು. ಮಾರ್ಚ್‌ನಲ್ಲಿ ಇದು 53.9ಕ್ಕೆ ಇಳಿಕೆ ಆಗಿದೆ.

ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

'ಮಾರ್ಚ್‌ನಲ್ಲಿ ದೇಶದ ತಯಾರಿಕಾ ವಲಯದ ಸೂಚ್ಯಂಕವು 2022ರ ಜೂನ್ ನಂತರದ ಕನಿಷ್ಠ ಮಟ್ಟ ತಲುಪಿದೆ. ಪಶ್ಚಿಮ ಏಷ್ಯಾದ ಸಂಘರ್ಷವು ಜಾಗತಿಕ ಆರ್ಥಿಕತೆ ಮತ್ತು ದೇಶದ ತಯಾರಕರ ಮೇಲೆ ಪರಿಣಾಮ ಬೀರಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷ, ಹೆಚ್ಚಿದ ಸ್ಪರ್ಧೆ, ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯು ಮತ್ತು ಬೆಲೆ ಒತ್ತಡವು ಬೆಳವಣಿಗೆ ಇಳಿಕೆಗೆ ಕಾರಣವಾಗಿವೆ. ಜೊತೆಗೆ ಸರಕುಗಳಿಗೆ ಹೊಸ ಕಾರ್ಯಾದೇಶ ಮತ್ತು ಉತ್ಪಾದನೆ ನಿಧಾನವಾಗಿದೆ ಎಂದು ಹೇಳಿದೆ.

ಉತ್ಪಾದನೆ ಹಾಗೂ ಹೊಸ ಕಾರ್ಯಾದೇಶಗಳ ಬೆಳವಣಿಗೆ ಪ್ರಮಾಣವು ಕಡಿಮೆ ಆಗಿದೆ. ಅಂದರೆ ಬೇಡಿಕೆ ತಗ್ಗಿರುವುದನ್ನು, ಅನಿಶ್ಚಿತತೆ ಹೆಚ್ಚಾಗಿರುವುದನ್ನು ಇದು ತೋರಿಸುತ್ತಿದೆ ಎಂದು ತಿಳಿಸಿದೆ.

ರಕ್ಷಣಾ ಉಪಕರಣಗಳ ರಫ್ತು ಭಾರಿ ಏರಿಕೆ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ದೇಶದ ರಕ್ಷಣಾ ಉಪಕರಣಗಳ ರಫ್ತು ಪ್ರಮಾಣವು ಶೇಕಡ 62ರಷ್ಟು ಹೆಚ್ಚಳ ಕಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

2025–26ರಲ್ಲಿ ರಕ್ಷಣಾ ಉಪಕರಣಗಳ ರಫ್ತು ಮೊತ್ತವು ₹38,424 ಕೋಟಿ ಆಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮೊತ್ತ. ರಕ್ಷಣಾ ಉಪಕರಣಗಳ ರಫ್ತಿನಲ್ಲಿ ಆಗಿರುವ 'ಭಾರಿ ಜಿಗಿತ'ವು ಭಾರತದ ಸಾಮರ್ಥ್ಯದ ಮೇಲೆ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ವಿಶ್ವಾಸವನ್ನು ತೋರಿಸುತ್ತಿದೆ ಎಂದು ಸಿಂಗ್ ಅವರು ಎಕ್ಸ್ ಮೂಲಕ



ತಿಳಿಸಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಆಗಿದ್ದ ರಫ್ತಿನ ಮೊತ್ತಕ್ಕೆ ಹೋಲಿಸಿದರೆ 2025–26ರಲ್ಲಿ ಮೊತ್ತವು ₹14,802 ಕೋಟಿಯಷ್ಟು ಜಾಸ್ತಿ ಆಗಿದೆ.

ರಫ್ತು ವಹಿವಾಟಿನಲ್ಲಿ ಸರ್ಕಾರಿ ಸ್ವಾಮ್ಯದ ರಕ್ಷಣಾ ಕಂಪನಿಗಳ ಪಾಲು ಶೇ 54.84ರಷ್ಟು ಇದೆ. ಖಾಸಗಿ ಕಂಪನಿಗಳ ಪಾಲು ಶೇ 45.16ರಷ್ಟು ಇದೆ. 2024–25ರಲ್ಲಿ ರಫ್ತು ಮೊತ್ತವು ₹23,622 ಕೋಟಿ ಆಗಿತ್ತು.

'ಭಾರತೀಯ ರಕ್ಷಣಾ ಉದ್ಯಮದ ಈ ಸಾಧನೆಯು, ಭಾರತವು ರಕ್ಷಣಾ ಉಪಕರಣಗಳ ರಫ್ತಿನಲ್ಲಿ ಮುಂಚೂಣಿ ಸ್ಥಾನಕ್ಕೆ ಬರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೊಂದಿರುವ ದೂರದೃಷ್ಟಿಗೆ ಅನುಗುಣವಾಗಿ ಇದೆ' ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ. 2025–26ನೇ ಸಾಲಿನ ರಫ್ತು ಮೊತ್ತವು ಮೈಲಿಗಲ್ಲು ಎಂದು ಅದು ಬಣ್ಣಿಸಿದೆ.

ಭಾರತದಲ್ಲಿ ತಯಾರಾದ ರಕ್ಷಣಾ ಉತ್ಪನ್ನಗಳನ್ನು ಜಗತ್ತು ಒಪ್ಪಿಕೊಳ್ಳುವುದು ಹೆಚ್ಚುತ್ತಿದೆ ಎಂಬುದನ್ನು, ಜಾಗತಿಕ ಮಟ್ಟದ ಪೂರೈಕೆ ವ್ಯವಸ್ಥೆಯಲ್ಲಿ ಭಾರತದ ಉತ್ಪನ್ನಗಳು ಒಂದಾಗುತ್ತಿರುವುದನ್ನು ಈ ಹೆಚ್ಚಳವು ತೋರಿಸುತ್ತಿದೆ ಎಂದು ಕೂಡ ಸಚಿವಾಲಯ ಹೇಳಿದೆ.

ಭಾರತವು 2025–26ನೆಯ ಹಣಕಾಸು ವರ್ಷದಲ್ಲಿ 80ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡಿದೆ. ರಫ್ತು ಮಾಡುವವರ ಸಂಖ್ಯೆಯು 128 ಇದ್ದಿದ್ದು 145ಕ್ಕೆ ತಲುಪಿದೆ.

ಒರಾಕಲ್: 30 ಸಾವಿರ ಸಿಬ್ಬಂದಿ ವಜಾ

ನವದೆಹಲಿ (ಪಿಟಿಐ): ಅಮೆರಿಕ ಮೂಲದ ಮಾಹಿತಿ ತಂತ್ರಜ್ಞಾನ ಕಂಪನಿ ಒರಾಕಲ್, ಜಾಗತಿಕವಾಗಿ ತನ್ನ 30 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿದೆ.

ಈ ಪೈಕಿ ಭಾರತದಲ್ಲಿ ಅಂದಾಜು 12 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಿದೆ. ಮತ್ತೊಂದು ಸುತ್ತಿನ ವಜಾ ಪ್ರಕ್ರಿಯೆಯನ್ನು ತಿಂಗಳೊಳಗೆ ನಡೆಸಲು ಕಂಪನಿ ಯೋಜಿಸಿದೆ ಎಂದು ಕೆಲಸದಿಂದ ವಜಾಗೊಂಡ ಇಬ್ಬರು ಉದ್ಯೋಗಿಗಳು ತಿಳಿಸಿದ್ದಾರೆ.

ಭಾರತದಲ್ಲಿ ಕಂಪನಿಯು 30 ಸಾವಿರ ಉದ್ಯೋಗಿಗಳನ್ನು ಹೊಂದಿದೆ. ಇದರಲ್ಲಿ ವಜಾಗೊಳ್ಳುವವರು ಸೇರಿದ್ದಾರೆ.

ಒರಾಕಲ್ ವಜಾ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿದೆ.

ಈ ಕುರಿತು ಉದ್ಯೋಗಿಗಳಿಗೆ ಇ–ಮೇಲ್ ಮಾಡಿರುವ ಕಂಪನಿ, ಕೆಲವು ಸಾಂಸ್ಥಿಕ ಬದಲಾವಣೆಗಳಿಂದಾಗಿ ವಜಾ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

02-04-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1790 (1790)
ಒಂದು ವಾರದ ಡೆಲಿವರಿ	1785 (1785)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,45,400 (1,49,000)
ಬೆಳ್ಳಿ ಕೆ.ಜಿಗೆ	2,26,000 (2,39,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರೂಪಾಯಿ ಮೌಲ್ಯ 152 ಪೈಸೆ ಹೆಚ್ಚಳ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರ 152 ಪೈಸೆಯಷ್ಟು ಹೆಚ್ಚಳ ಕಂಡಿದೆ. ಇದು ಒಂದು ದಿನದ ಅವಧಿಯಲ್ಲಿ ಈಚಿನ ವರ್ಷಗಳಲ್ಲಿ ರೂಪಾಯಿ ಮೌಲ್ಯದಲ್ಲಿ ಆದ ಅತಿದೊಡ್ಡ ಏರಿಕೆ.

ಗುರುವಾರದ ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು 94.62 ಆಗಿತ್ತು. ಇದು ವಹಿವಾಟಿನ ಅಂತ್ಯಕ್ಕೆ 93.18 ಆಗಿದೆ. ರೂಪಾಯಿ ಮೌಲ್ಯದ ಕುಸಿತವನ್ನು ತಡೆಯಲು ಆರ್‌ಬಿಐ ಹಲವು ಕ್ರಮಗಳನ್ನು ಕೈಗೊಂಡಿದೆ.

ಅಡಿಕೆ ಧಾರಣೆ

ಚಿತ್ರದುರ್ಗ					
ಅಪಿ	54219-54629	ಹೊಸತು	26000-49000	ಚಾಲಿ	41009-48809
ಬೆಟ್ಟೆ	37649-38089	**ಶಿವಮೊಗ್ಗ**		ಕೋಕ	23899-34689
ಕೆಂಪುಗೋಟು	31609-32010	ಬೆಟ್ಟೆ	60000-60000	ಕೆಂಪುಗೋಟು	29099-34189
ರಾಶಿ	53739-54169	ರಾಶಿ	53199-53699	ರಾಶಿ	48019-53269
ಪುತ್ತೂರು		ಗೊರಬಲು	21009-37799	ತಟ್ಟಿಬೆಟ್ಟೆ	38500-52699
ಕೋಕ	20000-34500	**ಸಿದ್ದಾಪುರ**			
		ಬಿಳಿಗೋಟು	27709-38419		

ಏರ್‌ಟೆಲ್: 2ನೇ ಅತಿದೊಡ್ಡ ದೂರಸಂಪರ್ಕ ಕಂಪನಿ

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವಾ ಕಂಪನಿ ಭಾರ್ತಿ ಏರ್‌ಟೆಲ್, 65 ಕೋಟಿ ಚಂದಾದಾರರನ್ನು ಹೊಂದಿದ್ದು, ಜಗತ್ತಿನ ಎರಡನೇ ಅತಿದೊಡ್ಡ ದೂರಸಂಪರ್ಕ ಸೇವಾ ಕಂಪನಿಯಾಗಿ ಹೊರಹೊಮ್ಮಿದೆ.

ಜಾಗತಿಕ ದೂರ ಸಂವಹನದ ಉದ್ದಿಮೆಯನ್ನು ಪ್ರತಿನಿಧಿಸುವ ಜಿಎಸ್‌ಎಂಎನ ಮಾರ್ಚ್ 31ರವರೆಗಿನ ಅಂಕಿ–ಅಂಶಗಳ ಪ್ರಕಾರ, ಭಾರ್ತಿ ಏರ್‌ಟೆಲ್ ಜಾಗತಿಕವಾಗಿ ಎರಡನೇ ಅತಿ ಹೆಚ್ಚು ಮೊಬೈಲ್ ಬಳಕೆದಾರರನ್ನು ಹೊಂದಿದೆ. ಕಂಪನಿಯು ಭಾರತ ಮತ್ತು ಆಫ್ರಿಕಾದಲ್ಲಿ ಕಾರ್ಯಾಚರಣೆ ಹೊಂದಿದೆ.

ಕಂಪನಿಯು ಭಾರತದಲ್ಲಿ 36.8 ಕೋಟಿ ಮತ್ತು ಆಫ್ರಿಕಾದ 14 ದೇಶಗಳಲ್ಲಿ 17.9 ಕೋಟಿಗೂ ಅಧಿಕ ಮೊಬೈಲ್ ಬಳಕೆದಾರರನ್ನು ಹೊಂದಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1780 (1780)
ಸೋಯಾ (ರಿಫೈನ್ಡ್)	₹1600 (1600)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1490 (1490)

ಈರುಳ್ಳಿ ಧಾರಣೆ

ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹800-1300
ಮಧ್ಯಮ	₹500-800
ಸಣ್ಣ	₹200-500

ಗುರಿ ಮೀರಿದ ಪರೋಕ್ಷ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪರೋಕ್ಷ ತೆರಿಗೆ ಸಂಗ್ರಹ ಪ್ರಮಾಣವು 2025–26ರಲ್ಲಿ ಕೇಂದ್ರ ಸರ್ಕಾರದ ಗುರಿಗಿಂತ ತುಸು ಹೆಚ್ಚಾಗಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.



ಸೀಮಾ ಸುಂಕ, ಎಕ್ಸೈಸ್ ಸುಂಕ ಮತ್ತು ಜಿಎಸ್‌ಟಿ ಒಳಗೊಂಡ ಪರೋಕ್ಷ ತೆರಿಗೆಗಳ ಸಂಗ್ರಹವು ಪರಿಷ್ಕೃತ ಅಂದಾಜಿನ ಪ್ರಕಾರ 2025–26ರಲ್ಲಿ ₹15.52 ಲಕ್ಷ ಕೋಟಿ. ಇದರಲ್ಲಿ ಸೀಮಾಸುಂಕದ ಮೊತ್ತ ₹2.58 ಲಕ್ಷ ಕೋಟಿ, ಎಕ್ಸೈಸ್ ಸುಂಕದ ಮೊತ್ತ ₹3.38 ಲಕ್ಷ ಕೋಟಿ ಹಾಗೂ ಕೇಂದ್ರ ಜಿಎಸ್‌ಟಿ ಮೊತ್ತ ₹9.58 ಲಕ್ಷ ಕೋಟಿ.

ಸೀಮಾ ಸುಂಕದ ಮೂಲಕ ಸಂಗ್ರಹ ಆಗಿರುವ ಮೊತ್ತವು ಪರಿಷ್ಕೃತ ಅಂದಾಜಿನ ಶೇ 102ರಷ್ಟು ಆಗಿದೆ. ಎಕ್ಸೈಸ್ ಸುಂಕದ ಮೊತ್ತವು ಪರಿಷ್ಕೃತ ಅಂದಾಜಿನ ಶೇ 101ರಷ್ಟು ಹಾಗೂ ಕೇಂದ್ರ ಜಿಎಸ್‌ಟಿ ಸಂಗ್ರಹವು ಪರಿಷ್ಕೃತ ಅಂದಾಜಿನ ಶೇ 100.8ರಷ್ಟು ಆಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಆದರೆ, ಪಾನ್ ಮಸಾಲಾ ತಯಾರಿಕೆಯ ಮೇಲೆ ವಿಧಿಸುವ ಆರೋಗ್ಯ ಹಾಗೂ ರಾಷ್ಟ್ರೀಯ ಭದ್ರತಾ ಸೆಸ್ ಮೂಲಕ ಸಂಗ್ರಹ ಆಗಿರುವ ಮೊತ್ತವು ಗುರಿಯ ಶೇ 63ರಷ್ಟು ಮಾತ್ರ ಆಗಿದೆ.

ಬುಕರ್: ಅಂತಿಮ ಪಟ್ಟಿಯಲ್ಲಿ ಭಾರತ ಮೂಲದ ಪದ್ಮಾ ವಿಶ್ವನಾಥನ್

ನವದೆಹಲಿ (ಪಿಟಿಐ): ಭಾರತ ಮೂಲದ ಕೆನಡಿಯನ್–ಅಮೆರಿಕನ್ ಬರಹಗಾರ್ತಿ ಪದ್ಮಾ ವಿಶ್ವನಾಥನ್ ಅವರು ಪೋರ್ಚುಗೀಸ್ ಭಾಷೆಯ ಕಾದಂಬರಿಯನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಕ್ಕಾಗಿ 2026ರ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದಾರೆ.

ಬ್ರೆಜಿಲ್ ಲೇಖಕಿ ಅನಾ ಪೌಲಾ ಮೈಯಾ ಅವರು ಪೋರ್ಚುಗೀಸ್ ಭಾಷೆಯಲ್ಲಿ ರಚಿಸಿರುವ 'ಆನ್ ಅರ್ಥ್ ಆ್ಯಸ್ ಇಟ್ ಈಸ್ ಬಿನೀತ್' ಕಾದಂಬರಿಯನ್ನು ಪದ್ಮಾ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಅಂತಿಮ ಪಟ್ಟಿಯಲ್ಲಿರುವ ಆರು ಪುಸ್ತಕಗಳನ್ನು ಮಂಗಳವಾರ ಘೋಷಿಸಲಾಯಿತು. ಇದರಲ್ಲಿ ಮಹಿಳೆಯರೇ ಪ್ರಾಬಲ್ಯ ಸಾಧಿಸಿದ್ದು, ಆರು ಸಾಹಿತಿಗಳಲ್ಲಿ ಐವರು ಹಾಗೂ ಅನುವಾದಕರಲ್ಲಿ 4 ಮಂದಿ ಮಹಿಳೆಯರೇ ಆಗಿದ್ದಾರೆ.

ಅಂತಿಮ ಪಟ್ಟಿಯಲ್ಲಿರುವ ಎಲ್ಲಾ ಆರೂ ಪುಸ್ತಕಗಳ ಕೃತಿಕಾರರು ಹಾಗೂ ಇಂಗ್ಲಿಷ್ ಅನುವಾದಕರಿಗೆ



ಪದ್ಮಾ ವಿಶ್ವನಾಥನ್

ತಲಾ ₹6.14 ಲಕ್ಷವನ್ನು ನೀಡಲಾಗುತ್ತದೆ. ಅಂತಿಮ ಸುತ್ತಿನಲ್ಲಿ ಗೆಲ್ಲುವ ಕೃತಿಗೆ 50 ಸಾವಿರ ಪೌಂಡ್ (₹61.50 ಲಕ್ಷಕ್ಕೂ ಹೆಚ್ಚು) ಬಹುಮಾನ ದೊರೆಯಲಿದೆ.

ಲಂಡನ್‌ನ ಟೇಟ್ ಮಾಡರ್ನ್‌ನಲ್ಲಿ ಮೇ 9ರಂದು ನಡೆಯುವ ಸಮಾರಂಭದಲ್ಲಿ ವಿಜೇತರನ್ನು ಘೋಷಿಸಲಾಗುತ್ತದೆ.

ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್' ಕಥಾ ಸಂಕಲನದ ಇಂಗ್ಲಿಷ್ ಅನುವಾದಕ್ಕೆ ದೀಪಾ ಭಾಸ್ತಿ ಅವರಿಗೆ 2025ರ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಒಲಿದು ಬಂದಿತ್ತು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕಿಶೋರ್ ಕುಮಾರ್, ರಾಜಾನುಕುಂಟೆ, ಬೆಂಗಳೂರು

• **ಪ್ರಶ್ನೆ: ನಾನು ಬಹಳಷ್ಟು ಹೂಡಿಕೆಗಳನ್ನು ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡಿದ್ದೇನೆ. ಪ್ರಸ್ತುತ ಮಾರುಕಟ್ಟೆ ಬಹಳ ಇಳಿಕೆಯಾಗಿದೆ. ನನ್ನ ಹೂಡಿಕೆಗಳೂ ಇಳಿಕೆಯಾಗಿವೆ. ಲಾಭದಲ್ಲಿದ್ದವು ಅಸಲು ಬೆಲೆಯ ಸನಿಹದಲ್ಲಿ ಬಂದು ನಿಂತಿವೆ ಹಾಗೂ ಇನ್ನು ಕೆಲವು ಹೂಡಿಕೆಗಳು ನಷ್ಟಕ್ಕೆ ತಿರುಗಿವೆ. ಇಂತಹ ಸಮಯದಲ್ಲಿ ಯಾವ ರೀತಿ ಹೂಡಿಕೆ ಮಾಡಲಿ. ಚಿನ್ನ, ಬೆಳ್ಳಿ ಇತ್ಯಾದಿ ಕೂಡ ವೇಗವಾಗಿ ಏರಿ ಮತ್ತೆ ಇಳಿಮುಖ ಗತಿಯಲ್ಲಿದೆ. ಇದು ಮರು ಹೂಡಿಕೆಗೆ ಆತಂಕ ಹಾಗೂ ಸಂದೇಹವನ್ನು ಹೆಚ್ಚಿಸುತ್ತಿದೆ. ನನ್ನಲ್ಲಿ ಒಂದಷ್ಟು ಹೆಚ್ಚುವರಿ ಉಳಿತಾಯದ ಹಣವೂ ಇದೆ. ಈಗ ಸಂಭವಿಸಿದ ನಷ್ಟ ಸರಿದೂಗಿಸಲು ಅದನ್ನು ಕಮೋಡಿಟಿ ಅಥವಾ ಕರೆನ್ಸಿ ಹೂಡಿಕೆಗೆ ಬಳಸಿಕೊಳ್ಳಲು ಉತ್ತಮ ಸಮಯಾವಕಾಶವೇ?**

ಉತ್ತರ: ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷದ ಪರಿಸ್ಥಿತಿ, ತೈಲ ಹಾಗೂ ಅನಿಲ ಸರಬರಾಜಿನಲ್ಲಿ ಸಂಕಷ್ಟದ ಹಿನ್ನೆಲೆಯಲ್ಲಿ ಹೂಡಿಕೆದಾರರು ಅತ್ಯಂತ ಜಾಗರೂಕ ಮತ್ತು ಸಮತೋಲನದ ದೃಷ್ಟಿಕೋನವನ್ನು ಅನುಸರಿಸುವುದು ಅಗತ್ಯವಾಗಿದೆ. ಇಂತಹ ಅಸ್ಥಿರ ಪರಿಸ್ಥಿತಿಯಲ್ಲಿ ಜಾಗತಿಕ ಮಾರುಕಟ್ಟೆಗಳು ಅನಿಶ್ಚಿತತೆಯಲ್ಲಿರುತ್ತವೆ. ಕಾರಣ ಪ್ರತಿ ಕ್ಷಣದ ಸುದ್ದಿಗಳು ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸುತ್ತಿದೆ. ಇಂಧನ ಬೆಲೆ ಏರಿಕೆ, ಸರಕು ಸರಬರಾಜು ಸರಪಳಿ ವ್ಯತ್ಯಯ, ಹಣದುಬ್ಬರ ಹೆಚ್ಚಳದ ಆತಂಕ, ಇವುಗಳ ಪರಿಣಾಮವಾಗಿ ಷೇರು ಮಾರುಕಟ್ಟೆ, ಬಾಂಡ್ ಮಾರುಕಟ್ಟೆ, ಸರಕು, ಬೆಳ್ಳಿ-ಬಂಗಾರ ಮತ್ತು ಕರೆನ್ಸಿ ಸೇರಿದಂತೆ ಬಹುತೇಕ ಎಲ್ಲಾ ಆಸ್ತಿ ವರ್ಗಗಳ ಮೇಲೆ ಪ್ರಸ್ತುತ ಸ್ಥಿತಿ ಆರ್ಥಿಕವಾಗಿ ದುಷ್ಪರಿಣಾಮ ಬೀರಿದೆ. ವಿಶೇಷವಾಗಿ ಉತ್ಪಾದನೆ, ಸಾರಿಗೆ, ಬ್ಯಾಂಕಿಂಗ್, ಗ್ರಾಹಕ ಉಪಭೋಗಿ ವಸ್ತು ಹಾಗೂ ರಿಯಲ್ ಎಸ್ಟೇಟ್ ಕ್ಷೇತ್ರಗಳ ಲಾಭಾಂಶದ ಮೇಲೆ ಅತೀವ ಒತ್ತಡ ಮುಂದಿನ ತ್ರೈಮಾಸಿಕಗಳಲ್ಲಿ ಕಾಣಿಸಬಹುದು. ಹೀಗಾಗಿ ಸಹಜವಾಗಿ ಯಾವುದೇ ವರ್ಗದ ಹೂಡಿಕೆದಾರರಿಗಾದರೂ ಆಯ್ಕೆ ಮಾಡಬೇಕಾಗುವ ಹೂಡಿಕೆ ಕ್ಷೇತ್ರ ಈ ಬಾರಿ ಸವಾಲಿನದ್ದೇ ಸರಿ.

ಪರಿಸ್ಥಿತಿ ಹೀಗಿರುವಾಗ, ಯಾವುದೇ ಹೂಡಿಕೆದಾರರು ಅನುಸರಿಸಬೇಕಾದ ಸಾಮಾನ್ಯ ಕ್ರಮಗಳ ಜೊತೆಗೆ, ತಪ್ಪದೇ ಪಾಲಿಸಬೇಕಾಗದ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ಇಂತಹ ಅಸ್ಥಿರ ಸಮಯದಲ್ಲಿ ಕೈಗೊಳ್ಳುವ ತಪ್ಪು ನಿರ್ಧಾರಗಳು ಸಂಪೂರ್ಣ ಪೋರ್ಟ್‌ಫೋಲಿಯೊದ ಮೇಲೆ ದೀರ್ಘಕಾಲಿಕ ಹಾನಿ ಉಂಟುಮಾಡುವ ಸಾಧ್ಯತೆ ಇದೆ.

ಇಂತಹ ಸಮಯದಲ್ಲಿ 'ಮಲ್ಟಿ-ಅಸೆಟ್ ಅಲೋಕೇಶನ್' ಮತ್ತು 'ಸೆಕ್ಟರ್ ಡೈವರ್ಸಿಫಿಕೇಶನ್' ಅತ್ಯಂತ ಮುಖ್ಯ. ಹೂಡಿಕೆಗಳನ್ನು ಒಂದೇ ಕ್ಷೇತ್ರ ಅಥವಾ ಒಂದೇ ಆಸ್ತಿ ವರ್ಗದಲ್ಲಿ ಕೇಂದ್ರೀಕರಿಸುವುದನ್ನು ತಪ್ಪಿಸಿ, ಷೇರುಗಳು, ಸಾಲಪತ್ರಗಳು, ಚಿನ್ನ ಮತ್ತು ಅಗತ್ಯವಿದ್ದಲ್ಲಿ ಲಿಕ್ವಿಡ್ ಫಂಡ್ಸ್‌ನಲ್ಲಿ ಸಮತೋಲನ ಕಾಪಾಡಬೇಕು. ಚಿನ್ನವು ಸಾಮಾನ್ಯವಾಗಿ ಅಸ್ಥಿರ ಸಮಯದಲ್ಲಿ ಸುರಕ್ಷಿತ ಹೂಡಿಕೆ ಆಗಿರುವುದರಿಂದ, ಪೋರ್ಟ್‌ಫೋಲಿಯೊದಲ್ಲಿ ಒಂದು ಭಾಗವನ್ನು ಚಿನ್ನದಂತಹ ಆಸ್ತಿಗಳಲ್ಲಿ ಇರಿಸುವುದು ಸೂಕ್ತ.

ಪ್ರಸ್ತುತ ಚಿನ್ನ, ಬೆಳ್ಳಿಯಂತಹ ಲೋಹಗಳಲ್ಲಿ ಆದ ಹಠಾತ್ ಏರಿಳಿತ ಎಲ್ಲರನ್ನೂ ಅಚ್ಚರಿಗೊಳಿಸಿದೆ. ಹೀಗಾಗಿ ಚಿನ್ನ ಸುರಕ್ಷಿತ ಹೂಡಿಕೆ ಉತ್ಪನ್ನ ಎನ್ನುವ ಬಿರುದು ಹೊಂದಿದ್ದರೂ ಯುದ್ಧ, ಕ್ಷಾಮಗಳಂತಹ ಅಪರೂಪದ ಸನ್ನಿವೇಶಗಳಲ್ಲಿ ನಮ್ಮ ಸಾಮಾನ್ಯ ಮುಂಜಾಗರೂಕತೆ ಸಾಕಾಗುವುದಿಲ್ಲ. ಹೀಗಾಗಿ ಹೆಚ್ಚುವರಿ ಮುಂಜಾಗ್ರತೆ ಕ್ರಮ ಅಗತ್ಯ. ಪ್ರಸ್ತುತ ಶೇಕಡ 30ರಷ್ಟು ಮೌಲ್ಯ ಅದರ ಉನ್ನತ ಮಟ್ಟದಿಂದ ಕುಸಿದಿದೆ. ಇದು ಒಂದೆರಡು ವಾರಗಳ ಅಲ್ಪಾವಧಿಯಲ್ಲಿ ಕಂಡುಬಂದ ದಾಖಲೆ ಪ್ರಮಾಣದ ಇಳಿಕೆಯಾಗಿದೆ. ಇದಕ್ಕೆ ಕಾರಣ, ಡಾಲರ್ ಇಂಡೆಕ್ಸ್‌ನಲ್ಲಾದ ವೃದ್ಧಿ ಹಾಗೂ ಅಮೆರಿಕದ ಬಡ್ಡಿ ದರಗಳ ಉತ್ಪತ್ತಿಯಲ್ಲಿ ಕಂಡುಬಂದ ಏರಿಕೆ. ಇದಲ್ಲದೆ ಆಕಸ್ಮಿಕವಾಗಿ ಈ ಯುದ್ಧ ಎಲ್ಲ ದೇಶಗಳ ಆರ್ಥಿಕತೆ ಮೇಲೆ ಪರಿಣಾಮ ಬೀರಿದೆ. ಅನೇಕ ದೇಶಗಳು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಹತೋಟಿಗೆ ತರಲು ಮತ್ತು ತಮ್ಮ ಕರೆನ್ಸಿಯಲ್ಲಿಯ ಅಪಮೌಲ್ಯವನ್ನು ನಿಯಂತ್ರಿಸಲು ತಮ್ಮಲ್ಲಿರುವ ಚಿನ್ನ ಮಾರಾಟ ಮಾಡುವುದು ಅನಿವಾರ್ಯವಾಗಿದೆ. ಹೀಗಾಗಿ ಸಾಕಷ್ಟು ಪೂರೈಕೆ ಇರುವಾಗ ಬೆಲೆ ಸಹಜವಾಗಿ ಕುಸಿಯುತ್ತದೆ. ಹೀಗಾಗಿ ಈ ಅವಕಾಶಗಳನ್ನು ಬಳಸಿ ಹಂತ ಹಂತದಲ್ಲಿ ಗೋಲ್ಡ್ ಫಂಡ್, ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಬಹುದು. ಕೇವಲ ಒಂದಷ್ಟು ಪ್ರಮಾಣದ ಮೊತ್ತವನ್ನಷ್ಟೇ ಇಲ್ಲಿ ಬಳಸಿಕೊಳ್ಳಿ.

ಯಾವುದೇ ಹೂಡಿಕೆಗಳನ್ನು ಹೆಚ್ಚುವರಿ ಹೂಡಿಕೆ ಮಾಡುವಾಗ ಹಂತ ಹಂತವಾಗಿ ಹೂಡಿಕೆ ಮಾಡುವುದು ಸೂಕ್ತ. ಮಾರುಕಟ್ಟೆಯ ಅಸ್ಥಿರತೆಯನ್ನು ಗಮನಿಸಿ, ಎಸ್‌ಐಪಿ ಅಥವಾ ಹಂತ ಹಂತವಾಗಿ ಹೂಡಿಕೆ ಮಾಡುವುದರಿಂದ ಸರಾಸರಿ ಖರೀದಿ ಬೆಲೆಯನ್ನು ನಿಯಂತ್ರಿಸಬಹುದು. ಒಂದೇ ಬಾರಿಗೆ ನಿಮ್ಮಲ್ಲಿರುವ ದೊಡ್ಡ ಉಳಿತಾಯದ ಮೊತ್ತವನ್ನು ಹೂಡಿಕೆ ಮಾಡುವುದನ್ನು ತಪ್ಪಿಸಿ, ಮಾರುಕಟ್ಟೆ ಕುಸಿತಗಳನ್ನು ಅವಕಾಶವಾಗಿ ಪರಿಗಣಿಸಿ ನಿಧಾನವಾಗಿ ಹೂಡಿಕೆ ಹೆಚ್ಚಿಸುವುದು ಉತ್ತಮ.

ಇದೇ ಸಂದರ್ಭದಲ್ಲಿ, ಲಿಕ್ವಿಡಿಟಿ ನಿರ್ವಹಣೆ ಮತ್ತು ಸ್ವಂತ ಅಗತ್ಯಗಳಿಗಾಗಿ ತುರ್ತು ನಿಧಿ ಕಾಪಾಡಿಕೊಳ್ಳುವುದು ಅತ್ಯಗತ್ಯ. ಯಾವುದೇ ಆರ್ಥಿಕ ಅಡಚಣೆಗೆ ತಕ್ಷಣ ಸ್ಪಂದಿಸಲು ಕನಿಷ್ಠ 6 ತಿಂಗಳ ವೆಚ್ಚಕ್ಕೆ ಸಮಾನವಾದ ಉಳಿತಾಯ ಇರಬೇಕು. ಇದನ್ನು ಮಾರುಕಟ್ಟೆಯಲ್ಲಿ ತೊಡಗಿಸದಿರಿ. ಇದಲ್ಲದೆ, ಹೆಚ್ಚಿನ ಅಪಾಯದ ಮತ್ತು ಸ್ಪೆಕ್ಯುಲೇಟಿವ್ ಹೂಡಿಕೆಗಳಿಂದಲೂ ದೂರವಿರಿ. ಉದಾಹರಣೆಗೆ, ಅತಿಯಾದ ಲೆವರೇಜ್ ಬಳಸುವುದು, ಫ್ಯೂಚರ್ಸ್ ಮತ್ತು ಆಪ್ಷನ್ಸ್‌ಗಳಲ್ಲಿ ಸಮರ್ಪಕ ತಿಳಿವಳಿಕೆ ಇಲ್ಲದೆ ವ್ಯವಹರಿಸುವುದು ಅಥವಾ ಕ್ಷಿಪ್ರ ಲಾಭ ನೀಡುವ ಯಾವುದೇ ಹೂಡಿಕೆ ತಂತ್ರಗಳಿಗೆ ಮಾರುಹೋಗದಿರಿ. ಪ್ರಸ್ತುತ ಪರಿಸ್ಥಿತಿಯಲ್ಲಂತು ಇವುಗಳಲ್ಲಿ ಆರ್ಥಿಕ ಅಪಾಯದ ಸಾಧ್ಯತೆ ಹೆಚ್ಚಾಗಿದೆ. ಒಟ್ಟಿನಲ್ಲಿ, ಇಂತಹ ಜಾಗತಿಕ ಅಸ್ಥಿರ ಪರಿಸ್ಥಿತಿಯಲ್ಲಿ ಜಾಣ್ಮೆಯ ನಡೆ, ದೀರ್ಘಾವಧಿ ದೃಷ್ಟಿಕೋನ ಮತ್ತು ನಿಯಮಿತ ಪೋರ್ಟ್‌ಫೋಲಿಯೊ ವಿಮರ್ಶೆ ಮುಖ್ಯ. ಭಾವನಾತ್ಮಕ ನಿರ್ಧಾರಗಳನ್ನು ಕೈಬಿಟ್ಟು, ವಾಸ್ತವ ಮಾಹಿತಿ ಆಧಾರಿತ ಕ್ರಮಗಳನ್ನು ಕೈಗೊಳ್ಳುವುದು ಹೂಡಿಕೆಯ ಯಶಸ್ಸಿನ ದೃಷ್ಟಿಯಿಂದ ಸೂಕ್ತವಾಗಿದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಇರಾನ್ ವಿರುದ್ಧ ತೀವ್ರ ದಾಳಿ: ಟ್ರಂಪ್

ಒಂದನೇ ಪುಟದಿಂದ...

'ನಮ್ಮ ಬಳಿ ಎಲ್ಲ ದಾರಿಗಳಿವೆ, ಆದರೆ ಅವರ ಬಳಿಯಿಲ್ಲ' ಎಂದು ಟ್ರಂಪ್ ಇದೇ ವೇಳೆ ಹೇಳಿದರು.

ಒಂದು ವೇಳೆ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಇರಾನ್‌ನ ಇಂಧನ ಮೂಲಸೌಕರ್ಯ ಮತ್ತು ತೈಲ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಅವರು ಬೆದರಿಸಿದರು. ಯುದ್ಧ ಮುಗಿದ ಬಳಿಕ ಹೊರ್ಮುಜ್ ಜಲಸಂಧಿ ಸಹಜವಾಗಿಯೇ ತೆರೆಯುತ್ತದೆ ಎಂದೂ ಅವರು ಉಲ್ಲೇಖಿಸಿದರು. ಆದರೆ ಯುದ್ಧ ಕೊನೆಗೊಳಿಸಲು ಅವರು ಯಾವುದೇ ಸ್ಪಷ್ಟ ಸಮಯವನ್ನು ನಿಗದಿಪಡಿಸಲಿಲ್ಲ.

'ಮತ್ತೊಂದೆಡೆ, ಮಾತುಕತೆಗಳು ನಡೆಯುತ್ತಿವೆ. ಈ ಅವಧಿಯಲ್ಲಿ ಯಾವುದೇ ಒಪ್ಪಂದ ನಡೆಯದಿದ್ದರೆ ನಾವು ಇರಾನ್‌ನ ಪ್ರಮುಖ ನೆಲೆಗಳನ್ನು ಗುರಿಯಾಗಿಸುತ್ತೇವೆ' ಎಂದು ಅವರು ಎಚ್ಚರಿಸಿದರು.

ಪ್ರತಿದಾಳಿಗೆ ಸಜ್ಜಾಗಿ: ಇರಾನ್

ದುಬೈ (ಎಪಿ): ಅಮೆರಿಕ, ಇಸ್ರೇಲ್ ಎಷ್ಟೇ ತೀವ್ರ ದಾಳಿಗಳನ್ನು ನಡೆಸಿದರೂ ಅದನ್ನು ಸಮರ್ಥವಾಗಿ ಎದುರಿಸಲು ಮತ್ತು ಅಷ್ಟೇ ಪ್ರಬಲವಾಗಿ ಪ್ರತಿದಾಳಿ ನಡೆಸಲು ಎಲ್ಲ ರೀತಿಯಲ್ಲೂ ಸಜ್ಜಾಗಿರುವಂತೆ ಇರಾನ್‌ನ ಸೇನಾ ಮುಖ್ಯಸ್ಥ ಜನರಲ್ ಅಮೀರ್ ಹತಾಮಿ ಅವರು ಸೇನೆಗೆ ಸೂಚಿಸಿದ್ದಾರೆ.

ಶತ್ರು ಪಡೆಗಳು ಇರಾನ್ ನೆಲದ ಮೇಲೆ ಕಾರ್ಯಾಚರಣೆಗೆ ಮುಂದಾದರೆ, ಅವುಗಳ ಯಾವುದೇ ಯೋಧ ಬದುಕುಳಿಯುವುದಿಲ್ಲ ಎಂದು ಹತಾಮಿ ಹೇಳಿದ್ದಾರೆ.

ಮೂವರು ಸೇನಾ ಕಮಾಂಡರ್‌ಗಳ ಜತೆಗೂಡಿ, ವಿಡಿಯೊ ಕರೆ ಮೂಲಕ 10ಕ್ಕೂ ಹೆಚ್ಚು ಸೇನಾ ನಾಯಕರ ಜತೆಗೆ ಹತಾಮಿ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶತ್ರುಗಳು ಶರಣಾಗುವವರೆಗೂ ಯುದ್ಧ: 'ಶತ್ರುಗಳಾದ ಅಮೆರಿಕ ಮತ್ತು ಇಸ್ರೇಲ್ ಶರಣಾಗುವವರೆಗೆ ಪಶ್ಚಿಮ ಏಷ್ಯಾದಲ್ಲಿ ಯುದ್ಧವನ್ನು ಮುಂದುವರಿಸಲಾಗುವುದು' ಎಂದು ಇರಾನ್‌ನ ಸಶಸ್ತ್ರ ಪಡೆಗಳ ಏಕೀಕೃತ ಕಮಾಂಡ್‌ನ ವಕ್ತಾರ ಇಬ್ರಾಹಿಂ ಝೊಲ್ಫಕಾರಿ ತಿಳಿಸಿದ್ದಾರೆ.

ಇರಾನ್‌ನ ಸೇನಾ ಸಾಮರ್ಥ್ಯಗಳ ಬಗ್ಗೆ ಅಮೆರಿಕ ಮತ್ತು ಇಸ್ರೇಲ್‌ನವರಿಗೆ ತಿಳಿದಿಲ್ಲ. ಈ ಬಗ್ಗೆ ಅವರು ಮಾಡಿರುವ ಮೌಲ್ಯಮಾಪನ ಅಪೂರ್ಣ. ಇರಾನ್ ತನ್ನ ಸೇನಾ ಪ್ರತಿದಾಳಿಯನ್ನು ಹೆಚ್ಚಿಸಲಿದ್ದು, ವಿರೋಧಿಗಳನ್ನು ಪುಡಿಗಟ್ಟಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಹೊರ್ಮುಜ್: 40 ದೇಶಗಳ ಸಭೆ

ಒಂದನೇ ಪುಟದಿಂದ...

ಈ ಶೃಂಗಸಭೆಯು ಸೇನಾ ಆಯ್ಕೆಗಳಿಗೆ ವಿರುದ್ಧವಾಗಿ ರಾಜತಾಂತ್ರಿಕ ಕ್ರಮಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ ಎಂದು ತಿಳಿಸಿದರು.

'ಹೊರ್ಮುಜ್ ಜಲಸಂಧಿಯನ್ನು ಇರಾನ್ ಅಪರಹರಿಸಿದೆ. ಈ ಮೂಲಕ ಅದು ಜಾಗತಿಕ ಆರ್ಥಿಕತೆಗೆ ದೊಡ್ಡ ಪೆಟ್ಟು ನೀಡಿದೆ' ಎಂದು ಕೂಪರ್ ಹೇಳಿದರು. ಇದರಿಂದ ಕುವೈತ್, ಬಹರೇನ್, ಕತಾರ್, ಯುಎಇ, ಸೌದಿ, ಒಮಾನ್, ಇರಾಕ್‌ನ ವ್ಯಾಪಾರ ಮಾರ್ಗಗಳಿಗೆ ತೊಂದರೆಯಾಗಿದೆ ಎಂದರು. ಭಾರತವನ್ನು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಪ್ರತಿನಿಧಿಸಿದ್ದರು.

20 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್

ಭೂತಾನ್ ವಿರುದ್ಧ ಗೆದ್ದ ಭಾರತ ಫೈನಲ್‌ಗೆ

ಮಾಲೆ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ ಬುಧವಾರ ರಾತ್ರಿ ನಡೆದ ಸೆಮಿಫೈನಲ್‌ನಲ್ಲಿ 5–0 ಗೋಲುಗಳಿಂದ ಭೂತಾನ್ ತಂಡವನ್ನು ಸೋಲಿಸಿ ಸ್ಯಾಫ್ ಪುರುಷರ (20 ವರ್ಷದೊಳಗಿನವರ) ಫುಟ್‌ಬಾಲ್ ಚಾಂಪಿಯನ್‌ಷಿಪ್ ಫೈನಲ್ ತಲುಪಿತು.

ಇಲ್ಲಿನ ನ್ಯಾಷನಲ್ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ವಿರಾಮದ ವೇಳೆಗೆ 2–0 ಗೋಲುಗಳಿಂದ ಮುಂದಿತ್ತು.

ರೋಹೆನ್ ಚಫಾಮಯುಮ್ (56 ಮತ್ತು 57ನೇ ನಿಮಿಷ) ಎರಡು ಗೋಲು ಗಳಿಸಿದರೆ, ಒಮಾಂಗ್ ದೊಡುಮ್ (5ನೇ), ಮೊಹಮ್ಮದ್ ಅರ್ಬಾಷ್ (44ನೇ) ಮತ್ತು ಥಕ್ಚೋಮ್ ಮಲೆಮ್‌ಗಂಬಾ (90 + 2) ತಲಾ ಒಂದೊಂದು ಗೋಲು ಗಳಿಸಿದರು. ವಿರಾಮದ ವೇಲೆ ವಿಜೇತ ತಂಡ 2–0 ಗೋಲುಗಳಿಂದ ಮುಂದಿತ್ತು.

ನಾಲ್ಕು ಬಾರಿ ಪ್ರಶಸ್ತಿ ಗೆದ್ದುಕೊಂಡಿರುವ ಭಾರತ ತಂಡ ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ. ಬಾಂಗ್ಲಾದೇಶ ತಂಡ ಇನ್ನೊಂದು ಸೆಮಿಫೈನಲ್‌ನಲ್ಲಿ 1–0 ಗೋಲಿನಿಂದ ನೇಪಾಳ ತಂಡವನ್ನು ಸೋಲಿಸಿತು.



ಗೆಲುವಿನ ಸಂಭ್ರಮದಲ್ಲಿ ಭಾರತ ಫುಟ್‌ಬಾಲ್ ತಂಡದ ಆಟಗಾರರು –ಎಕ್ಸ್ ಚಿತ್ರ

ವಿಶ್ವಕಪ್: ಭಾರತಕ್ಕೆ ಬರಿಗೈ

ಟಾಂಜೀರ್ (ಮೊರಕ್ಕೊ), (ಪಿಟಿಐ): ಭಾರತದ ಶೂಟರ್‌ಗಳು, ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಅಭಿಯಾನವನ್ನು ನಿರಾಶಾದಾಯಕವಾಗಿ ಪೂರೈಸಿದರು. ಗುರುವಾರ ಮಿಶ್ರ ತಂಡ ವಿಭಾಗದಲ್ಲಿ ಭಾರತದ ಎರಡೂ ತಂಡಗಳು ವಿಫಲವಾದವು. ಭಾರತ ಈ ವಿಶ್ವಕಪ್‌ನಲ್ಲಿ ಒಂದೂ ಪದಕ ಗೆಲ್ಲಲಾಗಲಿಲ್ಲ.

ಪುರುಷರ ಮತ್ತು ಮಹಿಳೆಯರ ಸ್ಕೀಟ್ ಮತ್ತು ಟ್ರ್ಯಾಪ್ ಸ್ಪರ್ಧೆಗಳಲ್ಲಿ ಭಾರತ ಕಳಪೆ ನಿರ್ವಹಣೆ ತೋರಿತ್ತು. ಒಲಿಂಪಿಯನ್‌ಗಳಾದ ಪೃಥ್ವಿರಾಜ್ ತೊಂಡೈಮನ್– ಕೃತಿ ಗುಪ್ತಾ ಜೋಡಿ 134 ಸ್ಕೋರ್‌ನೊಡನೆ ಮಿಶ್ರ ಡಬಲ್ಸ್‌ನಲ್ಲಿ 33 ತಂಡಗಳ ಪೈಕಿ 18ನೇ ಸ್ಥಾನ ಪಡೆಯಿತು.

ಹಾಕಿ: ಡ್ರಾ ಪಂದ್ಯದಲ್ಲಿ ಕರ್ನಾಟಕ

ಬೆಂಗಳೂರು: ಕರ್ನಾಟಕ ಬಾಲಕರ ತಂಡವು ರಾಜ್‌ಗಿರ್ ಹಾಕಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 16ನೇ ಸಬ್ ಜೂನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ದಿನವಾದ ಗುರುವಾರ 2–2ರಿಂದ ಅರುಣಾಚಲ ವಿರುದ್ಧ ಡ್ರಾ ಸಾಧಿಸಿತು.

ಬಿ ಗುಂಪಿನ ಪಂದ್ಯದಲ್ಲಿ ನಾಯಕ ಆದರ್ಶ್ ಗೋವಿಂದ್ (18ನೇ ಮತ್ತು 54ನೇ) ಅವರು ಕರ್ನಾಟಕದ ಪರ ಅವಳಿ ಗೋಲು ದಾಖಲಿಸಿದರು. ಅರುಣಾಚಲ ಪರ ನಾಯಕ ಕುಮಾರ್ ಶಶಾಂಕ್ (4ನೇ) ಮತ್ತು ಅಶ್ವನಿ ಪಟೇಲ್ (45ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಕರ್ನಾಟಕದ ಬಾಲಕರು ಬುಧವಾರ 5–0ಯಿಂದ ಹಿಮಾಚಲ ತಂಡವನ್ನು ಮಣಿಸಿ ಶುಭಾರಂಭ ಮಾಡಿದ್ದರು.

ಬಾಲಕಿಯರಿಗೆ ನಿರಾಸೆ: ರಾಂಚಿಯಲ್ಲಿ ನಡೆಯುತ್ತಿರುವ ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ ಕರ್ನಾಟಕ ತಂಡವು ಬಿ ಗುಂಪಿನ ಪಂದ್ಯದಲ್ಲಿ 1–6ರಿಂದ ಉತ್ತರಾಖಂಡ ತಂಡಕ್ಕೆ ಶರಣಾಯಿತು. ಇದು ಸತತ ಎರಡನೇ ಸೋಲು. ಮೊದಲ ದಿನ 1–2ರಿಂದ ಚಂಡೀಗಢ ತಂಡಕ್ಕೆ ಸೋತಿತ್ತು.

ಫುಟ್‌ಬಾಲ್: ರಾಜಾಜಿನಗರ ಕ್ವಾರ್ಟರ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ, ಸರ್ವಜ್ಞನಗರ ಮತ್ತು ಕೃಷ್ಣರಾಜಪುರ ತಂಡಗಳು ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ವೈಷ್ಣವಿ- ಸಿಎಂ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದವು.

ಗುರುವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ರಾಜಾಜಿನಗರ ತಂಡವು 6-1 ಗೋಲುಗಳಿಂದ ಯಲಹಂಕ ತಂಡವನ್ನು ಸೋಲಿಸಿತು. ರಾಜಾಜಿನಗರ ಪರ ಕವಿ ಅರಸನ್ (23ನೇ, 67ನೇ ಮತ್ತು 91 + 1ನೇ) ಹ್ಯಾಟ್ರಿಕ್ ಗೋಲು ದಾಖಲಿಸಿದರು. ಸೂರ್ಯಪ್ರಕಾಶ್ ಬಿ (44ನೇ), ಡಿ.ಧನುಷ್ (90 + 3ನೇ), ಮೋನಿಶ್ ಕುಮಾರ್ ಜಿ. (90 + 5ನೇ) ತಲಾ ಒಂದು ಗೋಲು ಬಾರಿಸಿದರು. ಪ್ರದೀಪ್ ಎಸ್. (56ನೇ) ಯಲಹಂಕ ತಂಡಕ್ಕೆ ಏಕೈಕ ಗೋಲು ತಂದಿತ್ತರು.

ಡಿ ಗುಂಪಿನ ಪಂದ್ಯದಲ್ಲಿ ಸರ್ವಜ್ಞನಗರ 2–2ರಿಂದ ಕೃಷ್ಣರಾಜಪುರ ತಂಡದೊಂದಿಗೆ ಡ್ರಾ ಸಾಧಿಸಿತು. ಇದರೊಂದಿಗೆ ಎರಡೂ ತಂಡಗಳು ಅಂತಿಮ ಎಂಟರ ಘಟ್ಟಕ್ಕೆ ಅರ್ಹತೆ ಪಡೆದವು.



ರಾಜಾಜಿನಗರ ಮತ್ತು ಯಲಹಂಕ (ಹಳದಿ) ತಂಡಗಳ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು

ಗೆಲುವಿನೊಡನೆ ಅಗ್ರಸ್ಥಾನಕ್ಕೆ ಸಿಂದರೋವ್

ಪಾಫೋಸ್: ಪ್ರಶಸ್ತಿಗೆ ನೆಚ್ಚಿನ ಆಟಗಾರನಾದ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಬುಧವಾರ 35 ನಡೆಗಳಲ್ಲಿ ಸೋಲಿಸಿದ ವಿಶ್ವಕಪ್ ಚಾಂಪಿಯನ್ ಜಾವೊಖಿರ್ ಸಿಂದರೋವ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಅಗ್ರಸ್ಥಾನ ಕ್ಕೇರಿದರು. 20 ವರ್ಷ ವಯಸ್ಸಿನ ಸಿಂದರೋವ್ 4 ಸುತ್ತುಗಳಿಂದ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ.



ಓಪನ್ ವಿಭಾಗದಲ್ಲಿ ಮೂರನೇ ಸುತ್ತಿನವರೆಗೆ ಅಗ್ರಸ್ಥಾನ ಹಂಚಿಕೊಂಡಿದ್ದ ಕರುವಾನ (2.5) ಈಗ ಎರಡನೇ ಸ್ಥಾನದಲ್ಲಿದ್ದಾರೆ. ಎಂಟು ಮಂದಿ ಪಾಲ್ಗೊಂಡಿರುವ ಈ ಟೂರ್ನಿಯ ವಿಜೇತ ಆಟಗಾರ, ವರ್ಷದ ಕೊನೆಯಲ್ಲಿ ವಿಶ್ವ ಕಿರೀಟಕ್ಕೆ ನಡೆಯುವ ಸೆಣಸಾಟದಲ್ಲಿ ಗುಕೇಶ್ ಅವರನ್ನು ಎದುರಿಸಲಿದ್ದಾರೆ.

ಆರಂಭದ ಸುತ್ತುಗಳ ಹಿನ್ನಡೆ ಬಳಿಕ ಚೇತರಿಸಿಕೊಂಡ ನೆದರ್ಲೆಂಡ್ಸ್‌ನ ಅನಿಶ್ ಗಿರಿ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಆ್ಯಂಡ್ರಿ ಇಸಿಪೆಂಕೊ (1) ಅವರನ್ನು ಸೋಲಿಸಿದರು. ಇದು ಅನಿಶ್‌ಗೆ ಮೊದಲ ಜಯ. ಅನಿಶ್, ಪ್ರಜ್ಞಾನಂದ ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ ತಲಾ 2 ಅಂಕ ಸಂಗ್ರಹಿಸಿದ್ದಾರೆ. ಮಥಾಯಸ್ ಮತ್ತು ಪ್ರಜ್ಞಾನಂದ ತಮ್ಮ ನಡುವಣ ಪಂದ್ಯವನ್ನು 37 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಚೀನಾದ ವೀ ಯಿ (1.5) ಮತ್ತು ಹಿಕಾರು ನಕಾಮುರಾ (1.5) ಅವರೂ ಅಂಕ ಹಂಚಿಕೊಂಡರು.

ದಿವ್ಯಾಗೆ ಸೋಲು: ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್, ಭಾರತದ ದಿವ್ಯಾ ದೇಶಮುಖ್ (1.5) ನಾಲ್ಕನೇ ಸುತ್ತಿನಲ್ಲಿ ಚೀನಾದ ಝು ಜಿನೆರ್ (2) ಅವರಿಗೆ ಮಣಿದರು. ವೈಶಾಲಿ ರಮೇಶಬಾಬು ಮತ್ತು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (2) ನಡುವಣ ಪಂದ್ಯ ಡ್ರಾ ಆಯಿತು.

ಉಕ್ರೇನ್‌ನ ಅನ್ನಾ ಮುಝಿಚುಕ್ ಮತ್ತು ಕಜಾಕಸ್ತಾನದ ಬಿಬಿಸಾರ ಅಸುನ್‌ಬಯೇವಾ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ.

ಗುರುವಾರ ಟೂರ್ನಿಗೆ ಮೊದಲ ವಿರಾಮದ ದಿನವಾಗಿತ್ತು.

ಎಡರಂಗ ನಿರಾಳ; ಬಿಜೆಪಿ ಸವಾಲು

ಕಾಸರಗೋಡು, ಮಂಜೇಶ್ವರ ಕ್ಷೇತ್ರಗಳಲ್ಲಿ ಗೆಲುವಿಗೆ ಎನ್‌ಡಿಎ ಶತಪ್ರಯತ್ನ

● ವಿಕ್ರಂ ಕಾಂತಿಕೆರೆ

ಕಾಸರಗೋಡು ಜಿಲ್ಲೆ

5 ಒಟ್ಟು ವಿಧಾನಸಭಾ ಕ್ಷೇತ್ರ
11,00,036 ಒಟ್ಟು ಮತದಾರರು
5,42,861 ಪುರುಷರು
5,57,163 ಮಹಿಳೆಯರು
12 ತೃತೀಯ ಲಿಂಗಿಗಳು

ಕಾಸರಗೋಡು: ಧರ್ಮಾಧಾರಿತ ರಾಜಕೀಯ ಸಮೀಕರಣಗಳು ಬದಲಾಗದ ಕಾರಣ ಜಿಲ್ಲೆಯಲ್ಲಿ ಚುನಾವಣಾ ಕಾವು ಅಷ್ಟಾಗಿ ಕಾಣಿಸುತ್ತಿಲ್ಲ. ತ್ರಿಕೋನ ಸ್ಪರ್ಧೆಯ 'ಛಾಯೆ' ಮೂಡಿರುವ ಜಿಲ್ಲೆಯ ಉತ್ತರ ಭಾಗದ ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳು ಕುತೂಹಲ ಕೆರಳಿಸಿವೆ. ಎಡರಂಗದ ಭದ್ರಕೋಟೆ ಉದುಮ ಸೇರಿದಂತೆ ದಕ್ಷಿಣದ ಮೂರು ಕ್ಷೇತ್ರಗಳಲ್ಲಿ ರಾರಾಜಿಸಲು ಬಿಜೆಪಿ ಹವಣಿಸುತ್ತಿದೆ.

2021ರ ವಿಧಾನಸಭೆ ಚುನಾವಣೆಯಲ್ಲಿ ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರದಿಂದ ಕ್ರಮವಾಗಿ ಮುಸ್ಲಿಂ ಲೀಗ್‌ನ ಎನ್.ಎ ನೆಲ್ಲಿಕುನ್ನು ಮತ್ತು ಎ.ಕೆ.ಎಂ ಅಶ್ರಫ್ ಗೆಲುವು ಸಾಧಿಸಿದ್ದರು. ಉದುಮ ಮತ್ತು ಕಾಞಂಗಾಡ್ ಕ್ಷೇತ್ರಗಳಲ್ಲಿ ಕ್ರಮವಾಗಿ ಸಿಪಿಐನ ಸಿ.ಎಚ್ ಕುಂಞಂಬು ಮತ್ತು ಇ. ಚಂದ್ರಶೇಖರನ್, ತೃಕ್ಕರಿಪುರ ಕ್ಷೇತ್ರದಲ್ಲಿ ಸಿಪಿಎಂನ ಎಂ. ರಾಜಗೋಪಾಲನ್ ಜಯ ಗಳಿಸಿದ್ದರು.

ಈಗ ಹೆಚ್ಚು ಚರ್ಚೆಯಲ್ಲಿರುವ ಕ್ಷೇತ್ರ ಮಂಜೇಶ್ವರ. ಮಂಜೇಶ್ವರ ಪೇಟೆಯಲ್ಲಿ ಲಾಟರಿ ಅಂಗಡಿ ಇಟ್ಟುಕೊಂಡಿರುವ ಹರಿಪ್ರಸಾದ್, 'ನಮ್ಮದು ಈಗ ರಾಜ್ಯದ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದು' ಎಂದು ಅಭಿಮಾನದಿಂದ ಹೇಳುತ್ತಾರೆ.



ಕೇರಳ ವಿಧಾನಸಭಾ ಚುನಾವಣೆಯ ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್ ಅಶ್ವಿನಿ ಪರವಾಗಿ ಗೋಡೆಬರಹ ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ರಾಷ್ಟ್ರೀಯ ಹೆದ್ದಾರಿ ಬದಿಯ ಕಟ್ಟೆಯಲ್ಲಿ ಕುಳಿತು ರಾಜಕೀಯ ಚರ್ಚೆಯಲ್ಲಿ ತೊಡಗಿದ್ದ ಸರ್ವಪಕ್ಷಗಳ ಮತ್ತು ಸರ್ವಧರ್ಮೀಯ ಆಟೊ ಚಾಲಕರು ಕೂಡ 'ಮಂಜೇಶ್ವರದಲ್ಲಿ ಸ್ವಲ್ಪ ಫೈಟ್ ಇದೆ' ಎಂದು ಹೇಳಿದರು.

ಹಿಂದಿನ ಎರಡು ಚುನಾವಣೆಗಳಲ್ಲಿ ಸ್ವಲ್ಪದರಲ್ಲೇ ಗೆಲುವು ಕೈತಪ್ಪಿದ ಬಿಜೆಪಿಗೆ ಮಂಜೇಶ್ವರದಲ್ಲಿ ಈ ಬಾರಿ 'ಮಾಡು ಇಲ್ಲ ಮಡಿ' ಸ್ಪರ್ಧೆ. 2016ರಲ್ಲಿ ಇಲ್ಲಿ 89 ಮತಗಳಿಂದ ಸೋತಿದ್ದ ಬಿಜೆಪಿ ಕಳೆದ ಬಾರಿ (2021) ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಕೆ. ಸುರೇಂದ್ರನ್ ಅವರನ್ನೇ ಕಣಕ್ಕೆ ಇಳಿಸಿತ್ತು. ಈ ಬಾರಿಯೂ ಅವರಿಗೇ ಟಿಕೆಟ್ ಕೊಟ್ಟಿದೆ. ಐಕ್ಯರಂಗದ ಅಶ್ರಫ್ ಅವರಿಗೆ ಆತಂಕ ಸೃಷ್ಟಿಸಿದ್ದ ಎಸ್‌ಡಿಪಿಐ ಅಭ್ಯರ್ಥಿ ಹಿಂದೆ ಸರಿದ ನಂತರ ಲೀಗ್ 'ನಿರಾಳ'ವಾಗಿದೆ. ಸಿಪಿಎಂನ ಜಯಾನಂದನ್ ಕಣದಲ್ಲಿದ್ದಾರೆ. ಮಂಜೇಶ್ವರ ಕ್ಷೇತ್ರ ಆರಂಭದಲ್ಲಿ ಎಡರಂಗದ ಕೈಯಲ್ಲಿತ್ತು. ನಂತರ ಮುಸ್ಲಿಂ ಲೀಗ್ ಅಧಿಪತ್ಯ ಸ್ಥಾಪಿಸಿತು.

ಕಾಸರಗೋಡು ಕ್ಷೇತ್ರದಲ್ಲಿ ಮುಸ್ಲಿಂ ಲೀಗ್ ಒಳಗೊಂಡ ಐಕ್ಯರಂಗದ್ದೇ ಪ್ರಾಬಲ್ಯ. ಸತತ 11 ಬಾರಿ ಗೆಲುವು ಸಾಧಿಸಿರುವ ಐಕ್ಯರಂಗ ಈ ಬಾರಿ ಕಲ್ಲಟ್ರ ಮಾಹಿನ್ ಅವರನ್ನು ಕಣಕ್ಕೆ ಇಳಿಸಿದೆ. ಎನ್.ಎ ನೆಲ್ಲಿಕುನ್ನು ಕಣದಲ್ಲಿಲ್ಲ. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷೆ ಅಶ್ವಿನಿ ಎಂ.ಎಲ್ ಎನ್‌ಡಿಎ ಅಭ್ಯರ್ಥಿ. ಜಯದ ನಿರೀಕ್ಷೆ ಇಲ್ಲದ್ದರಿಂದ ಎಡರಂಗ ಸ್ವತಂತ್ರ ಅಭ್ಯರ್ಥಿ ಶಹನವಾಜ್ ಪಾಡೂರು ಅವರಿಗೆ ಬೆಂಬಲ ವ್ಯಕ್ತಪಡಿಸಿದೆ. ಈ ಬೆಳವಣಿಗೆ ಬಿಜೆಪಿಯಲ್ಲಿ ನಿರೀಕ್ಷೆ ಹುಟ್ಟಿಸಿದೆ. 'ಮುಸ್ಲಿಂ ಮತಗಳ ವಿಭಜನೆ ಆಗುವುದು ಖಚಿತ. ಈ ಬಾರಿ ಬಿಜೆಪಿ ಗೆಲ್ಲದೇ ಇದ್ದರೆ ಇನ್ನೆಂದಿಗೂ ಜಯದ ನಿರೀಕ್ಷೆಯೇ ಬೇಡ' ಎಂಬುದು ಆಟೊ ಚಾಲಕ ವಾಮನ ಕೊರಕ್ಕೋಡು ಅವರ ಮಾತು.

ಬೇಕಲ ಕೋಟೆಯಷ್ಟು ಗಟ್ಟಿ ಕ್ಷೇತ್ರ: ಬೇಕಲ ಕೋಟೆಯನ್ನು ಒಳಗೊಂಡ ಉದುಮ ಕ್ಷೇತ್ರದಲ್ಲಿ ದಶಕಗಳಿಂದ ಕೋಟೆ ಕಟ್ಟಿರುವ ಎಡರಂಗ ಈ ಬಾರಿ ಮತ್ತೊಮ್ಮೆ ಸಿ.ಕೆ ಕುಂಞಂಬು ಅವರನ್ನು ಕಣಕ್ಕೆ ಇಳಿಸಿದೆ. ಬಿಜೆಪಿಯ ಮನುಲಾಲ್ ಈ ಕೋಟೆಯನ್ನು ಒಡೆಯುವ ಪ್ರಯತ್ನಕ್ಕೆ ಇಳಿದಿದ್ದು, ನಿರೀಕ್ಷೆ ಇಲ್ಲದಿದ್ದರೂ ಐಕ್ಯರಂಗ ಕಾಂಗ್ರೆಸ್‌ನ ನೀಲಕಂಠನ್ ಅವರಿಗೆ ಟಿಕೆಟ್ ನೀಡಿದೆ. ಕಾಞಂಗಾಡ್ ಮತ್ತು ತೃಕ್ಕರಿಪುರದಲ್ಲೂ ಶತಾಯಗತಾಯ ಗೆಲ್ಲುವ ಪ್ರಯತ್ನಕ್ಕೆ ಬಿಜೆಪಿ ಕೈ ಹಾಕಿದೆ.

ಗಡಿ ಕ್ಷೇತ್ರದಲ್ಲಿ ರಾಜ್ಯ ಮುಖಂಡರ ದಂಡು

ಮಂಜೇಶ್ವರ ಕ್ಷೇತ್ರ ಕರ್ನಾಟಕದ ರಾಜಕಾರಣಿಗಳು ಮತ್ತು ಸೈದ್ಧಾಂತಿಕ ಹೋರಾಟಗಾರರ ಪ್ರತಿಷ್ಠೆಯ ಕಣವಾಗಿಯೂ ಗಮನ ಸೆಳೆದಿದೆ. ಮಂಗಳೂರು ಭಾಗದವರು ನಿತ್ಯವೂ ಎಂಬಂತೆ ಮಂಜೇಶ್ವರದಲ್ಲಿ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಾಮಾಜಿಕ ತಾಣಗಳಲ್ಲಂತೂ ಕನ್ನಡಿಗ–ತುಳುವರು ಕೇರಳ ವಿಧಾನಸಭೆ ಚುನಾವಣೆಯ ಕುರಿತು ನಡೆಸುತ್ತಿರುವ ಚರ್ಚೆಯಲ್ಲಿ ಮಂಜೇಶ್ವರ ಕ್ಷೇತ್ರಕ್ಕೆ ಆದ್ಯತೆ.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಉಡುಪಿ ಜಿಲ್ಲೆಯ ಶಾಸಕರು, ಮಂಗಳೂರಿನ ಶಾಸಕ ಭರತ್ ಶೆಟ್ಟಿ, ಮುಖಂಡ ನಳಿನ್ ಕುಮಾರ್ ಕಟೀಲ್ ಮುಂತಾದವರು ಈಗಾಗಲೇ ಪ್ರಚಾರ ಕೈಗೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಎಡಪಕ್ಷಗಳ ಮುಖಂಡರು ಕೂಡ ಕ್ಷೇತ್ರದ ಮೇಲೆ ನಿಗಾ ಇರಿಸಿದ್ದು ಬಿಜೆಪಿ ಪ್ರಚಾರದ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಟೀಕಾ ಪ್ರಹಾರ ಮಾಡುತ್ತಿದ್ದಾರೆ.

ಮಾಸಿಕ ₹3 ಸಾವಿರ ಪಿಂಚಣಿ; ಉದ್ಯೋಗ, ಬೆಳವಣಿಗೆಗೆ ಒತ್ತು

ಕೋಯಿಕ್ಕೋಡ್ (ಕೇರಳ) (ಪಿಟಿಐ): ಕೇರಳದ ಆಡಳಿತಾರೂಢ ಎಡಪಕ್ಷಗಳ ಮೈತ್ರಿಕೂಟವು (ಎಲ್‌ಡಿಎಫ್) ವಿಧಾನ ಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ಹಲವು ಭರವಸೆಗಳನ್ನು ಒಳಗೊಂಡ ಪ್ರಣಾಳಿಕೆಯನ್ನು ಗುರುವಾರ ಬಿಡುಗಡೆಗೊಳಿಸಿದೆ.


ಪಿಣರಾಯಿ ವಿಜಯನ್

ರಾಜ್ಯದ ಜನರ ಜೀವನವನ್ನು ಬದಲಾಯಿಸುವ ನಿಟ್ಟಿನಲ್ಲಿ ಕಲ್ಯಾಣ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ರಾಜ್ಯದಲ್ಲಿ ಬಡತನವನ್ನು ಸಂಪೂರ್ಣ ಮುಕ್ತಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ. ಪಿಂಚಣಿಯನ್ನು ಮಾಸಿಕ ₹3 ಸಾವಿರಕ್ಕೆ ಏರಿಕೆ ಮಾಡಲಾಗುವುದು ಎಂದು ತಿಳಿಸಿದ್ದು, ಸ್ಥಳೀಯ ಮಟ್ಟದಿಂದಲೇ ಸರಿಯಾದ ಆರೋಗ್ಯ ರಕ್ಷಣೆ ಹಾಗೂ ಬೆಂಬಲ ವ್ಯವಸ್ಥೆಯನ್ನು ಸುಧಾರಿಸಲಾಗುವುದು ಎಂದು ಭರವಸೆ ನೀಡಲಾಗಿದೆ.

ರಾಜ್ಯದಲ್ಲಿರುವ ಬಡತನ ಹೊಂದಿರುವ ಐದು ಲಕ್ಷ ಕುಟುಂಬಗಳನ್ನು ಗುರುತಿಸಿ, ಅವರನ್ನು ಮೇಲಕ್ಕೆತ್ತಲು ಸರ್ಕಾರ ನೆರವು ನೀಡಲಿದೆ ಎಂದು ಎಲ್‌ಡಿಎಫ್ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿ, ಮೀನುಗಾರರು ಹಾಗೂ ಅಂತ್ಯೋದಯ ಗುಂಪಿನಲ್ಲಿರುವ ಜನರ ವಿಚಾರದಲ್ಲಿ ವಿಶೇಷ ಗಮನ ನೀಡುವ ಜೊತೆಗೆ ವೃದ್ಧರು ಹಾಗೂ ಹಾಸಿಗೆ ಹಿಡಿದ ರೋಗಿಗಳಿಗೆ ಒಳ್ಳೆಯ ಆರೈಕೆ ಸೌಲಭ್ಯ ಒದಗಿಸಲಾಗುವುದು ಎಂದು ತಿಳಿಸಿದೆ.

ಯುವಜನರನ್ನು ಗಮನದಲ್ಲಿರಿಸಿಕೊಂಡು ಉದ್ಯೋಗ ಸೃಷ್ಟಿಯ ಭರವಸೆ ನೀಡಲಾಗಿದೆ. ಅಧ್ಯಯನ ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಮೂಲಕ ಉದ್ಯೋಗದ ಅವಕಾಶ ಹಾಗೂ ಕೌಶಲ ತರಬೇತಿಯನ್ನು ವಿಸ್ತರಣೆಗೊಳಿಸಲಾಗುವುದು ಎಂದು ಹೇಳಿದೆ.

ಮಹಿಳೆಯರಿಗೆ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಭರವಸೆ ನೀಡಲಾಗಿದೆ. ಉದ್ಯೋಗದ ಸ್ಥಳದಲ್ಲಿ ಮಹಿಳಾ ಉದ್ಯೋಗಿಗಳ ಪ್ರಮಾಣವನ್ನು ಶೇಕಡ 50ರಷ್ಟು ಏರಿಸುವ ಗುರಿ ಹೊಂದಲಾಗಿದೆ.

ಕೈಗಾರೀಕರಣಕ್ಕೆ ಆದ್ಯತೆ ನೀಡುವ ಮೂಲಕ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ತಿಳಿಸಿದ್ದು, ಮುಂದಿನ ಐದು ವರ್ಷದಲ್ಲಿ ರಾಜ್ಯಕ್ಕೆ ₹2 ಲಕ್ಷ ಕೋಟಿ ಬಂಡವಾಳ ಆಕರ್ಷಿಸಲಾಗುವುದು ಎಂದು ತಿಳಿಸಿದೆ.

ಭವಾನಿಪುರ: ಬಿಜೆಪಿ ಬಲ ಪ್ರದರ್ಶನ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಭವಾನಿಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರು ಗುರುವಾರ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆ ಸಮಾರಂಭವನ್ನು ಬಿಜೆಪಿಯು ತನ್ನ ಬಲಪ್ರದರ್ಶನದ ವೇದಿಕೆಯಾಗಿ ಪರಿವರ್ತಿಸಿತು.

ಸುವೇಂದು ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಕಣಕ್ಕಿಳಿದಿದ್ದಾರೆ. ಭವಾನಿಪುರ ಕ್ಷೇತ್ರವು ಮಮತಾ ಅವರ ರಾಜಕೀಯ ಭದ್ರಕೋಟೆ ಎನಿಸಿಕೊಂಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಮತ್ತು ಇತರ ನಾಯಕರು ನಾಮಪತ್ರ ಸಲ್ಲಿಕೆ ಅಂಗವಾಗಿ ಆಯೋಜಿಸಿದ್ದ ರೋಡ್ ಶೋನಲ್ಲಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಶಾ, 'ಸುವೇಂದು ಅವರ ನಾಮಪತ್ರ ಸಲ್ಲಿಕೆಗಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ' ಎಂದರು.

'ಬಂಗಾಳದಲ್ಲಿ ಬಿಜೆಪಿಯು ಬಹುಮತದೊಂದಿಗೆ ಸರ್ಕಾರ ರಚಿಸಲು 170 ಸ್ಥಾನಗಳನ್ನು ಗೆಲ್ಲಬೇಕಾಗಿದ್ದರೂ, ಭವಾನಿಪುರದಲ್ಲಿ ಸುವೇಂದು ಅವರ ಗೆಲುವು ರಾಜ್ಯದ ರಾಜಕೀಯದಲ್ಲಿ ತನ್ನಿಂದ ತಾನೇ ಬದಲಾವಣೆಯನ್ನು ತರಲಿದೆ' ಎಂದು ಹೇಳಿದರು.

ಬೆಂಬಲಿಗರ ಮುಖಾಮುಖಿ: ಬಿಜೆಪಿ ರೋಡ್ ಶೋ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕಾಳಿಘಾಟ್‌ನಲ್ಲಿರುವ ನಿವಾಸದ ಬಳಿಕ ಬಂದಾಗ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರು ಪರಸ್ಪರ ಎದುರಾದರು. ಎರಡೂ ಕಡೆಯವರು ಪರ–ವಿರುದ್ಧ ಘೋಷಣೆ ಕೂಗಿದಾಗ ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

ಸ್ಥಳದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.


ಅಮಿತ್ ಶಾ ಮತ್ತು ಸುವೇಂದು ಅಧಿಕಾರಿ ಅವರು ರೋಡ್ ಶೋ ವೇಳೆ ಬೆಂಬಲಿಗರತ್ತ ಕೈಬೀಸಿದರು –ಪಿಟಿಐ ಚಿತ್ರ

'ಶಾ ಅವರೇ, ರುಚಿಕರ ಖಾದ್ಯ ಸವಿಯಿರಿ'

ಚುನಾವಣೆಗೆ ಸಜ್ಜಾಗಿರುವ ಪಶ್ಚಿಮ ಬಂಗಾಳದಲ್ಲಿ 15 ದಿನ ವಾಸ್ತವ್ಯ ಹೂಡಲು ನಿರ್ಧರಿಸಿರುವ ಗೃಹ ಸಚಿವ ಅಮಿತ್ ಶಾ ಅವರ ನಡೆಯನ್ನು ಟಿಎಂಸಿ ಲೇವಡಿ ಮಾಡಿದೆ.

ಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳಲು 15 ದಿನ ಬಂಗಾಳದಲ್ಲೇ ವಾಸ್ತವ್ಯ ಹೂಡುವುದಾಗಿ ಶಾ ಅವರು ಗುರುವಾರ ಘೋಷಿಸಿದ್ದರು. ಅದರ ಬೆನ್ನಲ್ಲೇ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಟಿಎಂಸಿ, 'ರಾಜ್ಯದ ಜನಪ್ರಿಯ ಮಾಂಸಾಹಾರಿ ಖಾದ್ಯಗಳನ್ನು ಸವಿಯಲು ಈ ಅವಕಾಶವನ್ನು ಬಳಸಿಕೊಳ್ಳಿ' ಎಂದು ಅವರಿಗೆ ಸಲಹೆ ನೀಡಿದೆ.

'ದೇಶದ ಕಡು ಭ್ರಷ್ಟ ಮುಖ್ಯಮಂತ್ರಿ ಹಿಮಂತ'

ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ; ಜುಬಿನ್ ಸಾವಿಗೆ ನ್ಯಾಯದ ಭರವಸೆ

ಬೊಕಾಜನ್, ಅಸ್ಸಾಂ (ಪಿಟಿಐ): 'ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ದೇಶಕಂಡ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಬೊಕಾಜನ್ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ರತೋನ್ ಎಂಗ್ಟಿ ಪರ ಗುರುವಾರ ಪ್ರಚಾರ ನಡೆಸಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯದಲ್ಲಿ 'ಲ್ಯಾಂಡ್ ಎಟಿಎಂ' ನಡೆಸುತ್ತಿದ್ದು, ಸಾರ್ವಜನಿಕರಿಂದ ಭೂಮಿ ಕಸಿದುಕೊಂಡು, ದೊಡ್ಡ ಕಾರ್ಪೊರೇಟ್ ಉದ್ಯಮಿಗಳಿಗೆ ಹಂಚುತ್ತಿದ್ದಾರೆ' ಎಂದು ದೂರಿದ್ದಾರೆ.

'ಹಿಮಂತ ಬಿಸ್ವಾ ಶರ್ಮಾ ಮತ್ತು ಅವರ ಕುಟುಂಬ ದೇಶ ಕಂಡ ಅತಿ ಭ್ರಷ್ಟರಾಗಿದ್ದು, ಅವರು ಕೂಡ ಈ ವಿಚಾರದಲ್ಲಿ ಮೌನಕ್ಕೆ ಶರಣಾಗಿದ್ದಾರೆ. ರಾಜ್ಯದಲ್ಲಿ ಪಕ್ಷವು ಅಧಿಕಾರ ಹಿಡಿದ 100 ದಿನಗಳ ಒಳಗಾಗಿ ಅಸ್ಸಾಂನ ಖ್ಯಾತ ಗಾಯಕ ಜುಬಿನ್ ಗರ್ಗ್ ಸಾವಿಗೆ ಪಕ್ಷವು ಸೂಕ್ತ ನ್ಯಾಯ ಒದಗಿಸಲಿದೆ' ಎಂದು ಭರವಸೆ ನೀಡಿದ್ದಾರೆ.


ಅಸ್ಸಾಂನಲ್ಲಿ ಗುರುವಾರ ಪಕ್ಷದ ಪರ ಸಾರ್ವಜನಿಕ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ ಜನರತ್ತ ಕೈ ಬೀಸಿದರು. ಕಾಂಗ್ರೆಸ್‌ನ ಸ್ಥಳೀಯ ನಾಯಕರು ಜೊತೆಗಿದ್ದರು–ಪಿಟಿಐ ಚಿತ್ರ

'ಶರ್ಮಾ ಅವರು ಸಿಂಡಿಕೇಟ್‌ಗಳ ಮೂಲಕ ಅಸ್ಸಾಂ ನಡೆಸುತ್ತಿದ್ದು, ಭ್ರಷ್ಟಾಚಾರ ಆರೋಪವನ್ನು ಬಳಸಿಕೊಂಡು ಮೋದಿ ಅವರೇ ಸಂಪೂರ್ಣವಾಗಿ ನಿಯಂತ್ರಿಸುತ್ತಿದ್ದಾರೆ. ದೇಶದ ಮೂರು ಕಾರ್ಪೊರೇಟ್ ಉದ್ಯಮ ಸಂಸ್ಥೆಗಳಿಗೆ ರಾಜ್ಯದಲ್ಲಿ 98,400 ಸಾವಿರ ಬಿಗಾ (61 ಸಾವಿರ ಎಕರೆ) ಜಮೀನು ಹಂಚಿಕೆ ಮಾಡಲಾಗಿದೆ. ಮೋದಿ ಹಾಗೂ ಅಮಿತ್ ಶಾ ಅವರು ಅಸ್ಸಾಂ ಅನ್ನು ಭೂಮಿಯ ಎಟಿಎಂ ಆಗಿ ಪರಿವರ್ತಿಸಿಕೊಂಡಿದ್ದು, ಜನರಿಂದ ಕಿತ್ತುಕೊಂಡ ಜಮೀನುಗಳನ್ನು ಉದ್ಯಮಿಗಳಿಗೆ ಹಸ್ತಾಂತರಿಸಿದ್ದಾರೆ' ಎಂದು ದೂರಿದ್ದಾರೆ.

'ಅಧಿಕಾರ ವಿಕೇಂದ್ರೀಕರಣದಲ್ಲಿ ಕಾಂಗ್ರೆಸ್ ಪಕ್ಷವು ನಂಬಿಕೆ ಹೊಂದಿದೆ. ಸ್ಥಳೀಯ ಜನರಿಗೆ ಅಧಿಕಾರ ನೀಡಬೇಕು ಎಂದು ನಂಬಿದೆ. ಬಿಜೆಪಿಯು ಅಸ್ಸಾಂ ಆಡಳಿತವನ್ನು ದೆಹಲಿಯಿಂದ ನಡೆಸಬೇಕು ಎಂದು ಬಯಸುತ್ತಿದೆ. ಇದು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಮಧ್ಯೆ ಇರುವ ವ್ಯತ್ಯಾಸ. ಅಸ್ಸಾಂನಲ್ಲಿ ವಿವಿಧ ಸಿದ್ಧಾಂತ, ನಂಬಿಕೆ, ಧರ್ಮ ಹಾಗೂ ಜಾತಿ ಹೊಂದಿರುವ ಜನರು ನೆಲಸಿದ್ದಾರೆ. ಒಂದರ್ಥದಲ್ಲಿ ಈ ರಾಜ್ಯವು ಬಗೆ ಬಗೆಯ ಹೂಗಳಿರುವ ಗುಚ್ಛದಂತೆ. ಜನರು ಕೂಡ ಈ ರೀತಿ ಬದುಕಬೇಕು ಎಂಬುದನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ರಾಹುಲ್ ತಿಳಿಸಿದ್ದಾರೆ.

ಸಿಎಪಿಎಫ್ ಕಾನೂನು ರದ್ದು: ಭರವಸೆ

ನವದೆಹಲಿ (ಪಿಟಿಐ): 'ಕೇಂದ್ರೀಯ ಸಶಸ್ತ್ರ ಪಡೆಗಳ (ಸಿಎಪಿಎಫ್) ನಡುವಿನ ತಾರತಮ್ಯ ಮುಂದುವರಿಸಲು ಕೇಂದ್ರ ಸರ್ಕಾರ ಬಯಸಿದೆ. ನಾವು ಅಧಿಕಾರಕ್ಕೆ ಬಂದ ತಕ್ಷಣ, ತಾರತಮ್ಯ ಎಸಗುವ ಕಾನೂನನ್ನು ಹಿಂದಕ್ಕೆ ಪಡೆಯುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಿಳಿಸಿದ್ದಾರೆ.

'ಈ ಕುರಿತಂತೆ ಲೋಕಸಭೆಯಲ್ಲಿ ಮಾತನಾಡುವುದಾಗಿ ತಿಳಿಸಿದ್ದೆನು. ಆದರೆ ಇದಕ್ಕೆ ಅವಕಾಶ ನೀಡಲಿಲ್ಲ. ಸಿಆರ್‌ಪಿಎಫ್, ಬಿಎಸ್‌ಎಫ್, ಸಿಐಎಸ್‌ಎಫ್ ಹಾಗೂ ಐಟಿಬಿಪಿ ಪಡೆಗಳ ಜೊತೆಗೆ ಕಾಂಗ್ರೆಸ್ ಪಕ್ಷವು ನಿಲ್ಲಲಿದ್ದು, ಅವರ ರಕ್ಷಣೆಯನ್ನು ಮಾಡಲಿದೆ' ಎಂದು ವಿಡಿಯೊ ಸಂದೇಶದ ಮೂಲಕ ಭರವಸೆ ನೀಡಿದ್ದಾರೆ.

'ಅರೆ ಸೇನಾ ಪಡೆಗಳಲ್ಲಿ 15 ವರ್ಷಗಳ ಕಾಲ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದರೂ ಕೂಡ ಯಾವುದೇ ಬಡ್ತಿಯಿಲ್ಲ. ತನ್ನದೇ ಪಡೆಯನ್ನು ಮುನ್ನಡೆಸುವ ಜವಾಬ್ದಾರಿ ಸಿಗುವುದಿಲ್ಲ. ಮೇಲ್ಮಟ್ಟದ ಎಲ್ಲಾ ಹುದ್ದೆಗಳನ್ನು ಐಪಿಎಸ್ ಅಧಿಕಾರಿಗಳಿಗೆ ಮೀಸಲಿಡಲಾಗಿದೆ. ಇದು ಒಬ್ಬ ಅಧಿಕಾರಿಯ ನೋವಲ್ಲ, ಇದು ಆ ಪಡೆಗಳಲ್ಲಿ ಕೆಲಸ ಮಾಡಲು ಲಕ್ಷಾಂತರ ಯೋಧರ ನೋವು ಆಗಿದೆ' ಎಂದು ಹೇಳಿದ್ದಾರೆ.

ಎಪ್‌ಸ್ಟೈನ್ ಫೈಲ್ ಮುಂದಿಟ್ಟುಕೊಂಡು ನರೇಂದ್ರ ಮೋದಿ ಅವರನ್ನು ಟ್ರಂಪ್ ನಿಯಂತ್ರಿಸುತ್ತಿದ್ದಾರೆ. ಅದಾನಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಟ್ರಂಪ್ ಹೊಂದಿದ್ದಾರೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಬಂಗಾಳ ಸರ್ಕಾರಕ್ಕೆ 'ಸುಪ್ರೀಂ' ತಪರಾಕಿ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಲ್ಲಿಸಿರುವ ಅರ್ಜಿ ಸೇರಿದಂತೆ ಏಪ್ರಿಲ್ 6ರಂದು ಪೀಠವು ಇತರ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವಾಗ ಈ ಎಲ್ಲಾ ಹಿರಿಯ ಅಧಿಕಾರಿಗಳು ವರ್ಚುವಲ್‌ಆಗಿ ಹಾಜರಿರುವಂತೆಯೂ ಸಿಜೆಐ ನಿರ್ದೇಶಿಸಿದರು.

'ನ್ಯಾಯಾಂಗ ಅಧಿಕಾರಿಗಳಲ್ಲಿ ಭಯ ಉಂಟುಮಾಡಲು ಯಾರಿಗೂ ಬಿಡುವುದಿಲ್ಲ. ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಡಿಜಿಪಿ ಮತ್ತು ಎಸ್‌ಪಿ ವರ್ತಿಸಿದ ರೀತಿ ಅತ್ಯಂತ ವಿಷಾದಕರ. ಘಟನೆ ಬಗ್ಗೆ ಮಾಹಿತಿ ನೀಡಿದ ಬಳಿಕವೂ ಅವರು ಪರಿಣಾಮಕಾರಿ ಕ್ರಮವನ್ನು ತೆಗೆದುಕೊಳ್ಳಲು ಏಕೆ ವಿಫಲರಾದರು ಎಂಬುದನ್ನು ವಿವರಿಸಬೇಕು' ಎಂದು ಪೀಠ ಹೇಳಿದೆ.

'ಮಧ್ಯಾಹ್ನ 3.30ರ ಸುಮಾರಿಗೆ ಘೇರಾವ್ ಆರಂಭವಾಗಿದೆ. ಕಲ್ಕತ್ತಾ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರು ತಕ್ಷಣ ಸರ್ಕಾರದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ರಾತ್ರಿ 8.30ರವರೆಗೂ ಯಾವುದೇ ಕ್ರಮ ಜರುಗಿಸದ ಕಾರಣ ಗೃಹ ಕಾರ್ಯದರ್ಶಿ ಮತ್ತು ಡಿಜಿಪಿಯನ್ನು ಸಂಪರ್ಕಿಸಿದ್ದಾರೆ. ಅವರು ತಕ್ಷಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರೂ, ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳಲಿಲ್ಲ' ಎಂದು ಬುಧವಾರ ನಡೆದ ಘಟನಾವಳಿಯನ್ನು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರು ವೈಯಕ್ತಿಕವಾಗಿ ಮಧ್ಯಪ್ರವೇಶಿಸಬೇಕಾಯಿತು. ಅವರು ಗೃಹ ಕಾರ್ಯದರ್ಶಿ ಮತ್ತು ಡಿಜಿಪಿಗೆ ಕರೆ ಮಾಡಿ ಮಾತನಾಡಿದ್ದಾರೆ. ಗೃಹ ಕಾರ್ಯದರ್ಶಿ ಮತ್ತು ಡಿಜಿಪಿ ಅವರು ಮುಖ್ಯ ನ್ಯಾಯಮೂರ್ತಿಯವರ ನಿವಾಸಕ್ಕೆ ಬಂದಿದ್ದಾರೆ. ಮಧ್ಯರಾತ್ರಿ ಬಳಿಕ ಅಧಿಕಾರಿಗಳನ್ನು ರಕ್ಷಿಸಲಾಯಿತು. ಆ ಬಳಿಕ ಮನೆಗೆ ಮರಳುವಾಗ ಅಧಿಕಾರಿಗಳಿದ್ದ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ' ಎಂದು ಸಿಜೆಐ ಹೇಳಿದ್ದಾರೆ.

ಈ ಘಟನೆ ದೇಶದ ಇತಿಹಾಸದಲ್ಲಿ 'ಕಪ್ಪು ಚುಕ್ಕೆ'. ಮುಖ್ಯಮಂತ್ರಿ ಮಮತಾ ಆದೇಶದ ಮೇರೆಗೆ 'ಟಿಎಂಸಿಯ ಗೂಂಡಾಗಳು' ಎಸ್‌ಐಆರ್ ಪ್ರಕ್ರಿಯೆಗೆ ಅಡ್ಡಿಪಡಿಸಲು ಪ್ರಯತ್ನಿಸಿದ್ದಾರೆ
ಗೌರವ್ ಭಾಟಿಯಾ, ಬಿಜೆಪಿ ರಾಷ್ಟ್ರೀಯ ವಕ್ತಾರ

'ರಾತ್ರಿ 2ರವರೆಗೂ ಗಮನಿಸುತ್ತಿದ್ದೆ'

ವಿಚಾರಣೆ ವೇಳೆ ಪಶ್ಚಿಮ ಬಂಗಾಳದ ಅಡ್ವೊಕೇಟ್ ಜನರಲ್ ಅವರು 'ಈ ವಿಷಯದಲ್ಲಿ ಚುನಾವಣಾ ಆಯೋಗವು ವೈರಿಯಂತೆ ವರ್ತಿಸಬಾರದು' ಎಂದು ವಾದಿಸಿದಾಗ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಸಿಜೆಐ, 'ದುರದೃಷ್ಟವಶಾತ್ ನಿಮ್ಮ ರಾಜ್ಯದಲ್ಲಿ ಪ್ರತಿಯೊಬ್ಬರೂ ರಾಜಕೀಯ ಭಾಷೆಯಲ್ಲಿ ಮಾತನಾಡುತ್ತಾರೆ. ದುಷ್ಕೃತ್ಯದಲ್ಲಿ ಭಾಗಿಯಾದವರು ಯಾರೆಂಬುದು ನಮಗೆ ತಿಳಿದಿಲ್ಲ ಎಂದು ನೀವು ಭಾವಿಸುತ್ತೀರಾ? ನಾನು ಬೆಳಗಿನ ಜಾವ 2ರವರೆಗೂ ಎಲ್ಲವನ್ನೂ ಮೇಲ್ವಿಚಾರಣೆ ಮಾಡುತ್ತಿದ್ದೆ. ಇದು ತೀರಾ ದುರದೃಷ್ಟಕರ' ಎಂದರು.

ಶೇ 83ರಷ್ಟು ಮತದಾರರ ವಿವರ ಹೋಲಿಕೆ ಪೂರ್ಣ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪೂರ್ವಭಾವಿ ಪ್ರಕ್ರಿಯೆಯು ಇನ್ನೂ ನಡೆಯುತ್ತಿದ್ದು, 5.56 ಕೋಟಿ ಮತದಾರರ ಪೈಕಿ ಈವರೆಗೆ 4.62 ಕೋಟಿ ಜನರ ವಿವರ ಹೋಲಿಸಿ ನೋಡಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಇನ್ನಷ್ಟೇ ಆರಂಭವಾಗಬೇಕಿದೆ. ಅದಕ್ಕೆ ಪೂರ್ವಭಾವಿಯಾಗಿ 2025ರ ಮತದಾರರ ಪಟ್ಟಿಯಲ್ಲಿರುವ ಮತದಾರರ ವಿವರಗಳನ್ನು 2002ರ ಮತದಾರರ ಪಟ್ಟಿಗೆ ಹೋಲಿಸಿ (ಮ್ಯಾಪಿಂಗ್) ನೋಡಲಾಗುತ್ತಿದೆ. ರಾಜ್ಯದ ಒಟ್ಟು ಮತದಾರರ ಪೈಕಿ ಏಪ್ರಿಲ್ 2 ಗುರುವಾರದ ಬೆಳಿಗ್ಗೆ 8ರ ವೇಳೆಗೆ ಶೇ 83ರಷ್ಟು ಮತದಾರರ ಹೋಲಿಕೆ (ಮ್ಯಾಪಿಂಗ್) ಪೂರ್ಣಗೊಂಡಿದೆ. ಮುಂದಿನ ದಿನಗಳಲ್ಲಿ ಶೇ 100ರಷ್ಟು ಗುರಿ ಸಾಧಿಸಲಾಗುತ್ತದೆ ಎಂದು ಮಾಹಿತಿ ನೀಡಿದೆ.

70 ವಿಧಾನಸಭಾ ಕ್ಷೇತ್ರಗಳಲ್ಲಿ ಹೋಲಿಕೆ ಕಾರ್ಯವು ಶೇ 90ರ ಗಡಿ ದಾಟಿದೆ. 104 ಕ್ಷೇತ್ರಗಳಲ್ಲಿ ಹೋಲಿಕೆ ಕಾರ್ಯವು ಶೇ 80ಕ್ಕಿಂತಲೂ ಹೆಚ್ಚು ಪ್ರಮಾಣದಷ್ಟು ಪೂರ್ಣಗೊಂಡಿದೆ. ಬೆಂಗಳೂರು ಸೇರಿ ಕೆಲವು ನಗರ ಪ್ರದೇಶಗಳಲ್ಲಿ ಈ ಪ್ರಕ್ರಿಯೆ ತುಸು ನಿಧಾನವಾಗಿದೆ ಎಂದು ವಿವರಿಸಿದೆ.

ರವಿವರ್ಮನ ಕಲಾಕೃತಿಗೆ ₹167 ಕೋಟಿ

ನವದೆಹಲಿ (ಪಿಟಿಐ): ಭಾರತದ ಶ್ರೇಷ್ಠ ಚಿತ್ರಕಾರ ರಾಜಾ ರವಿವರ್ಮ ರಚಿಸಿದ್ದ ಯಶೋದಾ ಮತ್ತು ಕೃಷ್ಣನ ತೈಲವರ್ಣ ಚಿತ್ರವು ದಾಖಲೆಯ ₹167.20 ಕೋಟಿಗೆ ಹರಾಜಾಗಿದೆ. ಈ ಮೂಲಕ ಅತಿ ಹೆಚ್ಚಿನ ಬೆಲೆಗೆ ಹರಾಜಿನಲ್ಲಿ ಮಾರಾಟವಾದ ಆಧುನಿಕ ಭಾರತದ ಚಿತ್ರ ಎಂಬ ದಾಖಲೆಯನ್ನೂ ಬರೆದಿದೆ.


ಮುಂಬೈಯಲ್ಲಿ ಬುಧವಾರ ನಡೆದ 'ಸ್ಯಾಫ್ರನ್‌ಆರ್ಟ್ಸ್ ಸ್ಪ್ರಿಂಗ್ ಲೈವ್' ಹರಾಜಿನಲ್ಲಿ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಡಾ. ಸೈರಸ್ ಎಸ್. ಪೂನಾವಾಲಾ ಅವರು ಕಲಾಕೃತಿಯನ್ನು ಖರೀದಿಸಿದರು.

ಕಳೆದ ವರ್ಷ ನಡದ ಹರಾಜಿನಲ್ಲಿ ಎಂ.ಎಫ್. ಹುಸೇನ್ ಅವರ ಚಿತ್ರವು ₹118 ಕೋಟಿಗೆ ಹರಾಜಾಗಿತ್ತು. ಇದನ್ನು ಹಿಂದಿಕ್ಕಿ ರವಿವರ್ಮನ ಚಿತ್ರವು ಹೊಸ ದಾಖಲೆ ಸೃಷ್ಟಿಸಿದೆ. ₹80 ಕೋಟಿಯಿಂದ ₹120 ಕೋಟಿವರೆಗೆ ಈ ಚಿತ್ರ ಹರಾಜಾಗಬಹುದು ಎಂದು ಮೊದಲು ಅಂದಾಜಿಸಲಾಗಿತ್ತು.

'ರಾಜಾ ರವಿವರ್ಮ ರಚಿಸಿರುವ ಯಶೋದಾ ಮತ್ತು ಕೃಷ್ಣರ ಕಲಾಕೃತಿಯನ್ನು ಖರೀದಿಸಲು ಹಾಗೂ ಸಂರಕ್ಷಿಸಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ. ಈ ಚಿತ್ರವು ನಮ್ಮ ರಾಷ್ಟ್ರದ ಸಂಪತ್ತು. ಇದು ನಿರಂತರವಾಗಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗುವಂತೆ ಮಾಡಲು ಪ್ರಯತ್ನಿಸುತ್ತೇನೆ' ಎಂದು ಸೈರಸ್ ಹೇಳಿದರು.

ಇದು 1890ರ ದಶಕದಲ್ಲಿ ರವಿವರ್ಮ ರಚಿಸಿರುವ ಸುಂದರ ಚಿತ್ರಕಲೆ. ಈ ಚಿತ್ರದಲ್ಲಿ ಯಶೋದಾ ಹಾಲು ಕರೆಯುತ್ತಿದ್ದಾಳೆ. ಬಾಲ ಕೃಷ್ಣನು ತಾಯಿಯ ಬೆನ್ನಿಗೆ ಒರಗಿ ನಿಂತು, ಕೈಯಲ್ಲಿ ಲೋಟ ಹಿಡಿದು ಹಾಲು ಕೊಡುವಂತೆ ಕೇಳುತ್ತಿದ್ದಾನೆ. ಇದು ತಾಯಿ ಮಗುವಿನ ನಡುವಿನ ಬಾಂಧವ್ಯವನ್ನು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ. ಚಿತ್ರವೂ ನೈಜತೆಯನ್ನು ಮೈದುಂಬಿಕೊಂಡಿದೆ.

'ಇದು ಕೇವಲ ವ್ಯಾಪಾರವಲ್ಲ. ಬದಲಾಗಿ ಭಾರತೀಯ ಕಲೆಯ ಸಾಂಸ್ಕೃತಿಕ ಮತ್ತು ಭಾವನಾತ್ಮಕ ಪ್ರತಿಧ್ವನಿ ಇದ್ದಂತೆ' ಎಂದು ಸ್ಯಾಫ್ರನ್‌ಆರ್ಟ್ಸ್ ಅಧ್ಯಕ್ಷ ಹಾಗೂ ಸಹ ಸಂಸ್ಥಾಪಕ ಮಿನಲ್ ವಾಜಿರಾಣಿ ತಿಳಿಸಿದರು.


₹167 ಕೋಟಿಗೆ ಹರಾಜಾಗಿರುವ, ರಾಜಾ ರವಿವರ್ಮ ರಚಿಸಿರುವ ಯಶೋದಾ– ಕೃಷ್ಣರ ಚಿತ್ರ

ಹರಾಜಿನ ಪ್ರಕ್ರಿಯೆ

- ಮುಂಬೈನಲ್ಲಿ ನಡೆದ 'ಸ್ಯಾಫ್ರನ್‌ಆರ್ಟ್ಸ್ ಸ್ಪ್ರಿಂಗ್ ಲೈವ್' ಹರಾಜು
- ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕರಿಂದ ಖರೀದಿ
- ₹118 ಕೋಟಿಗೆ ಹರಾಜಾಗಿದ್ದ ಎಂ.ಎಫ್. ಹುಸೇನ್ ಅವರ ಚಿತ್ರದ ಬೆಲೆ ಹಿಂದಿಕ್ಕಿ ದಾಖಲೆ

'ಉಚ್ಚಾಟಿತ ಯತ್ನಾಳರಿಂದ ಪ್ರಚಾರ: ಬಿಜೆಪಿ ಸ್ಥಿತಿ ಶೋಚನೀಯ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಪಕ್ಷದಿಂದ ಉಚ್ಚಾಟಿಸಲಾದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಂದ ಬಾಗಲಕೋಟೆ ಉಪಚುನಾವಣೆಯಲ್ಲಿ ಪ್ರಚಾರ ಮಾಡಿಸುವ ಪರಿಸ್ಥಿತಿ ಬಿಜೆಪಿಗೆ ಬಂದಿರುವುದು ಶೋಚನೀಯ' ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.


ಎಂ.ಬಿ. ಪಾಟೀಲ

'ಬಾಗಲಕೋಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಬಿ.ಎಸ್. ಯಡಿಯೂರಪ್ಪ ಮತ್ತು ವಿಜಯೇಂದ್ರ ಗುಂಪಿನ ಅಭ್ಯರ್ಥಿ. ಯತ್ನಾಳ ಅವರು ತಮ್ಮ ಸ್ವಾಭಿಮಾನ ಬಿಟ್ಟು ಚರಂತಿಮಠ ಪರ ಪ್ರಚಾರ ನಡೆಸಿ, ಯಡಿಯೂರಪ್ಪ, ವಿಜಯೇಂದ್ರ ನಾಯಕತ್ವ ಬಲಪಡಿಸಲು ಮುಂದಾಗಿದ್ದಾರೆ. ಈವರೆಗೆ ಅಪ್ಪ–ಮಕ್ಕಳನ್ನು ಬೈಯುತ್ತಿದ್ದದ್ದು ಕೇವಲ ನಾಟಕ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಯತ್ನಾಳ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡುವ ನೆಪದಲ್ಲಿ ಮರಳಿ ಬಿಜೆಪಿ ಸೇರ್ಪಡೆಗೆ ನಾಟಕ ಆರಂಭಿಸಿದ್ದಾರೆ. ಈ ನಾಟಕದ ಬದಲು ಯಡಿಯೂರಪ್ಪ ಮತ್ತು ವಿಜಯೇಂದ್ರಗೆ ಕೈಮುಗಿದು ಬಿಜೆಪಿಗೆ ಸೇರ್ಪಡೆ ಮಾಡಿಕೊಳ್ಳುವಂತೆ ಬೇಡುವುದು ಉತ್ತಮ' ಎಂದರು.

'ದಾವಣಗೆರೆ ಬಿಜೆಪಿ ಅಭ್ಯರ್ಥಿಯು ಯಡಿಯೂರಪ್ಪ ಗುಂಪಿನ ಅಭ್ಯರ್ಥಿಯಲ್ಲ. ಜಿ.ಎಂ. ಸಿದ್ದೇಶ್ವರ ಅವರ ಗುಂಪಿನ ಅಭ್ಯರ್ಥಿ. ಯತ್ನಾಳ ಅವರು ದಾವಣಗೆರೆಗೆ ಏಕೆ ಪ್ರಚಾರಕ್ಕೆ ಹೋಗಿಲ್ಲ. ಯತ್ನಾಳಗೆ ಮಾನ, ಮರ್ಯಾದೆ ಕಿಂಚಿತ್ತೂ ಇಲ್ಲ' ಎಂದು ವಾಗ್ದಾಳಿ ನಡೆಸಿದರು.

ಪಕ್ಷ ಸೇರ್ಪಡೆ ಹೈಕಮಾಂಡ್‌ಗೆ ಬಿಟ್ಟ ವಿಷಯ: ಯತ್ನಾಳ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವುದು ಹೈಕಮಾಂಡ್‌ಗೆ ಬಿಟ್ಟ ವಿಷಯ. ದುಂಬಾಲು ಬೀಳಲ್ಲ. ಯೋಗ್ಯ, ಒಳ್ಳೆಯವನು ಎಂದರೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಬಿಡಲಿ. ಅಲವತ್ತುಕೊಳ್ಳುವುದಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.


ಬಸನಗೌಡ ಪಾಟೀಲ

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನನ್ನು ಹೊರಗಡೆ ಹಾಕಿದ್ದರಿಂದ ಪಕ್ಷಕ್ಕೂ ನಷ್ಟವಾಗಿಲ್ಲ. ನನಗೂ ನಷ್ಟವಾಗಿಲ್ಲ. ಮುಂದೆ ಯತ್ನಾಳ ತೆಗೆದುಕೊಳ್ಳದಿದ್ದರೆ ಕಷ್ಟವಾಗುತ್ತದೆ ಎಂದು ಇವರೆಲ್ಲ ಹೇಳುತ್ತಾರಲ್ಲ' ಎಂದು ಜೊತೆಗಿದ್ದ ಸಿ.ಸಿ. ಪಾಟೀಲ, ಸಿದ್ದು ಸವದಿ, ಅರವಿಂದ ಬೆಲ್ಲದ ಅವರತ್ತ ಕೈ ಮಾಡಿದರು.

'ಯಾವುದೋ ಕಾರಣಗಳಿಗೆ ಉಚ್ಚಾಟನೆಗೊಂಡರೂ ಪಕ್ಷದ ಎಲ್ಲಾ ನಾಯಕರೊಂದಿಗೆ ಒಳ್ಳೆಯ ಸಂಬಂಧವಿದೆ. ಬಿಜೆಪಿ ಮತ್ತು ಹಿಂದೂ ಸಮಾಜ ರಕ್ಷಣೆ ಆಗಬೇಕು. ಮೋದಿ ನೇತೃತ್ವದಲ್ಲಿ ಬಿಜೆಪಿಯು ಜಗತ್ತಿನಲ್ಲೇ ಒಳ್ಳೆಯ ಕೆಲಸ ಮಾಡುತ್ತಿದೆ' ಎಂದರು.

'ಪಕ್ಷವನ್ನು ವಿರೋಧಿಸುವುದು ಮತ್ತು ಬ್ಲ್ಯಾಕ್‌ಮೇಲ್ ಮಾಡುವುದು ನನ್ನ ಸ್ವಭಾವ ಅಲ್ಲ. ಪೂಜ್ಯ ತಂದೆಯವರು, ಮಗನಿಗೆ ಬೈಯ್ಯಬಾರದು ಎಂದು ಹೇಳಿದ್ದಾರೆ. ಬೈಯ್ಯುವುದಿಲ್ಲ. ಏಪ್ರಿಲ್ 9ರವರೆಗೆ ಬಿಜೆಪಿ ಪರ ಪ್ರಚಾರ ಮಾಡುತ್ತೇನೆ. ಮುಂದೇನು ಬದಲಾಗುತ್ತದೆಯೋ ನೋಡೋಣ' ಎಂದರು.

ಕೊಲೆ ಪ್ರಕರಣ: ಅಮಿತ್ ಜೋಗಿ ದೋಷಿ- ಹೈಕೋರ್ಟ್

ಬಿಲಾಸ್‌ಪುರ(ಛತ್ತೀಸಗಢ) (ಪಿಟಿಐ): 2003ರಲ್ಲಿ ನಡೆದಿದ್ದ ಎನ್‌ಸಿಪಿ ಮುಖಂಡ ರಾಮಾವತಾರ ಜಗ್ಗಿ ಕೊಲೆ ಪ್ರಕರಣದಲ್ಲಿ ಅಮಿತ್ ಜೋಗಿ ದೋಷಿ ಎಂದು ಛತ್ತೀಸಗಢ ಹೈಕೋರ್ಟ್ ಗುರುವಾರ ಘೋಷಿಸಿದೆ.

ಮೂರು ವಾರಗಳ ಒಳಗಾಗಿ ನ್ಯಾಯಾಲಯಕ್ಕೆ ಶರಣಾಗುವಂತೆಯೂ ಅಮಿತ್ ಜೋಗಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅಮಿತ್ ಜೋಗಿ ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಅಜಿತ್ ಜೋಗಿ ಅವರ ಮಗ. ಎನ್‌ಸಿಪಿ ಮುಖಂಡ ಜಗ್ಗಿ ಅವರನ್ನು 2003ರ ಜೂನ್ 4ರಂದು ಕೊಲೆ ಮಾಡಲಾಗಿತ್ತು.

'ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ರಮೇಶ್ ಸಿನಾ ಹಾಗೂ ನ್ಯಾಯಮೂರ್ತಿ ಅರವಿಂದ ಕುಮಾರ್ ವರ್ಮಾ ಅವರು ಇದ್ದ ವಿಭಾಗೀಯ ನ್ಯಾಯಪೀಠವು, ಅಮಿತ್ ಜೋಗಿಯನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ' ಎಂದು ಸಿಬಿಐ ಪರ ವಕೀಲ ವೈಭವ ಎ.ಗೋವರ್ಧನ್ ತಿಳಿಸಿದ್ದಾರೆ.



ಈ ಕೊಲೆ ಕುರಿತು ಆರಂಭದಲ್ಲಿ ರಾಜ್ಯ ಪೊಲೀಸರು ತನಿಖೆ ನಡೆಸಿದ್ದರು. ನಂತರ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲಾಗಿತ್ತು. ತನಿಖೆ ನಡೆಸಿದ್ದ ಸಿಬಿಐ, ಅಮಿತ್ ಮತ್ತು ಇತರ ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿತು.

ಪ್ರಕರಣಕ್ಕೆ ಸಂಬಂಧಿಸಿ 28 ಆರೋಪಿಗಳ ವಿರುದ್ಧದ ಆರೋಪಗಳನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆ ಎಂದು ಹೇಳಿದ್ದ ವಿಚಾರಣಾ ನ್ಯಾಯಾಲಯ, ಅಮಿತ್ ಜೋಗಿ ಅವರನ್ನು ಆರೋಪ ಮುಕ್ತಗೊಳಿಸಿ 2007ರ ಮೇ 31ರಂದು ಆದೇಶಿಸಿತ್ತು.


ಈ ಆದೇಶ ಪ್ರಶ್ನಿಸಿ ಸಿಬಿಐ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಮೇಲ್ಮನವಿ ಸಲ್ಲಿಸುವಲ್ಲಿ ವಿಳಂಬವಾಗಿದೆ ಎಂಬ ಕಾರಣ ನೀಡಿದ್ದ ಹೈಕೋರ್ಟ್ 2011ರಲ್ಲಿ ಸಿಬಿಐ ಅರ್ಜಿಯನ್ನು ವಜಾಗೊಳಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ, ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಸಿಬಿಐ ಅರ್ಜಿಯನ್ನು ಹೊಸದಾಗಿ ಪರಿಗಣಿಸುವಂತೆ ಛತ್ತೀಸಗಢ ಹೈಕೋರ್ಟ್‌ಗೆ ಕಳೆದ ವರ್ಷ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಸೂಚಿಸಿತು.

ಆಕ್ಷೇಪಣೆಯನ್ನು ಅಲ್ಲಗಳೆದ ರಾಜ್ಯ ಸರ್ಕಾರ

ಉಪ ಚುನಾವಣೆ: 'ಗ್ಯಾರಂಟಿ' ತಡೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ಆರೇಳು ತಿಂಗಳಿಂದ ಗ್ಯಾರಂಟಿ ಯೋಜನೆಯ ನಗದು ಬಿಡುಗಡೆಯನ್ನು ತಡೆ ಹಿಡಿಯಲಾಗಿದ್ದು, ಉಪ ಚುನಾವಣೆ ಗಮನದಲ್ಲಿಟ್ಟುಕೊಂಡು ಏಕಕಾಲಕ್ಕೆ ಪಾವತಿ ಮಾಡುವ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ' ಎಂಬ ಆಕ್ಷೇಪಣೆಯನ್ನು ರಾಜ್ಯ ಸರ್ಕಾರ ಬಲವಾಗಿ ಅಲ್ಲಗಳೆದಿದೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಗೌತಮ್ ಕುಮಾರ್ ಜೈನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಸರ್ಕಾರ ಚುನಾವಣಾ ನೀತಿ ಸಂಹಿತೆ ಜಾರಿಯಾದ ಮೇಲೆ ಹಣ ಬಿಡುಗಡೆ ಮಾಡುವ ಇರಾದೆ ಹೊಂದಿದೆಯೇನೊ ಎಂಬುದೇ ಅರ್ಜಿದಾರರ ಜಿಜ್ಞಾಸೆ' ಎಂದರು.

'ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಎರಡೂ ಕ್ಷೇತ್ರಗಳಲ್ಲಿ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಸರ್ಕಾರವು ಚುನಾವಣಾ ಆಯೋಗದಿಂದ ಅನುಮತಿ ಪಡೆದಿಲ್ಲ. ಹಾಗಾಗಿ, ಚುನಾವಣೆ ಮುಗಿಯುವವರೆಗೆ ಹಣ ಬಿಡುಗಡೆ ಮಾಡಬಾರದು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

'ಮಾರ್ಚ್ 23ರಂದು ಗೃಹಲಕ್ಷ್ಮಿ ಹಣ ಬಿಡುಗಡೆಯಾಗಿದೆ ಎಂದು ಹೇಳಲಾಗುತ್ತಿದೆ. ನೀತಿ ಸಂಹಿತೆ ಜಾರಿಯಾದ ಮೇಲೆ ಹಣ ಬಿಡುಗಡೆ ಮಾಡಿ, ಫಲಾನುಭವಿಗಳ ಸಂಖ್ಯೆಯನ್ನು ಸರ್ಕಾರ ಹೆಚ್ಚಿಸಿದೆ. ಹಾಗಾಗಿ, ಉಪಚುನಾವಣೆ ನಡೆಯುತ್ತಿರುವ ಜಿಲ್ಲೆಗಳಲ್ಲಿ ಆಯೋಗದ ಅನುಮತಿ ಪಡೆದು ಹಣ ಬಿಡುಗಡೆ ಮಾಡಲಿ' ಎಂದರು.

ಇದನ್ನು ಬಲವಾಗಿ ಅಲ್ಲಗಳೆದ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಆರು ತಿಂಗಳಿಂದ ಗ್ಯಾರಂಟಿ ಯೋಜನೆಗಳ ಹಣ ನೀಡಲಾಗಿಲ್ಲ ಎಂಬುದಕ್ಕೆ ಅರ್ಜಿದಾರರು ದಾಖಲೆ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

'ಗ್ಯಾರಂಟಿ ಯೋಜನೆಯ ಭಾಗವಾಗಿ ಫೆಬ್ರುವರಿವರೆಗೆ ಏನೆಲ್ಲಾ ವಿತರಣೆ ಮಾಡಲಾಗಿದೆ ಎಂಬುದಕ್ಕೆ ದಾಖಲೆ ಸಲ್ಲಿಸಲಾಗುವುದು. ಒಂದು ವೇಳೆ ಅರ್ಜಿದಾರರು ಆಕ್ಷೇಪಿಸಿರುವಂತೆ ನಡೆದುಕೊಂಡರೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಲಿದೆ. ಅದೇನೂ ಹಲ್ಲಿಲ್ಲದ ಹಾವಲ್ಲವಲ್ಲಾ' ಎಂದು ಕುಟುಕಿದರು.

ಕೇಂದ್ರ ಚುನಾವಣಾ ಆಯೋಗದ ಪರ ಹಾಜರಿದ್ದ ಎಸ್.ಆರ್. ದೊಡವಾಡ ಅವರು, 'ಮಾದರಿ ನೀತಿ ಸಂಹಿತೆಗೆ ಅನುಗುಣವಾಗಿ ಎರಡೂ ಕ್ಷೇತ್ರಗಳ ಮೇಲೆ ನಿಗಾ ವಹಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ' ಎಂಬ ಅಂಶವನ್ನು ನ್ಯಾಯಪೀಠ ಗಮನಕ್ಕೆ ತಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭೆ ಉಪಚುನಾವಣೆ ಮುಗಿಯುವವರೆಗೆ ಗೃಹಲಕ್ಷ್ಮಿ, ಯುವನಿಧಿ, ಗೃಹ ಜ್ಯೋತಿ ಮತ್ತು ಅನ್ನಭಾಗ್ಯ ಯೋಜನೆಗಳ ಭಾಗವಾಗಿ ನಗದು ಬಿಡುಗಡೆ ಮಾಡದಂತೆ ತಡೆ ನೀಡಬೇಕು' ಎಂಬ ಮಧ್ಯಂತರ ಮನವಿ ಪುರಸ್ಕರಿಸಲು ನಿರಾಕರಿಸಿ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.



ಗೆಲುವಿನ ಖಾತೆ ತೆರೆದ ಸನ್

ಅಭಿಷೇಕ್–ಹೆಡ್ ಭರ್ಜರಿ ಜೊತೆಯಾಟ • ಕ್ಲಾಸೆನ್ ಅರ್ಧಶತಕ ನಿತೀಶ್ ಆಲ್‌ರೌಂಡ್ ಆಟ • ಕೋಲ್ಕತ್ತಕ್ಕೆ ಎರಡನೇ ಸೋಲು

ಕೋಲ್ಕತ್ತ (ಪಿಟಿಐ): ನಿತೀಶ್ ಕುಮಾರ್ ರೆಡ್ಡಿ (39 ರನ್; 17ಕ್ಕೆ2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಐಪಿಎಲ್‌ನ ಹಾಲಿ ಆವೃತ್ತಿಯಲ್ಲಿ ಗೆಲುವಿನ ಖಾತೆ ತೆರೆಯಿತು. ಗುರುವಾರ ನಡೆದ ಪಂದ್ಯದಲ್ಲಿ 65 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಈಡನ್ ಗಾರ್ಡನ್ಸ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಜಿಂಬಾಬ್ವೆ ವೇಗಿ ಬ್ಲೆಸಿಂಗ್ ಮುಝರಬಾನಿ (41ಕ್ಕೆ4) ಅವರ ಅಮೋಘ ಬೌಲಿಂಗ್ ನಡುವೆಯೂ ಸನ್‌ರೈಸರ್ಸ್ ಬ್ಯಾಟರ್‌ಗಳು ಅಬ್ಬರಿಸಿದರು. ಹೆನ್ರಿಚ್ ಕ್ಲಾಸೆನ್ (52;35ಎ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 226 ರನ್ ಗಳಿಸಿತು. ಇದು ಪ್ರಸಕ್ತ ಟೂರ್ನಿಯ ಅತಿ ದೊಡ್ಡ ಮೊತ್ತ ಎನಿಸಿತು.

ಕಠಿಣ ಗುರಿಯನ್ನು ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ಫಿನ್ ಅಲೆನ್ (28;7ಎ) ಭರ್ಜರಿ ಆರಂಭ ನೀಡಿದರು. ಡೇವಿಡ್ ಪೈನ್ ಹಾಕಿದ ಮೊದಲ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಸೇರಿದಂತೆ 24 ರನ್ ಸೂರೆಗೈದರು. ಆದರೆ ಎರಡನೇ ಓವರ್‌ನಲ್ಲೇ ಹರ್ಷ್ ದುಬೆ ಅವರಿಗೆ ಅಲೆನ್ ಕ್ಯಾಚ್ ಅಂಡ್ ಬೌಲ್ಡ್ ಆದರು.

ಸನ್‌ರೈಸರ್ಸ್ ಬೌಲರ್‌ಗಳ ಚುರುಕಿನ ದಾಳಿಯ ಮುಂದೆ ಬ್ಯಾಟರ್‌ಗಳು ಪರದಾಡಿದರು. ಈ ನಡುವೆ ಅಂಗಕ್ರಿಷ್ ರಘುವಂಶಿ (52;29ಎ, 4x6, 6x2) ಮತ್ತು ರಿಂಕು ಸಿಂಗ್ (35;25ಎ) ಹೋರಾಟ ತೋರಿದರೂ ಗೆಲುವಿನ ಗುರಿ ತುಂಬಾ ದೂರವಿತ್ತು. 16 ಓವರ್‌ಗಳಲ್ಲಿ 161 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಕೋಲ್ಕತ್ತ ತಂಡಕ್ಕೆ ಇದು ಸತತ ಎರಡನೇ ಸೋಲಾಗಿದೆ.



ಹೆನ್ರಿಚ್ ಕ್ಲಾಸೆನ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಜೊತೆಯಾಟ ಪಿಟಿಐ ಚಿತ್ರ

ಇದಕ್ಕೂ ಮುನ್ನ ಹೈದರಾಬಾದ್ ತಂಡಕ್ಕೆ ಟ್ರಾವಿಸ್ ಹೆಡ್ (46;21ಎ) ಮತ್ತು ಅಭಿಷೇಕ್ ಶರ್ಮಾ (48; 21ಎ) ಆರಂಭಿಕ ಜೊತೆಯಾಟದ ಮೂಲಕ ಗಟ್ಟಿ ಅಡಿಪಾಯ ಹಾಕಿದರು. ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 82 ರನ್ (34ಎ) ಸೇರಿಸಿದರು. ಈ ಬುನಾದಿಯ ಮೇಲೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಕ್ಲಾಸೆನ್ ಮತ್ತು ನಿತೀಶ್ ದೊಡ್ಡ ಮೊತ್ತ ಕಲೆಹಾಕಲು ನೆರವಾದರು.

ಅಭಿಷೇಕ್ ಮತ್ತು ಹೆಡ್ ಅವರು ಪ್ರತಿ ಓವರ್‌ಗೆ 15ರ ಸರಾಸರಿಯಲ್ಲಿ ರನ್ ಗಳಿಸಿದರು. ಇದರಿಂದಾಗಿ 5 ಓವರ್‌ಗಳಲ್ಲಿ 82 ರನ್‌ಗಳು ಹರಿದು ಬಂದವು. ಪವರ್‌ಪ್ಲೇ ಮುಗಿಯಲು ಇನ್ನೂ ನಾಲ್ಕು ಎಸೆತಗಳು ಬಾಕಿಯಿದ್ದಾಗ ಕಾರ್ತಿಕ್ ತ್ಯಾಗಿ ಎಸೆತದಲ್ಲಿ ಕ್ಯಾಮರಾನ್ ಗ್ರೀನ್‌ಗೆ ಕ್ಯಾಚಿತ್ತ ಹೆಡ್ ನಿರ್ಗಮಿಸಿದರು. ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ನಾಯಕ ಇಶಾನ್ ಕಿಶನ್ (14 ರನ್) ಅವರು ಅಭಿಷೇಕ್ ಜೊತೆಗೂಡಿ ಮೊತ್ತ ಹೆಚ್ಚಿಸಿದರು. ಎಂಟು ಓವರ್‌ಗಳಲ್ಲಿ 1 ವಿಕೆಟ್‌ಗೆ 110 ರನ್‌ಗಳು ಸೇರಿದವು.

ಆದರೆ ಈ ಹಂತದಲ್ಲಿ ಇದ್ದಕ್ಕಿದ್ದಂತೆ ಸನ್‌ರೈಸರ್ಸ್ ಇನಿಂಗ್ಸ್‌ನಲ್ಲಿ ಕುಸಿತ ಉಂಟಾಯಿತು. ನಾಟಕೀಯ ರೀತಿಯಲ್ಲಿ ಏಳು ರನ್‌ಗಳ ಅಂತರದಲ್ಲಿ 3 ವಿಕೆಟ್ ಪತನವಾದವು. ಜಿಂಬಾಬ್ವೆ ವೇಗಿ ಬ್ಲೆಸಿಂಗ್ ಮಿಂಚಿದರು. ಈ ಅವಕಾಶ ಬಳಸಿಕೊಳ್ಳಲು ಕೋಲ್ಕತ್ತ ತಂಡದ ಆರನೇ ಬೌಲರ್ ಆಗಿ ಕಣಕ್ಕಿಳಿದ ಅನುಕೂಲ್ ರಾಯ್ ಅವರು ಅನಿಕೇತ್ ವರ್ಮಾ (1 ರನ್) ವಿಕೆಟ್ ಗಳಿಸಿದರು.

ದಕ್ಷಿಣ ಆಫ್ರಿಕಾದ ಕ್ಲಾಸೆನ್ ಮತ್ತು ನಿತೀಶ್ ಕುಮಾರ್ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. 5ನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು. ಕೊನೆಯ ಹಂತದ ಓವರ್‌ನಲ್ಲಿ ಹೆಚ್ಚು ರನ್‌ಗಳು ದಾಖಲಾದವು.

ಸನ್‌ರೈಸರ್ಸ್ ತನ್ನ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸೋತಿತ್ತು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 8ಕ್ಕೆ 226 (20 ಓವರುಗಳಲ್ಲಿ)
ಹೆಡ್ ಸಿ ಗ್ರೀನ್ ಬಿ ತ್ಯಾಗಿ 46 (21ಎ, 4x6, 6x3)
ಶರ್ಮಾ ಸಿ ಚಕ್ರವರ್ತಿ ಬಿ ಮುಝರಾಬಾನಿ 48 (21ಎ, 4x4, 6x4)
ಇಶಾನ್ ಸಿ ರಿಂಕು ಬಿ ಮುಝರಾಬಾನಿ 14 (9ಎ, 4x3)
ಕ್ಲಾಸೆನ್ ಸಿ ರಮಣದೀಪ್ ಬಿ ಮುಝರಾಬಾನಿ 52 (35ಎ, 4x4, 6x1)
ಅನಿಕೇತ್ ಸಿ ರಿಂಕು ಬಿ ಅನುಕೂಲ್ 1 (4ಎ)
ನಿತೀಶ್ ಸಿ ಚಕ್ರವರ್ತಿ ಬಿ ವೈಭವ್ 39 (24ಎ, (21ಎ, 4x4, 6x1)
ಸಲೀಲ್ ಬಿ ವೈಭವ್ 0 (1ಎ)
ಹರ್ಷ್ ದುಬೆ ಔಟಾಗದೇ 9 (3ಎ, 4x2)
ಶಿವಾಂಗ್ ಸಿ ರಹಾನೆ ಬಿ ಮುಝರಾಬಾನಿ 4 (2ಎ, 4x1)
ಇತರೆ: 13 (ಲೆಗ್‌ಬೈ 4, ವೈಡ್ 9)
ವಿಕೆಟ್ ಪತನ: 1–82 (ಟ್ರಾವಿಸ್ ಹೆಡ್, 5.4), 2–111 (ಇಶಾನ್ ಕಿಶನ್, 8.2), 3–112 (ಅಭಿಷೇಕ್ ಶರ್ಮಾ, 8.4), 4–118 (ಅನಿಕೇತ್ ವರ್ಮಾ, 9.2), 5–200 (ನಿತೀಶ್ ಕುಮಾರ್ ರೆಡ್ಡಿ, 18.1), 6–200 (ಸಲೀಲ್ ಅರೋರ, 18.2), 7–222 (ಹೆನ್ರಿಚ್ ಕ್ಲಾಸೆನ್, 19.4), 8–226 (ಶಿವಾಂಗ್ ಕುಮಾರ್, 19.6)
ಬೌಲಿಂಗ್: ವೈಭವ್ ಅರೋರ 4–0–47–2; ಬ್ಲೆಸಿಂಗ್ ಮುಝರಾಬಾನಿ 4–0–41–4; ಸುನೀಲ್ ನಾರಾಯಣ್ 4–0–39–0; ವರುಣ್ ಚಕ್ರವರ್ತಿ 2–0–31–0; ಕಾರ್ತಿಕ್ ತ್ಯಾಗಿ 4–0–48–1; ಅನುಕೂಲ್ ರಾಯ್ 2–0–16–1


ಕೋಲ್ಕತ್ತ ನೈಟ್ ರೈಡರ್ಸ್: 161 (16 ಓವರ್‌ಗಳಲ್ಲಿ)
ಫಿನ್ ಸಿ ಮತ್ತು ಬಿ ಹರ್ಷ್ 28 (7ಎ, 4X2, 6X2)
ರಹಾನೆ ಸಿ ಇಶಾನ್ ಬಿ ಜಯದೇವ್ 8 (10ಎ)
ರಘುವಂಶಿ ರನೌಟ್ (ಮಾಲಿಂಗ/ಶಿವಾಂಗ್) 52 (29ಎ, 4X6, 6X2)
ಗ್ರೀನ್ ರನೌಟ್ (ಮಾಲಿಂಗ) 2 (2ಎ)
ರಿಂಕು ಸಿ ಜಯದೇವ್ ಬಿ ನಿತೀಶ್ 35 (25ಎ, 4x4, 6x1)
ಅನುಕೂಲ್ ಸಿ ಮತ್ತು ಬಿ ನಿತೀಶ್ ಕುಮಾರ್ 0 (2ಎ)
ರಮನ್‌ದೀಪ್ ಸಿ ಜಯದೇವ್ ಬಿ ಮಾಲಿಂಗ 10 (9ಎ, 4x1)
ಸುನಿಲ್ ಸಿ ವರ್ಮಾ ಬಿ ಮಾಲಿಂಗ 12 (4ಎ, 6x2)
ಕಾರ್ತಿಕ್ ಸಿ ಕಿಶನ್ ಬಿ ಜಯದೇವ್ 5 (5ಎ, 4x1)
ವೈಭವ್ ಔಟಾಗದೇ 1 (2ಎ)
ವರುಣ್ ಬಿ ಜಯದೇವ್ 0 (1ಎ)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1-30 (ಫಿನ್ ಅಲೆನ್, 1.3), 2-67 (ಅಜಿಂಕ್ಯ ರಹಾನೆ, 4.6), 3-74 (ಕ್ಯಾಮರಾನ್ ಗ್ರೀನ್, 5.6), 4-120 (ಅಂಗ್‌ಕ್ರಿಶ್ ರಘುವಂಶಿ, 10.6), 5-120 (ಅನುಕೂಲ್ ರಾಯ್, 11.2), 6-139 (ರಿಂಕು ಸಿಂಗ್, 13.4), 7-154 (ಸುನಿಲ್ ನಾರಾಯಣ್, 14.3), 8-159 (ರಮಣದೀಪ್ ಸಿಂಗ್, 14.6), 9-161 (ಕಾರ್ತಿಕ್ ತ್ಯಾಗಿ, 15.5), 10-161 (ವರುಣ್ ಚಕ್ರವರ್ತಿ, 15.6)
ಬೌಲಿಂಗ್: ಡೇವಿಡ್ ಪೈನ್ 2–0–35–0, ಹರ್ಷ್ ದುಬೆ 2–0–17–1, ಅಭಿಷೇಕ್ ಶರ್ಮಾ 1–0–15–0, ಜಯದೇವ್ ಉನದ್ಕತ್ 3–0–21–3, ಇಶಾನ್ ಮಾಲಿಂಗ 2–0–14–2, ಶಿವಾಂಗ್ ಕುಮಾರ್ 4–0–41–0, ನಿತೀಶ್ ಕುಮಾರ್ ರೆಡ್ಡಿ 2–0–17–2
ಪಂದ್ಯದ ಆಟಗಾರ: ನಿತೀಶ್ ಕುಮಾರ್ ರೆಡ್ಡಿ

ಮುಂಬೈ ಇಂಡಿಯನ್ಸ್ ಸೇರಿಕೊಂಡ ಮಿಚೆಲ್



ನವದೆಹಲಿ (ಪಿಟಿಐ): ನ್ಯೂಜಿಲೆಂಡ್ ಟಿ20 ತಂಡದ ನಾಯಕ ಮಿಚೆಲ್ ಸ್ಯಾಂಟ್ನರ್ ಅವರು ಗುರುವಾರ ಮುಂಬೈ ಇಂಡಿಯನ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

ಮುಂಬೈ ತಂಡವು ಭಾನುವಾರ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.



ಚಂದ್ರನ ಸುತ್ತ ಸುತ್ತುವ ನಾಲ್ಕು ಗಗನಯಾತ್ರಿಗಳನ್ನು ಹೊತ್ತೊಯ್ಯುವ ಆರ್ಟೆಮಿಸ್ 2 ಮಿಷನ್!

ಪಂಜಾಬ್ ಕಿಂಗ್ಸ್–ಸೂಪರ್ ಕಿಂಗ್ಸ್ ಮುಖಾಮುಖಿ ಇಂದು

ಚೆನ್ನೈಗೆ ಮೊದಲ ಜಯದ ಹಂಬಲ

ಚೆನ್ನೈ (ಪಿಟಿಐ): ಐದು ಸಲದ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ತವರಿನಂಗಳದಲ್ಲಿ ಶುಕ್ರವಾರ ಪಂಜಾಬ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ.

ಗುವಾಹಟಿಯಲ್ಲಿ ಈಚೆಗೆ ನಡೆದ ಪಂದ್ಯದಲ್ಲಿ ಚೆನ್ನೈ ತಂಡವು ರಾಜಸ್ಥಾನ ರಾಯಲ್ಸ್ ಎದುರು ಸೋತಿತ್ತು. ಅದರಿಂದಾಗಿ ಎರಡನೇ ಪಂದ್ಯದಲ್ಲಿ ತನ್ನ ಎಲ್ಲ ವಿಭಾಗಗಳಲ್ಲಿಯೂ ಬಲವರ್ಧನೆ ಮಾಡಿಕೊಳ್ಳುವ ಅಗತ್ಯ ಇದೆ.

ಚೆನ್ನೈ ತಂಡದಲ್ಲಿ ಈ ಸಲ ಯುವ ಆಟಗಾರರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಋತುರಾಜ್ ಗಾಯಕವಾಡ ನಾಯಕತ್ವದ ತಂಡದಲ್ಲಿ ಈ ವರ್ಷ ಸ್ಥಾನ ಗಳಿಸಿಕೊಂಡಿರುವ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್, ಶಿವಂ ದುಬೆ ಅವರು ಹೆಚ್ಚು ಅನುಭವ ಇರುವ ಆಟಗಾರರು. ಆದರೆ ಮೊದಲ ಪಂದ್ಯದಲ್ಲಿ ಅವರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು.

ಮಹೇಂದ್ರಸಿಂಗ್ ಧೋನಿ ಅವರು ಮೀನಖಂಡದ ಸ್ನಾಯುಸೆಳೆತದಿಂದಾಗಿ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಗುವಾಹಟಿಗೆ ತಂಡದೊಂದಿಗೆ ತೆರಳಿರಲಿಲ್ಲ. ಈ ಪಂದ್ಯದಲ್ಲಿಯೂ ಅವರು ಆಡುವುದಿಲ್ಲ.


ಉಳಿದಂತೆ; ಯುವ ಆಟಗಾರ ಆಯುಷ್ ಮ್ಹಾತ್ರೆ, ಸರ್ಫರಾಜ್ ಖಾನ್, ಡಿವಾಲ್ಡ್ ಬ್ರೆವಿಸ್, ಕಾರ್ತಿಕ್ ಶರ್ಮಾ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಆದರೆ ಅವರೆಲ್ಲ ತಮ್ಮ ಲಯಕ್ಕೆ ಮರಳಬೇಕು. ಬೌಲಿಂಗ್ ವಿಭಾಗದಲ್ಲಿ ಅನ್ಷುಲ್ ಕಂಬೋಜ್ ಅವರು ಮಾತ್ರ ಕಳೆದ ಪಂದ್ಯದಲ್ಲಿ ಎರಡು ವಿಕೆಟ್ ಗಳಿಸಿದ್ದರು. ಮ್ಯಾಟ್ ಹೆನ್ರಿ, ಮ್ಯಾಥ್ಯೂ ಶಾರ್ಟ್ ಅವರು ವಿಕೆಟ್ ಪಡೆದಿರಲಿಲ್ಲ. ಆದರೆ ಪಂಜಾಬ್ ತಂಡದ ಬ್ಯಾಟಿಂಗ್ ಪಡೆ ಚೆನ್ನಾಗಿದೆ. ಅದನ್ನು ಕಟ್ಟಿಹಾಕಲು ಬೌಲರ್‌ಗಳು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಬೇಕಿದೆ.

ತಂಡಗಳ ಬಲಾಬಲ	
ಒಟ್ಟು ಪಂದ್ಯ	32
ಚೆನ್ನೈ ಜಯ	16
ಪಂಜಾಬ್ ಜಯ	16

ಅಲ್ಲದೇ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಭರ್ಜರಿ ಜಯ ಸಾಧಿಸಿತ್ತು. ಶ್ರೇಯಸ್ ಅಯ್ಯರ್ ನಾಯಕತ್ವದ ತಂಡವು ಆಲ್‌ರೌಂಡ್ ಆಟವಾಡಿತ್ತು. 163 ರನ್‌ಗಳ ಗುರಿ ಬೆನ್ನಟ್ಟಿದ್ದ ಪಂಜಾಬ್ ತಂಡವು ಒಂದು ಹಂತದಲ್ಲಿ ಸೋಲಿನ ಆತಂಕ ಎದುರಿಸಿತ್ತು. ಆಗ ಕೂಪರ್ ಕಾನೊಲಿ ಅವರು ಅಮೋಘ ಬ್ಯಾಟಿಂಗ್ ಮೂಲಕ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಇದರಿಂದಾಗಿ ಶ್ರೇಯಸ್ ಬಳಗವು ಭರ್ತಿ ಆತ್ಮವಿಶ್ವಾಸದಲ್ಲಿದೆ.




ಗುರುವಾರ ಅಭ್ಯಾಸದಲ್ಲಿ ಕಾಣಿಸಿಕೊಂಡ ಮಹೇಂದ್ರ ಸಿಂಗ್ ಧೋನಿ



ಶ್ರೇಯಸ್ ಅಯ್ಯರ್

ಪಂಜಾಬ್ ಬೌಲಿಂಗ್ ವಿಭಾಗವು ಚೆನ್ನಾಗಿದೆ. ಕನ್ನಡಿಗ ವೈಶಾಖ ವಿಜಯಕುಮಾರ್ ಹಾಗೂ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅಮೋಘ ಲಯದಲ್ಲಿದ್ದಾರೆ. ಆದರೆ ಅರ್ಷದೀಪ್ ಸಿಂಗ್ ಅವರು ವೈಡ್ ಮತ್ತು ನೋಬಾಲ್ ಹಾಕುವುದನ್ನು ತಪ್ಪಿಸಿಕೊಂಡು ಬಿಗಿ ದಾಳಿ ನಡೆಸಿದರೆ ಎದುರಾಳಿ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿಹಾಕಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್



ಕರ್ನಾಟಕದ ರೀತುಶ್ರೀ

ಎರಡನೇ ಚಿನ್ನ ಗೆದ್ದ ರೀತುಶ್ರೀ, ನಾಗಿಣಿ

ರಾಯಪುರ (ಪಿಟಿಐ): ಕರ್ನಾಟಕದ ರೀತುಶ್ರೀ ಮತ್ತು ನಾಗಿಣಿ ಅವರು ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಗುರುವಾರ ತಮ್ಮ ಎರಡನೇ ಚಿನ್ನ ಗೆದ್ದುಕೊಂಡರು. ಆತಿಥೇಯ ಛತ್ತೀಸಗಢ ತಂಡವು ಫೈನಲ್‌ನಲ್ಲಿ 1–0 ಗೋಲಿನಿಂದ ಜಾರ್ಖಂಡ್ ತಂಡವನ್ನು ಸೋಲಿಸಿ ಮಹಿಳೆಯರ ವಿಭಾಗದ ಫುಟ್‌ಬಾಲ್ ಚಿನ್ನ ಗೆದ್ದುಕೊಂಡಿತು.

ಛತ್ತೀಸಗಢ ತಂಡದಲ್ಲಿದ್ದ ಏಕೈಕ ಅಂತರರಾಷ್ಟ್ರೀಯ ಆಟಗಾರ್ತಿ ಹಾಗೂ ನಾಯಕಿ ಕಿರಣ್ ಪಿಸ್ದಾ ಗಳಿಸಿದ ಗೋಲು ನಿರ್ಣಾಯಕವಾಯಿತು.

ಜಗದಾಳಪುರದ ಕ್ರೀಡಾ ಪರಿಸರ್ ಸಂಕೀರ್ಣದಲ್ಲಿ ನಡೆಯುತ್ತಿರುವ ಅಥ್ಲೆಟಿಕ್ ಕೂಟದಲ್ಲಿ ಕರ್ನಾಟಕದ ರೀತುಶ್ರೀ 200 ಮೀ. ಓಟವನ್ನು 25.87 ಸೆ.ಗಳಲ್ಲಿ ಕ್ರಮಿಸಿ ಚಿನ್ನ ಗೆದ್ದರು. ಈ ಮೊದಲು ಅವರು 400 ಮೀ. ಓಟದಲ್ಲಿ ವಿಜಯಿಯಾಗಿದ್ದರು.

ಬುಧವಾರ 800 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದ ನಾಗಿಣಿ 1,500 ಮೀ. ಓಟದಲ್ಲೂ ಮೊದಲಿಗರಾದರು. ಅವರು 4ನಿ.43.87 ಸೆ.ಗಳಲ್ಲಿ ಗುರಿತಲುಪಿದರು. ಕರ್ನಾಟಕ ಒಟ್ಟು 23 ಚಿನ್ನ ಗೆದ್ದಂತಾಗಿದೆ. ಜೊತೆಗೆ 8 ಬೆಳ್ಳಿ, 7 ಕಂಚಿನ ಪದಕ ಸೇರಿದಂತೆ ಒಟ್ಟು 38 ಪದಕಗಳನ್ನು ಬಾಚಿ ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಶುಕ್ರವಾರ ಈ ಹತ್ತು ದಿನಗಳ ಕ್ರೀಡಾಕೂಟಕ್ಕೆ ತೆರೆ ಬೀಳಲಿದೆ.

ಅಥ್ಲೆಟಿಕ್ಸ್‌ನಲ್ಲಿ ಹೆಚ್ಚಿನ ಪದಕ ಬಾಚಿರುವ ಒಡಿಶಾ ತಂಡ ಎರಡನೇ ಸ್ಥಾನದಲ್ಲಿದ್ದು, 20 ಚಿನ್ನ, 13 ಬೆಳ್ಳಿ, 21 ಕಂಚಿನ ಪದಕ ಗಳಿಸಿ ಕರ್ನಾಟಕಕ್ಕೆ ಪೈಪೋಟಿ ಒಡ್ಡಿದೆ.

ಜಪಾನ್‌ಗೆ ಮಣಿದ ಭಾರತ ವನಿತೆಯರು

ಥಾಯ್ಲೆಂಡ್ (ಪಿಟಿಐ): ಭಾರತ ತಂಡವು ಇಲ್ಲಿನ ಥಮ್ಮಸತ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ 20 ವರ್ಷದೊಳಗಿನ ಮಹಿಳಾ ಏಷ್ಯನ್ ಕಪ್‌ನ ತನ್ನ ಮೊದಲ ಪಂದ್ಯದಲ್ಲಿ 0–6 ಅಂತರದಿಂದ ಬಲಿಷ್ಠ ಜಪಾನ್ ತಂಡಕ್ಕೆ ಸೋತಿತು.

20 ವರ್ಷಗಳ ನಂತರ ಮೊದಲ ಬಾರಿಗೆ ಏಷ್ಯನ್ ಕಪ್ ಟೂರ್ನಿ ಆಡಿದ ಭಾರತ ವನಿತೆಯರಿಗೆ ಆರು ಬಾರಿಯ ಚಾಂಪಿಯನ್ ತಂಡವು ಯಾವುದೇ ಹಂತದಲ್ಲಿ ಗೋಲು ದಾಖಲಿಸಲು ಅವಕಾಶ ನೀಡದೆ ಪಾರಮ್ಯ ಮೆರೆಯಿತು.

ಭಾರತ ತಂಡವು ಏಪ್ರಿಲ್ 5ರಂದು ಆಸ್ಟ್ರೇಲಿಯಾ ವಿರುದ್ಧ ಮತ್ತು 8ರಂದು ತೈವಾನ್ ವಿರುದ್ಧ ಆಡಲಿದೆ.

4ನೇ ಕ್ರಮಾಂಕದಲ್ಲಿ ಸಮೀರ್ ಗಮ್ಮತ್ತು



ಸಮೀರ್ ರಿಜ್ವಿ

ಲಖನೌ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ಯುವ ಬ್ಯಾಟರ್ ಸಮೀರ್ ರಿಜ್ವಿ ತಮಗೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು.

ಬುಧವಾರ ಏಕನಾ ಕ್ರೀಡಾಂಗಣದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರಿನ ಪಂದ್ಯದಲ್ಲಿ ‘ಇಂಪ್ಯಾಕ್ಟ್ ಪ್ಲೇಯರ್’ ಆಗಿ ನಾಲ್ಕನೇ ಕ್ರಮಾಂಕದಲ್ಲಿ ಸಮೀರ್ ಬ್ಯಾಟಿಂಗ್ ಮಾಡಿದರು. 142 ರನ್ ಗುರಿಯನ್ನು ಬೆನ್ನಟ್ಟಿದ್ದ ತಂಡವು 26 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಈ ಸಂದರ್ಭದಲ್ಲಿ ಸಮೀರ್ (ಅಜೇಯ 70, 47ಎಸೆತ) ಅವರು ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 39; 32ಎ) ಅವರೊಂದಿಗೆ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 119 ರನ್ ಸೇರಿಸಿದರು. ತಂಡವು 17.1 ಓವರ್‌ಗಳಲ್ಲಿ ಗುರಿ ಮುಟ್ಟಿತು.

‘ನಾನು ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬೇಕಾಗುತ್ತದೆ ಎಂದು ಪಂದ್ಯಕ್ಕೂ ಮುನ್ನವೇ ಕೋಚ್ ಹೇಳಿದ್ದರು. ನಾನು ಉತ್ತರಪ್ರದೇಶ ತಂಡ ಅಥವಾ ಯುಪಿ ಟಿ20 ಲೀಗ್‌ನಲ್ಲಿ ಆಡುವಾಗ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತೇನೆ. ಆದ್ದರಿಂದ ನನಗೆ ವಿಶ್ವಾಸವಿತ್ತು. ಇದು ನನಗೆ ಲಭಿಸಿದ ಅತಿ ದೊಡ್ಡ ಅವಕಾಶವಾಗಿತ್ತು. ಅದನ್ನು ಸಮರ್ಥವಾಗಿ ಬಳಸಿಕೊಂಡೆ’ ಎಂದು 22 ವರ್ಷದ ಸಮೀರ್ ಪಂದ್ಯದ ನಂತರ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

‘ಈ ಪಿಚ್‌ನಲ್ಲಿ ಬ್ಯಾಟಿಂಗ್ ಮಾಡುವುದು ಸುಲಭವಾಗಿರಲಿಲ್ಲ. ಚೆಂಡು ಬಹಳಷ್ಟು ಸ್ವಿಂಗ್ ಆಗುತ್ತಿತ್ತು. ಅದರಿಂದಾಗಿ ವೇಗಿಗಳಿಗಿಂತ ಸ್ಪಿನ್ ಬೌಲರ್‌ಗಳ ಎಸೆತಗಳನ್ನು ದಂಡಿಸಲು ಹೆಚ್ಚು ಗಮನ ನೀಡಿದೆ’ ಎಂದರು.

ಈ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ 6 ವಿಕೆಟ್‌ಗಳಿಂದ ಜಯಿಸಿತು. ಸಮೀರ್ ಅವರು ಪಂದ್ಯದ ಅಟಗಾರ ಗೌರವಕ್ಕೆ ಪಾತ್ರರಾದರು.

ನುವಾನ್ ತುಷಾರ ಕೋರ್ಟ್ ಮೊರೆ



ಕೊಲಂಬೊ (ಪಿಟಿಐ): ಐಪಿಎಲ್‌ನಲ್ಲಿ ಆಡಲು ತಮಗೆ ಅವಕಾಶ ನೀಡುವಂತೆ ಕೋರಿ ಶ್ರೀಲಂಕಾ ತಂಡದ ವೇಗದ ಬೌಲರ್ ನುವಾನ್ ತುಷಾರ ಅವರು ಗುರುವಾರ ಇಲ್ಲಿನ ನ್ಯಾಯಾಲಯದ ಮೊರೆಹೋಗಿದ್ದಾರೆ. ಫಿಟ್ನೆಸ್ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗಿಲ್ಲ ಎಂದು ಹೇಳಿ ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಅವರಿಗೆ ನಿರಾಕ್ಷೇಪಣಾ ಪತ್ರ ನೀಡಲು ನಿರಾಕರಿಸಿತ್ತು.

ಐಪಿಎಲ್‌ನಲ್ಲಿ ತುಷಾರ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ. ತಮಗೆ ನಿರಾಕ್ಷೇಪಣಾ ಪತ್ರ ನೀಡುವಂತೆ ಶ್ರೀಲಂಕಾ ಕ್ರಿಕೆಟ್‌ಗೆ ನಿರ್ದೇಶನ ನೀಡಬೇಕೆಂದು ಅವರು ಕೊಲಂಬೊದ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯವು ಇದೇ ತಿಂಗಳ 9ಕ್ಕೆ ನಿಗದಿ ಮಾಡಿದೆ.

ಶ್ರೀಲಂಕಾ ಕ್ರಿಕೆಟ್ ಜೊತೆ ತಮ್ಮ ಗುತ್ತಿಗೆ ಒಪ್ಪಂದ ಮಾರ್ಚ್ 31ಕ್ಕೆ ಮುಕ್ತಾಯಗೊಂಡಿದೆ. ಅದನ್ನು ಮುಂದುವರಿಸುವ ಇರಾದೆ ತಮಗೆ ಇಲ್ಲ ಎಂದು ತಿಳಿಸಿರುವುದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಅವರು 2022 ರಿಂದ ಇದುವರೆಗೆ 30 ಟಿ20 ಅಂತರ ರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

ತುಷಾರ ಅವರನ್ನು ಆರ್‌ಸಿಬಿ 2025ರ ಬಿಡ್‌ನಲ್ಲಿ ₹1.6 ಕೋಟಿ ಮೊತ್ತಕ್ಕೆ ತನ್ನ ಪಾಲು ಮಾಡಿಕೊಂಡಿತ್ತು.